18 April 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಬದುಕಿನಲ್ಲಿ ನೆಮ್ಮದಿ ಇರದಿದ್ದರೆ ನಿಧಿ ಸಿಕ್ಕರೂ ಸಮಾಧಾನ ಸಿಗದು! ಹೀಗಾಗಿ ನಿಧಿಗಿಂತಲೂ ನೆಮ್ಮದಿಯೇ ಜೀವನಕ್ಕೆ ಅತಿ ಮುಖ್ಯ!

-ಸ್ನೇಹಾ ಆನಂದ್

info.varthaman@gmail.com



ಇಂದು ಮೈಸೂರಿನಲ್ಲಿ ಜನರೊಂದಿಗೆ ಜನತಾ ದಳ ಪುಟ ಸಂ. 2



ಕುಡಿಯುವ ನೀರಿಗೆ ಸಮಸ್ಯೆ ಆಗದಂತೆ ಅಗತ್ಯ ಕ್ರಮ ಪುಟ ಸಂ. 3



ಬೇಸಿಗೆ ಹಿನ್ನಲೆ: ಹಲವು ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಸಾಧ್ಯತೆ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 149 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಅಗ್ನಿಪರೀಕ್ಷೆಯಲ್ಲಿ ಎನ್‌ಡಿಎಗೆ ಮುಖಭಂಗ

## ಲೋಕಸಭೆಯಲ್ಲಿ ಮಸೂದೆ ಪರ 298, ವಿರುದ್ಧ 230 ಸಂಸದರ ಮತ । ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ । ಕ್ಷೇತ್ರ ಪುನರ್ ವಿಂಗಡಣೆ ಮಸೂದೆಗೆ ಸೋಲು! । ಎನ್‌ಡಿಎ ಮಿತ್ರ ಕೂಟಕ್ಕೆ ಇಂಡಿ ಕೂಟ ತಿರುಗೇಟು

**ನವದೆಹಲಿ:** ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆಯಲ್ಲಿ ಸೋಲಾಗಿದೆ. ಇದರಿಂದ ಎನ್ ಡಿ ಎ ಮಿತ್ರ ಪಕ್ಷಗಳಿಗೆ ಮುಖಭಂಗವಾಗಿದೆ.

ಮಸೂದೆಗಳ ಪರವಾಗಿ 298 ಸದಸ್ಯರು ಮತ ಚಲಾಯಿಸಿದ್ದರೆ, ಮಸೂದೆಗಳ ವಿರುದ್ಧವಾಗಿ 230 ಸದಸ್ಯರು ಮತ ಚಲಾಯಿಸಿದ್ದಾರೆ. ಒಟ್ಟಾರೆ 528 ಸದಸ್ಯರು ಮತ ಚಲಾಯಿಸಿದ್ದರು. ಮಸೂದೆಗಳು ಅಂಗೀಕಾರಗೊಳ್ಳಲು 352 ಸದಸ್ಯರ ಬೆಂಬಲ ಬೇಕಿತ್ತು. ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆ ಮಸೂದೆಗಳು ಸೇರಿದಂತೆ ಸಂಸತ್ತಿನಲ್ಲಿ ಗುರುವಾರ ಪರಿಚಯಿಸಲಾದ 3 ಪ್ರಮುಖ ಮಸೂದೆಗಳ ಮೇಲೆ ಇಂದು ಲೋಕಸಭೆಯಲ್ಲಿ ಮತದಾನ ನಡೆಯಿತು. ಕೇಂದ್ರ ಸರ್ಕಾರದ ಮಹತ್ವಕಾಂಕ್ಷಿಯ ವಿಧೇಯಕವನ್ನು ಇಂಡಿ ಕೂಟ ಸೋಲಿಸಿದೆ.

ಐತಿಹಾಸಿಕ ಮಹಿಳಾ ಮೀಸಲಾತಿ ಮಸೂದೆ ಸೇರಿದಂತೆ 3 ಮಸೂದೆಗಳಿಗೆ ಲೋಕಸಭೆಯಲ್ಲಿ ಸೋಲಾಗಿದೆ. ಮಸೂದೆಗಳ ಪರವಾಗಿ 298 ಸದಸ್ಯರು ಮತ ಚಲಾಯಿಸಿದರು. ಮಸೂದೆಗಳ ವಿರುದ್ಧವಾಗಿ 230 ಸದಸ್ಯರು ಮತ ಚಲಾಯಿಸಿದ್ದಾರೆ.

ಲೋಕಸಭೆಯ ಒಟ್ಟು 528 ಸದಸ್ಯರು ಮತ ಚಲಾಯಿಸಿದ್ದರು. ಮಸೂದೆಗಳು ಅಂಗೀಕಾರಗೊಳ್ಳಲು 352 ಸದಸ್ಯರ ಬೆಂಬಲ ಬೇಕಿತ್ತು. ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆ ಮಸೂದೆಗಳು ಸೇರಿದಂತೆ ಸಂಸತ್ತಿನಲ್ಲಿ ಗುರುವಾರ ಪರಿಚಯಿಸಲಾದ 3 ಪ್ರಮುಖ ಮಸೂದೆಗಳ ಮೇಲೆ ಶುಕ್ರವಾರ ಪುಟ 2ಕ್ಕೆ





## ನನಗೂ, ಮೋದಿಗೂ ಹೆಂಡತಿ ಚಿಂತೆ ಇಲ್ಲ: ರಾಹುಲ್



ನವದೆಹಲಿ: ನನಗೂ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೂ ಮನೆಯಲ್ಲಿ ಹೆಂಡತಿ ಚಿಂತೆ ಇಲ್ಲ. ಹಾಗಾಗಿ ಮಹಿಳಾ ಮೀಸಲಾತಿ ಮಸೂದೆ ಬಗ್ಗೆ ನಾವಿಬ್ಬರೂ ನಿರಾತಂಕವಾಗಿ ಮಾತನಾಡಬಹುದು ಎಂದು ಲೋಕಸಭೆಯಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಹಾಸ್ಯ ಮಾಡಿದರು. ಸಂಸದರು ರಾಹುಲ್ ಮಾತಿಗೆ ನಗೆಗಡಲಲ್ಲಿ ತೇಲಿದರು.

ಲೋಕಸಭೆಯ ವಿಶೇಷ ಸಂಸತ್ ಅಧಿವೇಶನದಲ್ಲಿ ನಡೆದ ಮಹಿಳಾ ಮೀಸಲಾತಿ ಮಸೂದೆ ಕುರಿತ ಚರ್ಚೆ ವೇಳೆ ಶುಕ್ರವಾರ ಅವರು ಮಾತನಾಡಿದರು. ಮಹಿಳೆಯರು ಕೇಂದ್ರ ಶಕ್ತಿ. ನಮ್ಮ ರಾಷ್ಟ್ರೀಯ ಪರಿಕಲ್ಪನೆಯಲ್ಲಿ ರಾಷ್ಟ್ರದ ದೃಷ್ಟಿಕೋನದಲ್ಲಿ ಒಂದು ಪ್ರೇರಕ ಶಕ್ತಿ. ಈ ಸದನದಲ್ಲಿರುವ ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಮಹಿಳೆಯರಿಂದ ಪ್ರಭಾವಿತರಾಗಿದ್ದಾರೆ. ತಾಯಿ, ಸಹೋದರಿ ಅಥವಾ ಹೆಂಡತಿ ಅಂತಹ ಸಂಬಂಧಗಳ ರೂಪದಲ್ಲಿ ಪ್ರಭಾವ ಹೊಂದಿದ್ದಾರೆ. ಆದರೆ ನನಗೆ ಮತ್ತು ಮೋದಿ ಅವರಿಗೆ ಪತ್ನಿಯ ಸಮಸ್ಯೆ ಇಲ್ಲ. ನಮಗೆ ತಾಯಂದಿರು, ಸೋದರಿಯರು ಇದ್ದಾರೆ ಎಂದು ಹೇಳಿದರು.

ನನಗೆ ಕಳೆದ 20 ವರ್ಷದ ರಾಜಕೀಯ ಜೀವನದಲ್ಲಿ ಮಾಡಲಾಗದ್ದನ್ನು ನನ್ನ ಸಹೋದರಿ 5 ನಿಮಿಷದಲ್ಲಿ ಸಾಧಿಸಿದ್ದನ್ನ ನಾನು ನೋಡಿದೆ. ಅದು ಅಮಿತ್ ಶಾ ಮುಖದಲ್ಲಿ ನಗು ತರಿಸಲು ಆಕೆಗೆ ಸಾಧ್ಯವಾಗಿದ್ದು ಎಂದು ಮತ್ತೊಂದು ಹಾಸ್ಯ ಚಟಾಕಿ ಹಾರಿಸಿದರು.

ಮಹಿಳಾ ಮೀಸಲಾತಿ ಬೆಂಬಲಿಸಿ ಮಾತನಾಡಿದ ಅವರು, ಪುಟ 2ಕ್ಕೆ



# ‘ತಲೆದಂಡ’ಕ್ಕೆ ದೆಹಲಿ ನಾಯಕರ ಸೂಚನೆ

## ಮುಸ್ಲಿಂ ನಾಯಕರ ವಿರುದ್ಧ ಕ್ರಮದ ಕುರಿತು ಡಿಕೆಶಿ ಸ್ಪಷ್ಟನೆ

**ಬೆಂಗಳೂರು:** ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರ ವಿರುದ್ಧ ದೆಹಲಿ ನಾಯಕರ ಸೂಚನೆ ಮೇರೆಗೆ ಕ್ರಮ ತೆಗೆದುಕೊಳ್ಳಲಾಗಿದೆ. ಇದರಲ್ಲಿ ನನ್ನ ವೈಯಕ್ತಿಕ ವಿಚಾರವಿಲ್ಲ ಎಂದು ಅಲ್ಪಸಂಖ್ಯಾತ ನಾಯಕರ ವಿರುದ್ಧ ಕೈಗೊಂಡಿರುವ ಕ್ರಮವನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಸಮರ್ಥಿಸಿಕೊಂಡಿದ್ದಾರೆ.

ನಗರದಲ್ಲಿ ಮಾಧ್ಯಮಗಳ ಜೊತೆ ಶುಕ್ರವಾರ ಮಾತನಾಡಿದ ಡಿಕೆಶಿ, ಇದರಲ್ಲಿ ನನ್ನ ವೈಯಕ್ತಿಕ ವಿಚಾರ ಯಾವುದೂ ಇಲ್ಲ. ಎಲ್ಲವೂ ಪಕ್ಷದ ನಿರ್ಧಾರ. ಪಕ್ಷಕ್ಕೆ ತನ್ನದೇ ಆದ ವರದಿ ಇದೆ. ದೆಹಲಿ ನಾಯಕರ ಸೂಚನೆ, ಸಲಹೆ ಮೇರೆಗೆ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾವು ಮಾರ್ಗದರ್ಶನ ಮಾಡಬೇಕಾಗುತ್ತದೆ ಎಂದು ಹೇಳಿದರು.

ಎಲ್ಲರೂ ನನ್ನ ಮೇಲೆಯೇ ಹೇಳಬಹುದು. ಆದರೆ, ಹೇಳಿದರೂ ಚಿಂತೆ ಇಲ್ಲ ನನಗೆ. ಪಕ್ಷದ ಶಿಸ್ತಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ನಮ್ಮ ಪಕ್ಷ ಇರೋದೇ ಪರಿಶಿಷ್ಟ ಜಾತಿ, ಪಂಗಡ, ಅಲ್ಪಸಂಖ್ಯಾತ, ಅಹಿಂದ ಸಮುದಾಯದ ಪರ. ಎಲ್ಲಾ ವರ್ಗಕ್ಕೆ ನ್ಯಾಯ ಕೋಡೋಕೆ ಇರೋದೇ ಕಾಂಗ್ರೆಸ್ ಪಕ್ಷ ಎಂದು ತಿಳಿಸಿದರು.

ಸತೀಶ್ ... ಜಾರಕಿ ಪುಟ 2ಕ್ಕೆ

### ಸಿದ್ದು, ಡಿಕೆಶಿ ಪ್ರತ್ಯೇಕ ಗುಂಪಿಲ್ಲ!

ಬೆಂಗಳೂರು: ನಮ್ಮಲ್ಲಿ ಸಿದ್ದರಾಮಯ್ಯ ಗುಂಪು, ಡಿಕೆಶಿ ಗುಂಪು ಎಂದು ಯಾವುದೂ ಇಲ್ಲ. ನಾವು 146 ಶಾಸಕರು ಒಂದೇ ಗುಂಪು. ನಾನು, ಸಿಎಂ ಕೂತು ಎಷ್ಟು ಮಾತಾಡ್ತೇವೆ ಅಂತಾ ನಿಮಗೇನು ಗೊತ್ತು. ದಿನವೂ ಕುಳಿತುಕೊಳ್ಳುತ್ತೇವೆ. ದಿನಾ ಕೂಡ ಮಾತಾಡುತ್ತೇವೆ. ಎಲ್ಲಿ ಅವರೇನು ಸಿದ್ದರಾಮಯ್ಯ ಅವರ ಗುಂಪು ಅಂತ ಬೋರ್ಡ್ ಹಾಕಿಕೊಂಡಿದ್ದಾರಾ? ನನ್ನ ಗುಂಪು ಅಂತ ನಾನು ಬೋರ್ಡ್ ಹಾಕಿಕೊಂಡಿದ್ದೀನಾ? 140 ಶಾಸಕರು ಕೂಡ ನನ್ನ ಮತ್ತು ಸಿಎಂ ಪರ ಗುಂಪೇ. ಯಾವ ಗುಂಪು, ಬೋರ್ಡ್ ಇಲ್ಲ. ಯಾವ ಸ್ಟೇಟ್ಮೆಂಟ್ ಇಲ್ಲ. ಒಂದೇ ಗುಂಪು, ಅದು ಕಾಂಗ್ರೆಸ್ ಗುಂಪು ಎಂದು ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.



### ಶಾಸಕ ಸ್ಥಾನ ರದ್ದು

**ಬೆಂಗಳೂರು:** ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ವಿನಯ್ ಕುಲಕರ್ಣಿ ಅವರ ಶಾಸಕ ಸ್ಥಾನ ರದ್ದಾಗಿದೆ. ಶಾಸಕ ಸೇರಿದಂತೆ 16 ಮಂದಿಯನ್ನು ದೋಷಿ ಎಂದು ತೀರ್ಪು ಪ್ರಕಟಿಸಿದ್ದ ಕೋರ್ಟ್ ಶುಕ್ರವಾರ ಶಿಕ್ಷೆಯ ಅವಧಿ ಪ್ರಕಟಿಸಿದೆ. ಜನಪ್ರತಿನಿಧಿಗಳ ಕಾಯ್ದೆಯ ಸೆಕ್ಷನ್ 8(4) ರ ಪ್ರಕಾರ ತಕ್ಷಣದಿಂದಲೇ ವಿನಯ್ ಕುಲಕರ್ಣಿ ಅವರ ಶಾಸಕ ಸ್ಥಾನ ರದ್ದಾಗಿದೆ.

ಜನಪ್ರತಿನಿಧಿ ಕಾಯ್ದೆ, 1951ರ ಪ್ರಕಾರ ಕೊಲೆ ಕೇಸ್‌ನಲ್ಲಿ ಶಾಸಕರೊಬ್ಬರು ಅಪರಾಧಿ ಎಂದು ಸಾಬೀತಾಗಿ ಕೋರ್ಟ್ ಶಿಕ್ಷೆ ಘೋಷಿಸಿದ ತಕ್ಷಣವೇ ಅವರ ಶಾಸಕ ಸ್ಥಾನ ಅಧಿಕೃತವಾಗಿ ರದ್ದಾಗುತ್ತದೆ. ಯಾವುದೇ ಶಾಸಕ ಅಥವಾ ಸಂಸದರು ಕ್ರಿಮಿನಲ್ ಪ್ರಕರಣದಲ್ಲಿ ದೋಷಿ ಎಂದು ಸಾಬೀತಾಗಿ ಅವರಿಗೆ ನ್ಯಾಯಾಲಯ ಕನಿಷ್ಠ 2 ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿಯ ಜೈಲು ಶಿಕ್ಷೆ ವಿಧಿಸಿದರೆ ತಮ್ಮ ಸ್ಥಾನದಿಂದ ಅನರ್ಹಗೊಳ್ಳುತ್ತಾರೆ.

### ಹರಿವಂಶ್ ಸಿಂಗ್ ರಾಜ್ಯಸಭೆ ಉಪಸಭಾಪತಿ

**ನವದೆಹಲಿ:** ನಾಮನಿರ್ದೇಶಿತ ಸದಸ್ಯ ಹರಿವಂಶ್ ನಾರಾಯಣ್ ಸಿಂಗ್ ಅವರು ರಾಜ್ಯಸಭೆ ಉಪಸಭಾಪತಿಯಾಗಿ ಶುಕ್ರವಾರ ಅವಿರೋಧ ಆಯ್ಕೆಯಾದರು.



ಏಪ್ರಿಲ್ 9ರಂದು ಹರಿವಂಶ್ ಅಧಿಕಾರಾವಧಿ ಮುಕ್ತಾಯಗೊಂಡ ನಂತರ ರಾಜ್ಯಸಭೆ ಉಪಸಭಾಪತಿ ಸ್ಥಾನ ತೆರವಾಗಿತ್ತು. ಕೇಂದ್ರ ಸಚಿವ ಮತ್ತು ಸದನದ ನಾಯಕ ಜೆ.ಪಿ.ನಡ್ಡಾ ಅವರು ಹರಿವಂಶ್ ಅವರನ್ನು ರಾಜ್ಯಸಭೆ ಉಪಸಭಾಪತಿಯನ್ನಾಗಿ ಆಯ್ಕೆ ಮಾಡುವ ಕುರಿತು ಮೊದಲ ಪ್ರಸ್ತಾವನೆಯನ್ನು ಮಂಡಿಸಿದರು.

ರಾಜಕೀಯಕ್ಕೆ ಬರುವ ಮೊದಲು ಹರಿವಂಶ್ ಪತ್ರಕರ್ತರಾಗಿದ್ದರು. 2018ರಲ್ಲಿ ಮೊದಲ ಸಲ ಅವರು ಪುಟ 2ಕ್ಕೆ

# ಸಿದ್ಧಾರ್ಥ ಬಡಾವಣೆಯಮನೆಗೆ ಚಿರತೆ ಎಂಟ್ರಿ: ನಿವಾಸಿಗಳಿಗೆ ಶಾಕ್





ವಿವರ ಪುಟ–02

# ಹೊತ್ತಿಉರಿದ ಬಸ್ಸು–ಕಾರು: 7 ಮಂದಿ ಸಜೀವ ದಹನ

## ಭೀಕರ ಅಪಘಾತಕ್ಕೆ ಒಂದೇ ಕುಟುಂಬದವರ ಸಾವು

**ಯಾದಗಿರಿ:** ಕಾರು ಮತ್ತು ಖಾಸಗಿ ಬಸ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಹೊತ್ತಿ ಉರಿದ ಹಿನ್ನೆಲೆಯಲ್ಲಿ 7 ಮಂದಿ ಸಜೀವ ದಹನವಾಗಿರುವ ಘಟನೆ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ದೇವಾಪುರ ಬಳಿ ಗುರುವಾರ ನಡೆದಿದೆ.

ರಾಯಚೂರಿನ ಸಿರವಾರದ ಒಂದೇ ಕುಟುಂಬದ ಕೃಷ್ಣಾ ನಾಯಕ್ (56), ಅವರ ಪತ್ನಿ ಅನಂತ ಕಲಾ (45), ನಿಸರ್ಗ (28), ಶರಣಪ್ಪ (35), ಸಿದ್ದಾರ್ಥ (3), ಅಣ್ಣನ ಮಗಳು ಶಶಿಕಲಾ (30) ಹಾಗೂ ಅವರ ಮಗ ಚಂದನ್ ಸಾವನ್ನಪ್ಪಿದ್ದಾರೆ. ಗಾಯಾಳುಗಳಾದ ಆದ್ವಿಕ ಮತ್ತು ಶ್ರೀನಿಧಿಯನ್ನ ಕಲಬುರಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಲಬುರಗಿಯಿಂದ ಸುರಪುರದ ತಿಂಥಣಿ ಮೌನೇಶ್ವರ ದೇವಾಲಯಕ್ಕೆ ಕುಟುಂಬಸ್ಥರು ಕಾರಿನಲ್ಲಿ ತೆರಳುತ್ತಿದ್ದರು. ಬೆಂಗಳೂರಿನಿಂದ ಕಲಬುರಗಿ ಕಡೆ ಪುಟ 2ಕ್ಕೆ



## ಯುರೇನಿಯಂ ಹಸ್ತಾಂತರಕ್ಕೆ ಇರಾನ್ ಒಪ್ಪಿಗೆ: ಟ್ರಂಪ್

**ವಾಷಿಂಗ್ಟನ್:** ಇರಾನ್ ತನ್ನಲ್ಲಿ ಸಮೃದ್ಧವಾಗಿರುವ ಯುರೇನಿಯಂ ಹಸ್ತಾಂತರಿಸಲು ಒಪ್ಪಿಕೊಂಡಿದೆ. ಯುದ್ಧ ಕೊನೆಗೊಳ್ಳುವ ಸಮಯ ಹತ್ತಿರದಲ್ಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.



ಶ್ವೇತಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಅವರು ನಮಗೆ ಪರಮಾಣು ಧೂಳನ್ನು ಹಿಂತಿರುಗಿಸಲು ಒಪ್ಪಿಕೊಂಡಿದ್ದಾರೆ. ನಾವು ಒಪ್ಪಂದ ಮಾಡಿಕೊಳ್ಳಲು ಉತ್ತಮ ಅವಕಾಶವಿದೆ ಎಂದು ಟ್ರಂಪ್ ತಿಳಿಸಿದರು.

ಅಮೆರಿಕ ಮತ್ತು ಇರಾನ್ ಅತ್ಯಂತ ಯಶಸ್ವಿ ಮಾತುಕತೆ ನಡೆಸುತ್ತಿವೆ. ಒಪ್ಪಂದವಾದರೆ ತೈಲ ಸಮಸ್ಯೆ ಬಗೆಹರಿಯುತ್ತದೆ. ಹಾರ್ಮುಜ್ ಜಲಸಂಧಿ ಮುಕ್ತವಾಗಿ ಎಲ್ಲವೂ ಚೆನ್ನಾಗಿರುತ್ತದೆ ಎಂದು ಟ್ರಂಪ್ ಆಶಯ ಪುಟ 2ಕ್ಕೆ

## ಅರಣ್ಯ ಚಾರಣಕ್ಕೆ ನೇಚರ್ ಗೈಡ್ ಕಡ್ಡಾಯ: ಸಚಿವ ಖಂಡ್ರೆ ಆದೇಶ

**ಬೆಂಗಳೂರು:** ರಾಜ್ಯದಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲ ಅನುಮೋದಿತ ಚಾರಣ ಪಥಗಳಲ್ಲಿ ಇನ್ನು ಮುಂದೆ ಪ್ರಕೃತಿ ಮಾರ್ಗದರ್ಶಕ (ನೇಚರ್ ಗೈಡ್) ಇಲ್ಲದೆ ಚಾರಣಕ್ಕೆ ಅವಕಾಶ ಇರುವುದಿಲ್ಲ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಸ್ಪಷ್ಟಪಡಿಸಿದರು. ಪುಟ 2ಕ್ಕೆ



## ರಷ್ಯಾದಿಂದ ತೈಲ್ ಖರೀದಿಗೆ ಭಾರತಕ್ಕೆ ಅವಕಾಶ ನೀಡಲ್ಲ

**ವಾಷಿಂಗ್ಟನ್:** ಇರಾನ್ ಮತ್ತು ರಷ್ಯಾದ ತೈಲವನ್ನು ಖರೀದಿಸಲು ಅವಕಾಶ ನೀಡಿದ ವಿನಾಯಿತಿಗಳನ್ನು ಭಾರತಕ್ಕೆ ಮತ್ತೆ ನವೀಕರಿಸುವುದಿಲ್ಲ ಎಂದು ಅಮೆರಿಕ ಹೇಳಿದೆ.

ನಾವು ರಷ್ಯಾ ಹಾಗೂ ತೈಲದ ಮೇಲಿನ ಸಾಮಾನ್ಯ ಪರವಾನಗಿಯನ್ನು ನವೀಕರಿಸುವುದಿಲ್ಲ ಎಂದು ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ತಿಳಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಉಲ್ಬಣಗೊಂಡ ನಂತರ ಜಾಗತಿಕವಾಗಿ ಏರಿಕೆಯಾಗಿರುವ ತೈಲ ಪೂರೈಕೆಯನ್ನು ಮುಕ್ತಗೊಳಿಸಲು ಮತ್ತು ಇಂಧನ ಬೆಲೆಗಳನ್ನು ಕಡಿಮೆ ಮಾಡಲು ಅಮೆರಿಕ ನಿರ್ಬಂಧಗಳಿಗೆ ವಿನಾಯಿತಿ ನೀಡಿದೆ. ಏರುತ್ತಿರುವ ಇಂಧನ ಬೆಲೆಗಳನ್ನು ಸ್ಥಿರಗೊಳಿಸಲು ಅಲ್ಪಾವಧಿಯ ಕ್ರಮವಾಗಿ ತಾತ್ಕಾಲಿಕ ವಿನಾಯಿತಿಗಳನ್ನು ನೀಡಲಾಗಿದೆ.

ಭಾರತವು ನಿರ್ಬಂಧಗಳ ವಿನಾಯಿತಿಯ ಪ್ರಮುಖ ಫಲಾನುಭವಿಯಾಗಿದೆ. ಹಾರ್ಮುಜ್ ಜಲಸಂಧಿ ಬಂದ್ ಕಾರಣದಿಂದ ಭಾರತಕ್ಕೆ ಬರಬೇಕಿದ್ದ ಹಲವಾರು ತೈಲ ಹಡಗುಗಳು ಸಿಲುಕಿಕೊಂಡಿವೆ. ಪುಟ 2ಕ್ಕೆ

## ಸಿದ್ದು ಅಸಹಾಯಕ: ಹಾದಿತಪ್ಪಿದ ಡಿಕೆಶಿ!

### ಸಿದ್ದರಾಮಯ್ಯ ‘ತಟಸ್ಥ ಧೋರಣೆ’ ಬಗ್ಗೆ ಕೆ.ಎನ್.ರಾಜಣ್ಣ ಅಸಮಾಧಾನ

**ಬೆಂಗಳೂರು:** ಕೆಲವು ಒತ್ತಡಗಳಿಂದ ಸಿದ್ದರಾಮಯ್ಯ ಅಸಹಾಯಕ ಪರಿಸ್ಥಿತಿಯಲ್ಲಿದ್ದಾರೆ. ಡಿಸಿಎಂ ಡಿ.ಕೆ. ಶಿವಕುಮಾರ್ ಹಾದಿ ತಪ್ಪುತ್ತಿದ್ದಾರೆ ಎಂದು ಮಾಜಿ ಸಚಿವ ಕೆ. ಎನ್.ರಾಜಣ್ಣ ಹೊಸ ಬಾಂಬ್ ಸಿಡಿಸಿದರು.

ಸಚಿವ ಸತೀಶ್ ಜಾರಕಿಹೊಳಿ ಅವರೊಂದಿಗೆ ಸುದೀರ್ಘ ಚರ್ಚೆ ನಂತರ ರಾಜಣ್ಣ ನೀಡಿರುವ ಹೇಳಿಕೆ ರಾಜ್ಯ ರಾಜಕಾರಣದಲ್ಲಿ ಹೊಸ ಸಂಚಲನ ಮೂಡಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ‘ತಟಸ್ಥ ಧೋರಣೆ’ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ‘ಶಿಸ್ತು’ ಉಲ್ಲಂಘನೆ ಬಗ್ಗೆ ರಾಜಣ್ಣ ಶುಕ್ರವಾರ ಅತ್ಯಂತ ಕಠಿಣ ಪದಗಳಲ್ಲಿ ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯ ಅವರು ಅಸಹಾಯಕ ಸ್ಥಿತಿ ಮತ್ತು ‘ಒತ್ತಡ’ದಿಂದ ತಮ್ಮ ಬೆಂಬಲಿಗ ನಾಯಕರನ್ನು ರಕ್ಷಿಸಲು ನಿಲ್ಲುತ್ತಿಲ್ಲ. ಸಿದ್ದರಾಮಯ್ಯ ಅವರಿಂದ ಇಂಥ ಅಸಹಾಯಕತೆಯನ್ನು ನಾವು ನಿರೀಕ್ಷೆ ಮಾಡಿ



ರಲಿಲ್ಲ. ಸಿದ್ದರಾಮಯ್ಯ ಪರವಾಗಿ ಇರುವವರನ್ನು ಸತತವಾಗಿ ಟಾರ್ಗೆಟ್ ಮಾಡಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸಿಎಂ ಗಟ್ಟಿಯಾಗಿ ನಿಲ್ಲಬೇಕಿತ್ತು. ಆದರೆ ಅವರು ಯಾಕೆ ತಟಸ್ಥರಾಗಿದ್ದಾರೆ ಎಂಬುದು ನಮಗೆ ತಿಳಿಯುತ್ತಿಲ್ಲ. ಅವರ ಧ್ವನಿ ಕುಗ್ಗಿದಾಗ ನಮಗೂ ಅಸಹಾಯಕತೆ ಎನಿಸುತ್ತದೆ ಎಂದು ರಾಜಣ್ಣ ಬೇಸರ ವ್ಯಕ್ತಪಡಿಸಿದರು.

ಪಕ್ಷದ ಶಿಸ್ತಿನ ಬಗ್ಗೆ ಮಾತನಾಡುವ ಡಿ.ಕೆ.ಶಿವಕುಮಾರ್ ವಿರುದ್ಧ ಕೆ.ಎನ್. ರಾಜಣ್ಣ ಪರೋಕ್ಷವಾಗಿ ತೀವ್ರ ವಾಗ್ದಾಳಿ ನಡೆಸಿದರು. ಪ್ರಯಾಗ್‌ರಾಜ್‌ನಲ್ಲಿ ಹೋಗಿ ಮುಳುಗಿದರೆ ಬಡತನ ಪುಟ 2ಕ್ಕೆ

# ವಿನಯ್ ಕುಲಕರ್ಣಿಗೆ ಜೀವಾವಧಿ ಶಿಕ್ಷೆ

## 16 ಅಪರಾಧಿಗಳಿಗೆ ಜೀವಾವಧಿ ಜೈಲು । ಟಿಂಗರೀಕರ್‌ಗೆ ಏಳು ವರ್ಷ ಶಿಕ್ಷೆ ವಿಧಿಸಿ ಆದೇಶ

**ಬೆಂಗಳೂರು:** ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ ಎಲ್ಲಾ 16 ಅಪರಾಧಿಗಳಿಗೆ 82ನೇ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಶುಕ್ರವಾರ ಶಿಕ್ಷೆಯ ಪ್ರಮಾಣ ಪ್ರಕಟಿಸಿದರು. 16 ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ನೀಡಿದ್ದಾರೆ. ಮತ್ತೊಬ್ಬ ಅಪರಾಧಿ ಇನ್‌ಸ್ಪೆಕ್ಟರ್ ಚನ್ನಕೇಶವ ಟಿಂಕರಿಕರ್‌ಗೆ 7 ವರ್ಷ ಜೈಲು ಶಿಕ್ಷೆ ವಿಧಿಸಿದ್ದಾರೆ.

ಟಿಂಕರಿಕರ್ ಕೊಲೆ ಪ್ರಕರಣದಲ್ಲಿ ಭಾಗಿಯಾಗದಿದ್ದರೂ ಕೊಲೆ ಪ್ರಕರಣ ಮುಚ್ಚಿಹಾಕಲು ಭ್ರಷ್ಟಾಚಾರ ಎಸಗಿದ್ದಾರೆ ಅನ್ನೋ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಕೋರ್ಟ್ 7 ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸಿದೆ. ಇನ್ನುಳಿದಂತೆ ಬಸವ ರಾಜ್ ಮುತ್ತಗಿಗೆ ಮಾಫಿ ಸಾಕ್ಷಿ ಸ್ಥಾನ ಖಚಿತಪಡಿಸಿದೆ. ಮೃತ ಯೋಗೀಶ್ ಗೌಡ ಮಕ್ಕಳಿಗೆ 16 ಲಕ್ಷ ರೂ. ಪರಿಹಾರ ನೀಡಲು ವಿನಯ್ ಕುಲಕರ್ಣಿಗೆ ಕೋರ್ಟ್ ಸೂಚನೆ ನೀಡಿದೆ. ಶಿಕ್ಷೆಯ ಪ್ರಮಾಣ ನಿರ್ಧರಿಸುವ ಕುರಿತು ಗುರುವಾರ ನಡೆದ ವಿಚಾರಣೆಯಲ್ಲಿ ಕಾನೂನಿನ ತತ್ವಗಳಿಗೆ ಅನುಗುಣವಾಗಿ ಗರಿಷ್ಠ ಶಿಕ್ಷೆಗೆ ವಿನಾಯಿತಿ ಕೋರುವ ಅಪರಾಧಿಗಳ ಮನವಿಯನ್ನು ನ್ಯಾಯಾಧೀಶರು ಆಲಿಸಿದ್ದರು. ಅದರಂತೆ ಶುಕ್ರವಾರ ನ್ಯಾಯಾಲಯದಲ್ಲಿ ಎಲ್ಲಾ ಅಪರಾಧಿಗಳನ್ನೂ ಪೊಲೀಸರು ಹಾಜರುಪಡಿಸಿದರು. ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಲಾಯಿತು.



### ಗರಿಷ್ಠ ಶಿಕ್ಷೆಗೆ ಮನವಿ

ಅಪರಾಧಿಗಳಿಗೆ ಯಾವುದೇ ಮಾನವೀಯತೆಯನ್ನು ಕೊಲೆ ಪ್ರಕರಣದಲ್ಲಿ

### 10 ವರ್ಷಗಳ ಹೋರಾಟ

ಧಾರವಾಡ ಜಿಲ್ಲಾ ಪಂಚಾಯತ್ ಸದಸ್ಯ ಯೋಗೇಶ್ ಗೌಡ ಅವರನ್ನು 2016ರಲ್ಲಿ ಕೊಲೆ ಮಾಡಲಾಗಿತ್ತು. ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಸೇರಿ ಒಟ್ಟು 21 ಮಂದಿ ಮೇಲೆ ಆರೋಪ ಹೊರಿಸಲಾಗಿತ್ತು. ಪ್ರಕರಣವನ್ನು ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ಒಪ್ಪಿಸಿತ್ತು. ಇಂಚಿಂಚು ತನಿಖೆ ನಡೆಸಿದ್ದ ಸಿಬಿಐ ಚಾರ್ಜ್‌ಶೀಟ್ ಸಲ್ಲಿಸಿತ್ತು. ಕಳೆದ 10 ವರ್ಷಗಳ ನಿರಂತರ ತನಿಖೆ, ವಿಚಾರಣೆ ಬಳಿಕ ಕೊಲೆ, ಕ್ರಿಮಿನಲ್ ಸಂಚು,

# ನಗರದೊಳಗಿನ ಮನೆಗೆ ಚಿರತೆ ಎಂಟ್ರಿ

ಮೈಸೂರು: ನಗರದ ಸಿದ್ಧಾರ್ಥ ಬಡಾವಣೆಯ ನಿವಾಸಕ್ಕೆ ಚಿರತೆಯೊಂದು ಏಕಾಏಕಿ ಮನೆಯೊಳಗೆ ಸೇರಿಕೊಂಡಿದ್ದು, ಮಂಚದ ಕೆಳಗೆ ಚಿರತೆ ಕಂಡ ಮನೆಯವರು ಹಾಗೂ ಸ್ಥಳೀಯರು ಶಾಕ್ ಒಳಗಾಗಿ ಕೊನೆಗೆ ಅರಣ್ಯಾಧಿಕಾರಿಗಳ ಕಾರ್ಯಾಚರಣೆಯಲ್ಲಿ ಚಿರತೆ ಸೆರೆ ಹಿಡಿದು ರಕ್ಷಿಸಲಾಗಿದೆ.

ಸಿದ್ಧಾರ್ಥನಗರದ ಸಂಗೀತಾ ಕಾರ್ನರ್ ಸಮೀಪದ ನಿವಾಸಿ ಸುರೇಶ್ ಎಂಬುವವರು ಮುಂಜಾನೆ 6ರ ಸಮಯದಲ್ಲಿ ವಾಕಿಂಗ್ ಹೋಗಲೆಂದು ಮನೆ ಬಾಗಿಲು ತೆರೆದಿದ್ದಾರೆ. ಈ ವೇಳೆ ಮನೆ ಪ್ರವೇಶಿರುವ ಚಿರತೆ ನೇರವಾಗಿ ವೃದ್ಧೆ ಶೈಲಜರ ಕೊಠಡಿಯ ಮಂಚದ ಕೆಳಗೆ ಸೇರಿಕೊಂಡಿದೆ. ಬಳಿಕ ಎಲ್ಲರೂ ಎಂದಿನಂತೆ ಇದ್ದು 8ರ ವೇಳೆಗೆ ಮನೆ ಕೆಲಸದಾಕೆ ಮನೆ ಸ್ವಚ್ಛಗೊಳಿಸಲು ವೃದ್ಧೆಯ ಮಂಚದ ಕೆಳಗೆ ನೋಡಲಾಗಿ ಚಿರತೆ ಇರು ವುದು ಗಮನಿಸಿ ಗಾಬರಿಗೊಂಡು ವಿಷಯ ಅರಣ್ಯ ಇಲಾ ಖೆಗೆ ಮುಟ್ಟಿಸಿದ್ದಾರೆ. ಮಾತ್ರವಲ್ಲದೆ ಹಾಸಿಗೆ ಸೇರಿರುವ ವೃದ್ಧೆಯನ್ನು ಸಹ ಭಯದಲ್ಲೇ ಹೊರಗೆ ಕರೆದು ತಂದಿದ್ದಾರೆ. ಬರೋಬ್ಬರಿ



ಎರಡು ಗಂಟೆಗಳ ಕಾಲ ಚಿರತೆ ವೃದ್ಧೆಯ ಮಂಚದ ಕೆಳಗಡೆ ಮಲಗಿದ್ದು, ಮನೆಯ ಯಾರೊಬ್ಬರಿಗೂ ಈ ವಿಚಾರ ಗಮನಕ್ಕೆ ಬಂದಿಲ್ಲವಾಗಿದೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳೀಯರು ಮುತ್ತುವರಿದಿದ್ದಾರೆ. ಜನರ ಕೂಗಾಟಕ್ಕೆ ಗಾಬರಿಗೊಂಡ ಚಿರತೆಯನ್ನು ಅಂತಿಮವಾಗಿ ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸಿ ಕಿಟಿಕಿ ಮೂಲಕ ಅರವಳಿಕೆ ನೀಡಿ ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

> **ಮನೆ ಮುಂದೆ ಚಿರತೆ ಓಡಾಟದ ಬಗ್ಗೆ ತಿಳಿಸಿದ್ದೇವು. ಆದರೆ, ಬೆಳಿಗ್ಗೆ 5ರಿಂದ 10 ನಿಮಿಷ ನಮ್ಮ ಯಾಜಮಾನರು ವಾಕಿಂಗ್ ಗೆ ಹೋಗಲು ಬಾಗಿಲು ತೆರೆದಿದ್ದರು. ನಾವು ಹಾಲ್‌ನಲ್ಲೇ ಮಲಗಿದ್ದೇವು. ಚಿರತೆ ಯಾವಾಗ ಒಳಗೆ ಕೊಠಡಿಗೆ ಹೋಯಿತು ಗೊತ್ತಿಲ್ಲ. ಸದ್ಯ ಯಾವುದೇ ತೊಂದರೆ ಆಗಿಲ್ಲ. ನಿಜಕ್ಕೂ ಇದೊಂದು ಅಚ್ಚರಿಯಾಗಿದೆ.**
>
> ▸▸ **–ಸುಜಾತ** ಸುರೇಶ್ ಪತ್ನಿ

### ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘದ ರಾಜ್ಯಾಧ್ಯಕ್ಷ ಕೆ.ಕೆ. ಕೃಷ್ಣಪ್ಪ ಹೇಳಿಕೆ

# ನ್ಯಾ.ಅಂಗಡಿ ಮಾಲೀಕರ ಸೇವೆಯಿಂದ ಪ್ರಗತಿ

ಚಾಮರಾಜನಗರ,ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಸೇವೆ ಕುಟುಂಬದ ಆರ್ಥಿಕ ಪ್ರಗತಿಯಲ್ಲಿ ಮುಂಚೂಣ ಯಲ್ಲಿದ್ದು, ದೇಶದ ಅಭಿವೃದ್ಧಿ ಸೂಚಂಕ್ಯ ಏರಿಕೆಯಲ್ಲಿ ನ್ಯಾಯಬೆಲೆ ಅಂಗಡಿ ಮಾಲೀಕರ ಪಾತ್ರ ಮಹತ್ವದದ್ದಾ ಗಿದೆ ಎಂದು ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘದ ರಾಜ್ಯಾಧ್ಯಕ್ಷ ಕೆ.ಕೆ. ಕೃಷ್ಣಪ್ಪ ತಿಳಿಸಿದರು.

ನಗರದ ಲ್ಯಾಂಪ್ ಸೊಸೈಟಿಯ ಭವನದಲ್ಲಿ ಬ.ಮ. ಹರೀಶ್ ಅವರ ನಿರ್ದೇಶನದಲ್ಲಿ ನಾಯಕ ನಟರಾಗಿರುವ ಕುಮಾರಬಂಗಾರಪ್ಪ, ರಾಗಿಣ ದ್ವಿವೇದಿ, ಕೆ.ಕೆ. ಕೃಷ್ಣಪ್ಪ, ದೊಡ್ಡಣ್ಣ ಅನೇಕ ಅಭಿನಯದಲ್ಲಿ ಮೂಡಿ ಬಂದಿರುವ ಸರ್ಕಾರಿ ನ್ಯಾಯಬೆಲೆ ಅಂಗಡಿ ಸಿನಿಮಾದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದರು.

ಚಿತ್ರದ ನಿರ್ಮಾಪಕರಾದ ಪದ್ಮವತಿ ಚಂದ್ರಶೇಖರ್, ಸಹ ನಿರ್ಮಾಪಕ ಚೆಲುವಮೂರ್ತಿ ಹಾಗು ನಿರ್ದೇಶಕ ಬ.ಮ. ಹರೀಶ್ ಅವರು ನ್ಯಾಯಬೆಲೆ ಅಂಗಡಿಮಾಲೀಕರು ಎದುರಿಸುವ ಸಂಕಷ್ಟಗಳು ಹಾಗೂ ಸಮಾಜದಲ್ಲಿ ಅವರಿಗೆ ಇರುವ ಗೌರವ ಮತ್ತು ಅಧಿಕಾರಿ ವರ್ಗದವರು ಮತ್ತು ಜನಪ್ರತಿನಿಧಿಗಳು ನಡೆದುಕೊಳ್ಳುವ ರೀತಿ ಬಗ್ಗೆ ಬಹಳ ವಿಭಿನ್ನವಾಗಿ ಚಿತ್ರೀಕರಿಸಿದ್ದಾರೆ. ಇದೊಂದು ಸದಾಬಿರುಚಿಯ ಚಿತ್ರವಾಗಿದ್ದು, ಜಿಲ್ಲೆ ಹಾಗೂ ತಾಲೂಕು ವ್ಯಾಪ್ತಿಯಲ್ಲಿ



ಹೆಚ್ಚು ಪ್ರಚಾರವನ್ನು ನೀಡಿ, ಚಿತ್ರ ಯಶಸ್ವಿಗೆ ಸಹಕಾರ ನೀಡಬೇಕು ಎಂದರು.

ಚಾಮರಾಜನಗರ ಜಿಲ್ಲಾ ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘದ ಸಹಯೋಗದಲ್ಲಿ ಚಿತ್ರದ ಪೋಸ್ಟರ್ ಬಿಡುಗಡೆ ಮಾಡಲಾಗಿದೆ. ಮೇ 1 ರಂದು ಚಿತ್ರವು ರಾಜ್ಯಾದ್ಯಂತ ಬಿಡುಗಡೆಗೊಳ್ಳಲಿದೆ. ಜಿಲ್ಲೆಯ ಎಲ್ಲಾ ಪದಾಧಿಕಾರಿಗಳು ಚಿತ್ರವನ್ನು ವೀಕ್ಷಣೆ ಮಾಡುವ ಜೊತೆಗೆ ಇತರರು ನೋಡುವಂತೆ ಮಾಡಬೇಕು. ಇದೊಂದು ಚಿತ್ರ ಯಶಸ್ವಿಯಾಗಬೇಕು ಎಂದು ಕೃಷ್ಣಪ್ಪ ತಿಳಿಸಿದರು. ಪಡಿ ತರ ವಿತರಕರ ಸಂಘದ ರಾಜ್ಯಾ ಉಪಾಧ್ಯಕ್ಷ ಜ್ಯೋತಿಗೌಡನಪುರ ದುಂಡಯ್ಯ, ಕಾರ್ಯದರ್ಶಿ ಚಂದ್ರಪ್ಪ, ಜಿಲ್ಲಾಧ್ಯಕ್ಷ ಉಡಿಗಾಲ ಗಿರೀಶ್, ಜಿಲ್ಲಾ ಖಜಾಂಚಿ ಚೆಂಗುಮಣ , ತಾ.ಪಂ. ಮಾಜಿ ಸದಸ್ಯ ಪಿ.ಕುಮಾರನಾಯಕ್, ತಾಲೂಕು ಸಂಘದ ಅಧ್ಯಕ್ಷ ದೊರೆಸ್ವಾಮಿ, ಕೊತ್ತಲವಾಡಿ ಶಾಂತಪ್ಪ, ಡಿ. ನಾಗೇಂದ್ರ, ಅಣಗಹಳ್ಳಿ ಬಸವರಾಜು ಮೊದಲಾದವರು ಇದ್ದರು.

## ಮೊದಲ ಪುಟದಿಂದ

### ವಿನಯ್‌ಗೆ ಜೀವಾವಧಿ ಶಿಕ್ಷೆ

ತೋರಬಾರದು. ಕಾನೂನಿನಲ್ಲಿ ಇರುವ ಗರಿಷ್ಠ ಶಿಕ್ಷೆಯನ್ನು ನೀಡಬೇಕು. ಸಮಾಜದಲ್ಲಿ ಇದೊಂದು ಮಾದರಿಯಾಗಬೇಕು. ಪ್ರಕರಣದ 7ನೇ ಆರೋಪಿ ಕಣ್ಣಿಗೆ ಖಾರದ ಪುಡಿ ಹಾಕಿ ಕೊಲೆ ಮಾಡಿದ್ದಾರೆ. ರಾಜಕೀಯ ದ್ವೇಷ ಇಟ್ಟುಕೊಂಡು ಕೊಲೆ ಮಾಡಲಾಗಿದೆ. ಅಷ್ಟೇ ಅಲ್ಲದೇ ಸಿಬಿಐ ಪ್ರಕರಣ ತೆಗೆದು ಕೊಂಡಾಗ ಸಾಕ್ಷ್ಯ ನಾಶ ಮಾಡಿದ್ದಾರೆ. ವಿಚಾ ರಣೆ ಸಂದರ್ಭದಲ್ಲಿ ಸಾಕ್ಷಿಗಳನ್ನು ಹಣಕೊಟ್ಟು ಖರೀದಿ ಮಾಡಿದ್ದಾರೆ. ವಿನಯ್ ಕುಲಕರ್ಣಿ ತನಗೆ ಇರುವ ಅಧಿಕಾರ, ಹಣ ಬಳಕೆ ಮಾಡಿ ಕೊಂಡಿದ್ದಾರೆ. ಸಾಕ್ಷ್ಯಗಳನ್ನು ನಾಶ ಮಾಡಿದ್ದಾರೆ. ಒಬ್ಬ ಯುವ ರಾಜಕಾರಣಿಯ ಜೀವನ ಅಂತ್ಯ ಗೊಳಿಸಿದ್ದಾರೆ. ತುಂಬಾ ಉಪಾಯ ಮಾಡಿ ಸಂಚು ಮಾಡಿ ಹತ್ಯೆಯನ್ನು ಮಾಡಿದ್ದಾರೆ. ತನ್ನ ರಾಜಕೀಯ ಬಲದಿಂದ ಪ್ರಕರಣ ದಾರಿ ತಪ್ಪಿಸುವ ಪ್ರಯತ್ನ ಮಾಡಲಾಗಿದೆ. ಈ ಪ್ರಕರಣ ತಕ್ಷಣವೇ ನಡೆದಿದ್ದಲ್ಲ ಪ್ರೀಪ್ಲಾನ್ಡ್ ಎಂದು ಗರಿಷ್ಠ ಶಿಕ್ಷೆಗೆ ಎಎಸ್‌ಜಿ ಕೋರಿದ್ದರು. ಅಪರಾಧಿ ಪರ ವಕೀಲರು ವಾದ ಮಂಡಿಸಿ, ಅಪರಾಧಿಗಳಿಗೆ ಸಣ್ಣ ಸಣ್ಣ ಮಕ್ಕಳಿದ್ದಾರೆ. ಶಿಕ್ಷೆ ಪ್ರಮಾಣ ಕಡಿಮೆ ಮಾಡುವಂತೆ ಮನವಿ ಮಾಡಿದ್ದರು. ವಿನಯ್ ಕುಲಕರ್ಣಿ ಪರ ಶ್ಯಾಮ್ ಸುಂದರ್ ವಾದಿಸಿದ್ದರು.

### ಹರಿವಂಶ್ ಸಿಂಗ್ ಉಪಸಭಾಪತಿ

ಉಪಸಭಾಪತಿಯಾದರು. ನಂತರ 2020ರಲ್ಲಿ ಎರಡನೇ ಅವಧಿಗೆ, 2026ರಲ್ಲಿ ಮೂರನೇ ಅವಧಿಗೆ ಉಪಸಭಾಪತಿಯಾಗಿ ಅವಿರೋಧ ಆಯ್ಕೆಯಾದರು, ವಿರೋಧ ಪಕ್ಷದ ಅಭ್ಯರ್ಥಿ ಇಲ್ಲದ ಕಾರಣ ಚುನಾವಣೆಯು ಅವಿರೋಧವಾಗಿ ನಡೆಯಿತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಹರಿವಂಶ್ ಅವರಿಗೆ ಅಭಿನಂದನೆ ಸಲ್ಲಿಸಿದರು. ರಾಜ್ಯಸಭೆ ಇತಿಹಾಸದಲ್ಲಿ ನಾಮನಿರ್ದೇಶಿತ ಸದಸ್ಯರೊಬ್ಬರು ಉಪಸಭಾಪತಿಯಾಗಿ ಆಯ್ಕೆಯಾಗಿರುವುದು ಇದೇ ಮೊದಲು.

### ಸಿದ್ದು ಅಸಹಾಯಕ: ಹಾದಿತಪ್ಪಿದ ಡಿಕೆಶಿ!

ಹೋಗುತ್ತದೆಯೇ ಎಂದು ಎಐಸಿಸಿ ಅಧ್ಯಕ್ಷರೇ ಪ್ರಶ್ನಿಸಿದ್ದರು. ಆದರೆ ಇವರು ಅಲ್ಲಿಗೂ ಹೋಗಿ ಮುಳುಗಿ ಬಂದರು ಎಂದು ರಾಜಣ್ಣ ವಾಗ್ದಾಳಿ ನಡೆಸಿದರು.

ಸತೀಶ್ ಜಾರಕಿಹೊಳಿ ಮತ್ತು ಡಿ.ಕೆ.ಶಿವಕುಮಾರ್ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ರಾಜಣ್ಣ, ಅವರೆಲ್ಲರೂ ಸಂಪುಟದ ಸದಸ್ಯರು. ಯಾರು ಯಾರನ್ನಾದರೂ ಭೇಟಿ ಮಾಡಬಹುದು. ಅದರಲ್ಲಿ ತಪ್ಪು ಭಾವಿಸುವ ಅಗತ್ಯವಿಲ್ಲ. ಆದರೆ ಸಿದ್ದರಾಮಯ್ಯ ಪರ ಇರುವವರನ್ನು ತುಳಿಯುವ ಪ್ರಯತ್ನ ನಡೆದರೆ ನಾವು ಸುಮ್ಮನಿರುವುದಿಲ್ಲ ಎಂದು ಎಚ್ಚರಿಸಿದರು.

### 'ತಲೆದಂಡ'ಕ್ಕೆ ನಾಯಕರ ಸೂಚನೆ

ಹೊಳಿ ಭೇಟಿ ವಿಚಾರವಾಗಿ ಮಾತನಾಡಿ, ರೋಡ್ ಬಗ್ಗೆ ಮಾತಾಡಿದ್ದೇವೆ. ನೆಲಮಂಗಲದಲ್ಲಿ ಸಮಸ್ಯೆ ಆಗಿದೆ ಅಂದಿದ್ದಾರೆ. ಅರ್ಧ ಮುಕ್ಕಾಲು ಗಂಟೆ ಟ್ರಾಫಿಕ್ ಆಗುತ್ತದೆ. ಬೆಂಗಳೂರು ಸಿಟಿಗೆ ವಹಿಕಲ್ ಅವೈಡ್ ಮಾಡಬೇಕು. ಏನು ಮಾಡೋಕೆ ಸಾಧ್ಯ ಅಂತ ನೋಡಬೇಕು. ಈಗಾಗಲೇ ನಾವು ಬುಸಿನೆಸ್ ಕಾರಿಡಾರ್ ಮಾಡಿದ್ದೇವೆ. ನಾವು ಈ ಎಲ್ಲಾ ವಿಚಾರದ ಬಗ್ಗೆ ಮಾತಾಡಿದ್ದೇವೆ. ಎರಡನೇದಾಗಿ ರಾಜಕಾರಣದ ಬಗ್ಗೆ ಮಾತಾಡಿದ್ದೇವೆ. ರಾಜ್ಯದ ಅಭಿವೃದ್ಧಿ, ಪಕ್ಷದ ಅಭಿವೃದ್ಧಿಗೆ ಏನು ಬೇಕು ಅದನ್ನ ಚರ್ಚೆ ಮಾಡಿದ್ದೇವೆ ಎಂದು ತಿಳಿಸಿದರು.

### ಭಾರತಕ್ಕೆ ಅವಕಾಶ ನೀಡಲ್ಲ

ಹೀಗಾಗಿ, ರಷ್ಯಾದ ತೈಲ ಖರೀದಿಯನ್ನು ಮುಂದುವರಿಸಲು ಭಾರತಕ್ಕೆ ಅಮೆರಿಕ ವಿನಾಯಿತಿ ಕೊಟ್ಟಿದೆ. ಯುದ್ಧದ ಸಮಯದಲ್ಲಿ ಇಂಧನ ಪೂರೈಕೆಯ ಮೇಲಿನ ಒತ್ತಡವನ್ನು ನಿವಾರಿಸಲು ಸಹಾಯ ಮಾಡಿತು. ವಿನಾಯಿತಿ ಏಪ್ರಿಲ್ 19 ರಂದು ಮುಕ್ತಾಯಗೊಳ್ಳಲಿದೆ.

### ಯುರೇನಿಯಂ ಹಸ್ತಾಂತರಕ್ಕೆ ಒಪ್ಪಿಗೆ

ವ್ಯಕ್ತಪಡಿಸಿದ್ದಾರೆ. ಕಳೆದ ವಾರಾಂತ್ಯದಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ 21 ಗಂಟೆಗಳ ಶಾಂತಿ ಮಾತುಕತೆಯಲ್ಲಿ ಅಮೆರಿಕ ಮತ್ತು ಇರಾನ್ ಒಪ್ಪಂದಕ್ಕೆ ಬರಲು ವಿಫಲವಾಗಿದ್ದವು. ಪರಮಾಣು ಶಸ್ತ್ರಾಸ್ತ್ರ ಹೊಂದಬಾರದು ಎಂಬ ಅಮೆರಿಕದ ಷರತ್ತನ್ನು ಆಗ ಒಪ್ಪಿಕೊಳ್ಳಲು ಇರಾನ್ ನಿರಾಕರಿಸಿತ್ತು.

### ಹೆಂಡತಿ ಚಿಂತೆ ಇಲ್ಲ: ರಾಹುಲ್

ನಮ್ಮ ಪಕ್ಷವು ಮಹಿಳಾ ಪ್ರಾತಿನಿಧ್ಯವನ್ನು ವಿರೋಧಿಸುತ್ತಿಲ್ಲ. ಆದರೆ ಮಸೂದೆಯ ಸಮಯ ಮತ್ತು ರಚನೆ ಹಿಂದಿನ ರಾಜಕೀಯ ಉದ್ದೇಶವನ್ನು ಪ್ರಶ್ನಿಸುತ್ತಿದೆ. ಆಡಳಿತಾರೂಢ ಎನ್‌ಡಿಎ ಸರ್ಕಾರ ಮಹಿಳೆಯರ ಸಬಲೀಕರಣ ಮಾಡುವುದಕ್ಕಿಂತ ಹೆಚ್ಚಾಗಿ ಇದನ್ನು ಚುನಾವಣಾ ತಂತ್ರವಾಗಿ ಬಳಸುತ್ತಿದೆ ಎಂದು ದೂರಿದರು.

ಮೋದಿ ಮಾತನ್ನು ಪ್ರಿಯಾಂಕಾ ಗಾಂಧಿ ಉಲ್ಲೇಖಿಸಿಸುತ್ತಿದ್ದಂತೆ ಅಮಿತ್ ಶಾ ಸೇರಿದಂತೆ ಆಡಳಿತರೂಢ ಬಿಜೆಪಿ ಸಂಸದರು ನಗೆಯಾಡಲು ಆರಂಭಿಸಿದರು. ಅಮಿತ್ ಶಾ ನಗುತ್ತಿರುವುದನ್ನು ನೋಡಿ, ಆಡಳಿತ ಪಕ್ಷವು ಸಂಪೂರ್ಣವಾಗಿ ಸಿದ್ಧವಾಗಿರುವಂತೆ ತೋರುತ್ತಿದೆ. ಒಂದು ವೇಳೆ ಚಾಣಕ್ಯ ಇಂದು ಜೀವಂತವಾಗಿದ್ದರೆ ಚುನಾವಣೆಗಳನ್ನು ಗೆಲ್ಲಲು ನೀವು ಮಾಡುತ್ತಿರುವ ರಾಜಕೀಯ ಕುತಂತ್ರವನ್ನು ನೋಡಿ ಆತನೇ ಶಾಕ್‌ಗೆ ಒಳಗಾಗುತ್ತಿದ್ದ ಎಂದು ನಗುನಗುತ್ತಲೇ ತಿವಿದರು. ಪ್ರಿಯಾಂಕಾ ಅವರ ಈ ಹೇಳಿಕೆಯಿಂದ ಸದನ ನಗೆಗಡಲಲ್ಲಿ ತೇಲಿತು.

### 10 ವರ್ಷಗಳ ಹೋರಾಟ

ಸಾಕ್ಷ್ಯನಾಶ, ಮಾರ ಕಾಸ್ತ್ರಗಳಿಂದ ಹಲ್ಲೆ, ಅಕ್ರಮ ಕೂಟ ಆರೋಪದಡಿ ದೋಷಿ ಎಂದು ಜನಪ್ರ ತಿನಿಧಿಗಳ ಕೋರ್ಟ್ ಆದೇಶಿಸಿತ್ತು. ಸೋಮಶೇಖರ್ ನ್ಯಾಮಗೌಡ ಹಾಗೂ ವಾಸುದೇವ್ ನಿಲೇಕಣಿಯನ್ನ ಕೋರ್ಟ್ ಖುಲಾಸೆಗೊಳಿತ್ತು. ಈ ಇಬ್ಬರು ನಿರ್ದೋಷಿಗಳನ್ನ ಬಿಟ್ಟು ಉಳಿದವರನ್ನು ಸಿಬಿಐ ವಶಕ್ಕೆ ಪಡೆದಿತ್ತು. ಬಳಿಕ ಬೌರಿಂಗ್ ಆಸ್ಪತ್ರೆಯಲ್ಲಿ 17 ಅಪರಾಧಿಗಳ ವೈದ್ಯಕೀಯ ಪರೀಕ್ಷೆ ನಡೆಸಿ ಪರಪ್ಪನ ಅಗ್ರಹಾರಕ್ಕೆ ಶಿಫ್ಟ್ ಮಾಡಲಾಗಿತ್ತು.

# ಇಂದು ಜನರೊಂದಿಗೆ ಜನತಾ ದಳ

## ಮೂರು ಕ್ಷೇತ್ರ ಸೇರಿ ಕಾರ್ಯಕ್ರಮದಲ್ಲಿ ನಿಖಿಲ್ ಭಾಗಿ, ಚಾಮುಂಡೇಶ್ವರಿಯಲ್ಲಿ ಸಮಾರೋಪ

ಮೈಸೂರು: ನಗರ ವ್ಯಾಪ್ತಿಯ ಚಾಮರಾಜ, ಕೃಷ್ಣ ರಾಜ ಹಾಗೂ ನರಸಿಂಹರಾಜ ವ್ಯಾಪ್ತಿಯ ಜನ ರೊಂದಿಗೆ ಜನತಾದಳ ಕಾರ್ಯಕ್ರಮವನ್ನು ಶನಿವಾರ ಆಯೋಜಿಸಿದೆ.

ಈ ಸಂಬಂಧ ಸುದ್ದಿಗೋಷ್ಠಿ ನಡೆಸಿದ ಮಾಜಿ ಶಾಸಕ ಸಾ.ರಾ.ಮಹೇಶ್ ಮಾತನಾಡಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರ ಸ್ವಾಮಿ ನೇತೃತ್ವದಲ್ಲಿ ಪಕ್ಷ ಸಂಘಟನೆ ಮತ್ತು ಸದಸ್ಯತ್ವ ಅಭಿಯಾನದ ಅಂಗವಾಗಿ ಕಾರ್ಯಕ್ರಮ ಆಯೋಜಿಸಲಾಗಿದೆ. ನಗರದ ನಂಜರಾಜ ಬಹದ್ದೂರ್ ಛತ್ರದ ಆವರಣದಲ್ಲಿ ಏ.18ರಂದು ಸಂಜೆ 4 ಗಂಟೆಗೆ ಕಾರ್ಯಕ್ರಮ ನಡೆಯಲಿದೆ. ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಮೈಸೂರು ಜಿಲ್ಲೆಯಲ್ಲಿ ಪಿರಿಯಾಪಟ್ಟಣ ಕ್ಷೇತ್ರದಿಂದ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಈಗಾಗಲೇ ಕೆ.ಆರ್.ನಗರ, ಹುಣಸೂರು, ತಿ.ನರಸೀಪುರ, ಎಚ್.ಡಿ.ಕೋಟೆ ಕ್ಷೇತ್ರಗಳಲ್ಲಿ ಕಾರ್ಯಕ್ರಮ ನಡೆದಿದೆ. ನಗರ ವ್ಯಾಪ್ತಿಯ ಕೃಷ್ಣರಾಜ, ಚಾಮರಾಜ, ನರಸಿಂಹರಾಜ ಕ್ಷೇತ್ರಗಳ ಕಾರ್ಯಕ್ರಮವನ್ನು ಏ.18ರಂದು ಸಂಘಟಿಸಲಾಗಿದೆ. ಪರಾಜಿತ ಅಭ್ಯರ್ಥಿ ಅಭಿಷೇಕ್ ಮುಂದಾಳತ್ವದಲ್ಲಿ ಮೇ ತಿಂಗಳಲ್ಲಿ ವರುಣ ಕ್ಷೇತ್ರದ ಕಾರ್ಯಕ್ರಮ ನಡೆಸಲಾಗುವುದು ಎಂದರು. ವಿಧಾನ ಪರಿಷತ್ತು ಸದಸ್ಯರಾದ ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ಜೆಡಿಎಸ್ ಜಿಲ್ಲಾ ಧ್ಯಕ್ಷ ಅಶ್ವಿನ್ ಕುಮಾರ್, ನಗರಾಧ್ಯಕ್ಷ ಎಸ್.ಬಿ.ಎಂ.ಮಂಜು, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಚಲುವೇಗೌಡ, ಆರ್.ಲಿಂಗಪ್ಪ, ಪ್ರೇಮಾ ಶಂಕರೇ ಗೌಡ, ಮುಖಂಡರಾದ ಅಭಿಷೇಕ್, ರಾಮು, ನಿಶಾಂತ್, ಪ್ರಕಾಶ್ ಪ್ರಿಯದರ್ಶನ್ ಮುಂತಾದವರಿದ್ದರು.

**ಚಾಮುಂಡೇಶ್ವರಿಯಲ್ಲಿ ನಿಷ್ಠಾವಂತರ ನೇತೃತ್ವ**

ಚಾಮುಂಡೇಶ್ವರಿಗೆ ಕಾರ್ಯಕರ್ತರ ನೇತೃತ್ವ ಜನರೊಂದಿಗೆ ಜನತಾ ದಳ ಅಭಿಯಾನದ ಮೈಸೂರು ಜಿಲ್ಲೆಯ ಸಮಾರೋಪ ಸಮಾರಂಭವನ್ನು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಯೋಜಿಸಲಾಗುವುದು. ಪಕ್ಷದ ನಿಷ್ಠಾವಂತ ಕಾರ್ಯಕರ್ತರೇ ನೇತೃತ್ವ ವಹಿಸಲಿದ್ದಾರೆ ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಹೇಳಿದರು.

ಎಚ್.ಡಿ.ದೇವೇಗೌಡ ಅವರ ಆಶೀರ್ವಾದ, ಎಚ್.ಡಿ.ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಕಾರ್ಯಕ್ರಮ ನಡೆಸಲಿದ್ದೇವೆ. ಪಕ್ಷದಲ್ಲಿ ನಿಷ್ಠೆ ಹೊಂದಿರುವವರು ಕಾರ್ಯಕ್ರಮಕ್ಕೆ ಬರುತ್ತಾರೆ, ಇಲ್ಲದವರು ಬರಲ್ಲ. ಅವರು ಪಕ್ಷದಲ್ಲಿ ಇಲ್ಲ ಎಂದು ಕುಮಾರಣ್ಣ ಹೇಳಿದ ಮೇಲೆ ಮುಗಿಯಿತು. ಅವರು ಏನೂ ಹೇಳುತ್ತಾರೋ ಅದೇ ಅಂತಿಮ ಎಂದು ಶಾಸಕ ಜಿ.ಟಿ.ದೇವೇಗೌಡ ಹೆಸರು ಹೇಳದೆ ತಿರುಗೇಟು ನೀಡಿದರು.



> **ನನ್ನ ಮೇಲೆ ಭರವಸೆ ಇಟ್ಟು ನಗರಾಧ್ಯಕ್ಷ ಜವಾಬ್ದಾರಿ ವಹಿಸಿದ ಪಕ್ಷದ ಹೈಕಮಾಂಡ್ ನಾಯಕರಿಗೆ ಧನ್ಯವಾದ ಸಲ್ಲಿಸುತ್ತೇನೆ. ನಾಯಕರ ಮಾರ್ಗದರ್ಶನದಲ್ಲಿ ಪಕ್ಷ ಸಂಘಟನೆಗೆ ದುಡಿಯುತ್ತೇನೆ. ಮಾಜಿ ಸಚಿವ ಸಾ.ರಾ.ಮಹೇಶ್ ಅಧ್ಯಕ್ಷತೆಯಲ್ಲಿ ನಗರ ವ್ಯಾಪ್ತಿಯ ಜನರೊಂದಿಗೆ ಜನತಾ ದಳ ಕಾರ್ಯಕ್ರಮ ಆಯೋಜಿಸಿದ್ದು, ಎಲ್ಲ ಹಂತದ ನಾಯಕರೂ ಕೈಜೋಡಿಸಿದ್ದಾರೆ.**
>
> ▸▸ **ಎಸ್.ಬಿ.ಎಂ.ಮಂಜು** ನಗರಾಧ್ಯಕ್ಷ, ಜೆಡಿಎಸ್

### ಚುನಾವಣೆ ನಡೆಸಲು ಯಾಕೆ ಭಯ ?

ಮೈಸೂರು: ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ನಡೆಸಲು ಮುಖ್ಯಮಂತ್ರಿಗಳಿಗೆ ಯಾಕೆ ಭಯ ಕಾಡುತ್ತಿದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಪ್ರಶ್ನಿಸಿದರು.

ನಾವೆಲ್ಲ ಬಿಜೆಪಿ– ಜೆಡಿಎಸ್ ಮೈತ್ರಿಯಲ್ಲಿದ್ದೇವೆ. ಮೈಸೂರಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಎರಡೂ ಪಕ್ಷಗಳು ಒಟ್ಟಾಗಿಯೇ ನಡೆಸಬೇಕು ಎಂದು ಕೊಂಡಿದ್ದೇವೆ. ಸಿದ್ದರಾಮಯ್ಯ ಸಿಎಂ ಆಗಿದ್ದ ಯಾವ ಸಂದರ್ಭದಲ್ಲೂ ಪಾಲಿಕೆ ಮೇಯರ್, ಜಿಪಂ ಅಧ್ಯಕ್ಷ ಸ್ಥಾನವನ್ನು ಕಾಂಗ್ರೆಸ್ ಪಡೆದಿಲ್ಲ. ಈಗ ಚುನಾವಣೆ ನಡೆದರೆ ಮತ್ತೆ ಹಿನ್ನಡೆ ಆಗಬಹುದು ಎಂಬ ಆತಂಕ ಮುಖ್ಯಮಂತ್ರಿಗಳಿಗೆ ಇರಬಹುದು.ಅವರದ್ದೇ ಪಕ್ಷದ ಮತ್ತೊಬ್ಬ ನಾಯಕರು ಮುಖ್ಯಮಂತ್ರಿ ಯಾಗಲು ಕಾದು ಕುಳಿತಿದ್ದಾರೆ. ಒಂದು ವೇಳೆ ಸ್ಥಳೀಯ ಸಂಸ್ಥೆಗಳಲ್ಲಿ, ಅದರಲ್ಲೂ ಮೈಸೂರಿನಲ್ಲಿ ಹಿನ್ನೆಡೆಯಾದರೆ ಖರ್ಚಿ ಉಳಿಸಿಕೊಳ್ಳುವುದು ಕಷ್ಟವಾಗಬಹುದು. ಹೀಗಾಗಿ ಸಿದ್ದರಾ ಮಯ್ಯ ಅವರಿಗಿಂತಲೂ ಸ್ವಪಕ್ಷದವರ ಬಗ್ಗೆಯೇ ಭಯ ಇರಬಹುದು ಎಂದು ಲೇವಡಿ ಮಾಡಿದರು. ತಂದೆ ಮುಖ್ಯಮಂತ್ರಿ, ಪುತ್ರ ವಿಧಾನ ಪರಿಷತ್ತು ಸದಸ್ಯರಾಗಿ ಅಧಿಕಾರ ಅನುಭವಿಸಿದರೆ ಸಾಲದು. ಸಮಾಜವಾದಿ ಸಿದ್ಧಾಂತದಿಂದ ಬಂದಿರುವ ಸಿದ್ದರಾಮಯ್ಯ ಅವರು ಕಾರ್ಯಕರ್ತರಿಗೂ ಅಧಿಕಾರ ನೀಡಬೇಕು ಎಂದು ಟೀಕಿಸಿದರು.

> **ನಿಖಿಲ್ ಕುಮಾರಸ್ವಾಮಿ ಅವರ ನೇತೃ ತ್ವದಲ್ಲಿ ಗ್ರಾಮಾಂತರ ಭಾಗದಲ್ಲಿ ನಡೆದ ಜನರೊಂದಿಗೆ ಜನತಾ ದಳ ಕಾರ್ಯಕ್ರಮಗಳು ಯಶಸ್ವಿಯಾಗಿವೆ. ನಗರ ವ್ಯಾಪ್ತಿಯಲ್ಲೂ ಅತ್ಯಂತ ಅಚ್ಚುಕಟ್ಟಾಗಿ ಕಾರ್ಯಕ್ರಮ ನಡೆಸಲು ತಯಾರಿ ಮಾಡಿಕೊಳ್ಳಲಾಗಿದೆ.**
>
> ▸▸ **ಅಶ್ವಿನ್ ಕುಮಾರ್** ಜಿಲ್ಲಾಧ್ಯಕ್ಷ, ಜೆಡಿಎಸ್

## ಮೊದಲ ಪುಟದಿಂದ

### ಮೀಸಲಿಗೆ ಸೋಲು

ಲೋಕಸಭೆ ಯಲ್ಲಿ ಮತದಾನ ನಡೆಯಿತು. ಕೇಂದ್ರ ಸರ್ಕಾರದ ಮಹತ್ವಕಾಂಕ್ಷಿಯ ವಿಧೇಯಕವನ್ನು ಇಂಡಿ ಕೂಟ ಸೋಲಿಸಿದೆ. ಮಹಿಳಾ ಮಿಸಲಾತಿ ಕಾಯ್ದೆಗೆ 131ನೇ ತಿದ್ದುಪಡಿ ತರುವ ಮೂಲಕ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸಲು ಕೇಂದ್ರ ಸರ್ಕಾರ ಮುಂದಾಗಿತ್ತು. ಮೂರನೇ ಎರಡರಷ್ಟು ಬಹುಮತ ಸಿಗದೆ ಮಸೂದೆಗೆ ಸೋಲಾಗಿದೆ. ಮಹಿಳಾ ಮೀಸಲು ಮಸೂದೆಗೆ ವಿಪಕ್ಷಗಳು ಸಹ ಬೆಂಬಲ ಸೂಚಿಸಿದ್ದವು. ಆದರೆ, ಕ್ಷೇತ್ರ ಪುನರ್ ವಿಂಗಡಣೆ ಮಸೂದೆಗೆ ವಿರೋಧ ವ್ಯಕ್ತಪಡಿಸಿದ್ದವು. ಕ್ಷೇತ್ರ ಪುನರ್ ವಿಂಗಡಣೆ ಮಸೂದೆ ಕೈಬಿಟ್ಟು ಮಹಿಳಾ ಮೀಸಲಾತಿ ಮಸೂದೆಯನ್ನು ಮಾತ್ರ ಮಂಡಿಸುವಂತೆ ವಿಪಕ್ಷಗಳು ಆಗ್ರಹಿಸಿದ್ದವು. ಆದರೆ ಇದಕ್ಕೆ ಬಿಜೆಪಿ ಒಪ್ಪಲಿಲ್ಲ. ವಿಪಕ್ಷಗಳನ್ನು ಸಂದಿಗ್ಧಕ್ಕೆ ಸಿಕ್ಕಿಸಲು ಆಡಳಿತ ಪಕ್ಷ ಮುಂದಾಗಿತ್ತು. ಆದರೆ ವಿಪಕ್ಷಗಳು ಬಿಜೆಪಿಯ ನಡೆಯನ್ನು ವಿರೋಧಿಸಿ ಮತ ಚಲಾಯಿಸಿದವು. ಮಸೂದೆಯಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ ಎಂದು ತಮಿಳುನಾಡು, ಕೇರಳ, ತೆಲಂಗಾಣ ಮತ್ತು ಕರ್ನಾಟಕ ವಿರೋಧ ವ್ಯಕ್ತಪಡಿಸಿದ್ದವು.

### ಅರಣ್ಯ ಚಾರಣಕ್ಕೆ ನೇಚರ್ ಗೈಡ್ ಕಡ್ಡಾಯ:

ಚಾರಣಿಗರ ಸುರಕ್ಷತೆಗಾಗಿ ರೂಪಿಸಲಾಗಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್.ಓ.ಪಿ.) ಬಿಡುಗಡೆ ಮಾಡಿ ಮಾತನಾಡಿದ ಅವರು, ಪ್ರತಿ 10 ಚಾರಣಿಗರಿಗೆ ಒಬ್ಬರು ಸ್ಥಳೀಯ ಪ್ರಕೃತಿ ಮಾರ್ಗದರ್ಶಕರಿರುತ್ತಾರೆ. ಎಲ್ಲ ಚಾರಣ ಪಥಗಳಲ್ಲಿ ಒಂದು ಸಲಕ್ಕೆ ಗರಿಷ್ಠ 150 ಜನರಿಗೆ ಮಾತ್ರ ಸೀಮಿತಗೊಳಿಸಲಾಗುವುದು ಎಂದು ಹೇಳಿದರು.

ಚಾರಣಕ್ಕೆ ಬರುವವರು ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯ. ಒಂದೊಮ್ಮೆ ಯಾವುದೇ ದಿನ ಒಬ್ಬರೇ ಚಾರಣಿಗರು ನೋಂದಾಯಿಸಿದ್ದರೂ ಗೈಡ್ ಸೌಲಭ್ಯ ಕಲ್ಪಿಸಲಾಗುವುದು. ಗೈಡ್ ಇಲ್ಲದೆ ಚಾರಣಕ್ಕೆ ಅವಕಾಶ ಇರುವುದಿಲ್ಲ ಎಂದರು.

ಇತ್ತೀಚೆಗೆ ಕೊಡಗಿನ ತಡಿಯಾಂಡಮೋಳ್ ಬೆಟ್ಟದಲ್ಲಿ ಕೇರಳದಿಂದ ಚಾರಣಕ್ಕೆ ಬಂದಿದ್ದ ಮಹಿಳೆ ನಾಪತ್ತೆಯಾಗಿ ಕಾಡಿನಲ್ಲಿ 3 ದಿನ ಕಳೆಯುವಂತಾಗಿತ್ತು. ಅರಣ್ಯ ವ್ಯಾಪ್ತಿಗೆ ಒಳಪಡದ ಚಿಕ್ಕಮಗಳೂರಿನ ಮಾಣಿಕ್ಯಧಾರಾ ಬಳಿ ನಾಪತ್ತೆಯಾದ ಬಾಲಕಿ ಶವವಾಗಿ ಪತ್ತೆಯಾದ ಹಿನ್ನೆಲೆಯಲ್ಲಿ ಚಾರಣಿಗರ ಸುರಕ್ಷತೆಗಾಗಿ ಈ ಎಸ್.ಓ.ಪಿ. ರೂಪಿಸಲು ಸೂಚಿಸಿದ್ದಾಗಿ ಅವರು ತಿಳಿಸಿದರು.

### 7 ಮಂದಿ ಸಜೀವ ದಹನ

ಬರುತ್ತಿದ್ದ ಖಾಸಗಿ ಬಸ್ ಮುಖಾಮುಖಿ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಕಾರು ಹಾಗೂ ಬಸ್ಸಿಗೆ ಬೆಂಕಿ ಹೊತ್ತಿಕೊಂಡಿದೆ. ಪರಿಣಾಮ ಕಾರು ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ. ಕಾರಿನಲ್ಲಿದ್ದ ಏಳು ಜನರು ಸಾವನ್ನಪ್ಪಿದ್ದಾರೆ. ಬಸ್ಸಿನಲ್ಲಿದ್ದ ಎಲ್ಲಾ 33 ಜನ ಪ್ರಯಾಣಿಕರು ಪಾರಾಗಿದ್ದಾರೆ. ಮರಣೋತ್ತರ ಪರೀಕ್ಷೆಗಾಗಿ ಮೃತದೇಹಗಳನ್ನ ಸುರಪುರ ತಾಲೂಕು ಆಸ್ಪತ್ರೆಗೆ ರವಾನಿಸಲಾಗಿದೆ. ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿ ಬೆಂಕಿ ನಂದಿಸಿದರು. ಸುರಪುರ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

### ಏ.20ರಿಂದ ಬೇಸಿಗೆ ಶಿಬಿರ

ಚಾಮರಾಜನಗರ: ಪಟ್ಟಣದ ಜೋಡಿ ರಸ್ತೆಯಲ್ಲಿರುವ ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಪ್ರಕಾಶ ಭವನದಲ್ಲಿ ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಾಸಕ್ಕಾಗಿ ಮಕ್ಕಳ ಬೇಸಿಗೆಯ ಸಂಭ್ರಮದ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ, ಎಂದು ಮನೋಬಲ ತರಬೇತುದಾರರಾದ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 6 ರಿಂದ 16 ವಯಸ್ಸಿನ ಮಕ್ಕಳಿಗಾಗಿ ಎಳೆಯ ಮನಸ್ಸಿಗೆ ಏಕಾಗ್ರತೆ ಹಾಗೂ ದೃಢತೆ ಮೂಡಿಸಲು, ಪರಿಸ್ಥಿತಿಗಳಲ್ಲಿ ಕುಗ್ಗದೆ, ಧೈರ್ಯವನ್ನು ಧರಿಸಲು, ಬದಲಾದ ಈ ಪೀಳಿಗೆಗೆ ಶ್ರೇಷ್ಠ ಮೌಲ್ಯಗಳನ್ನು ತುಂಬಲು, ಮಕ್ಕಳನ್ನು ದೇಶದ ಉತ್ತಮ ಪ್ರಜೆಗಳನ್ನಾಗಿ ಮಾಡಲು, ಪರಸ್ಪರದಲ್ಲಿ ಏಕತೆಯ ಭಾವನೆ ಮೂಡಿಸಲು, ಈ ಪ್ರಯತ್ನದಲ್ಲಿ ಸರ್ವರು ಕೈಜೋಡಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮೌಲ್ಯಭರಿತ ಆಟಗಳು, ರಾಜಯೋಗ ಧ್ಯಾನ, ಉಲ್ಲಾಸವನ್ನು ಹೆಚ್ಚಿಸುವ ಚಟುವಟಿಕೆಗಳು,ಏರೋಜಿಕ್ ವ್ಯಾಯಾಮ,ಧ್ಯಾನ, ಸಕರಾತ್ಮಕ ಚಿಂತನೆ, ಸ್ವಚ್ಛ ಮನಸ್ಸು, ಸ್ವಚ್ಛ ಜೀವನದಿಂದ,ಸ್ವಚ್ಛ ಭಾರತ, ಇತ್ಯಾದಿ ವಿಷಯಗಳನ್ನೊಳಗೊಂಡಂತಹ ಶಿಬಿರವು ದಿನಾಂಕ ಏ. 20 ರಿಂದ 22 ರವರೆಗೆ ಸಮಯ ಬೆಳಗ್ಗೆ 10 ರಿಂದ ಸಂಜೆ 4ರ ವರೆಗೆ ಹಮ್ಮಿಕೊಳ್ಳಲಾಗಿದೆ. ಹೆಸರನ್ನು ಮೊದಲೇ ನೋಂದಾಯಿಸಿಕೊಳ್ಳಬೇಕು ಹೆಚ್ಚಿನ ವಿವರಗಳಿಗೆ 7483520495, 7899820430 ಅನ್ನು ಸಂಪರ್ಕಿಸುವಂತೆ ಕೋರಲಾಗಿದೆ

### ನ್ಯಾಯಾಧೀಶ ಈಶ್ವರ್ ಹೇಳಿಕೆ । ಅಂಬೇಡ್ಕರ್ 135ನೇ ಜನ್ಮದ ಪ್ರಯುಕ್ತ ಕಾನೂನು ಅರಿವು ಕಾರ್ಯಕ್ರಮ

# ಭಾರತದ ಸಂವಿಧಾನವು ವಿಶ್ವದಲ್ಲೇ ಅತ್ಯಂತ ಶ್ರೇಷ್ಠ

ಚಾಮರಾಜನಗರ: ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು ಬರೆದುಕೊಟ್ಟಿರುವ ಸಂವಿಧಾನವು ವಿಶ್ವದಲ್ಲೇ ಅತ್ಯಂತ ಶ್ರೇಷ್ಠ ವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾದ ಈಶ್ವರ್ ಹೇಳಿದರು.

ತಾಲೂಕಿನ ಉತ್ತುವಳ್ಳಿಯ ಆಶ್ರಯ ಸೇವಾ ಚಾರಿಟಬಲ್ ಟ್ರಸ್ಟ್ ನಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ ರವರ 135 ನೇ ಜನ್ಮದಿನದ ಪ್ರಯುಕ್ತ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಂವಿಧಾನವು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವ ಪವಿತ್ರ ಗ್ರಂಥವಾಗಿದ್ದು, ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಡಿ, ಸಮಾನತೆ ಮತ್ತು ಮೂಲಭೂತ ಹಕ್ಕುಗಳನ್ನು ಖಾತರಿಪಡಿಸುತ್ತದೆ.

ನಾಗರಿಕರಿಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಘನತೆಯಿಂದ ಬದುಕುವ ಹಕ್ಕನ್ನು ಒದಗಿಸುತ್ತದೆ.

ಸಮಾಜದ ಎಲ್ಲಾ ವರ್ಗದ ಜನರಿಗೆ, ವಿಶೇಷವಾಗಿ ಹಿಂದುಳಿದವರಿಗೆ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿದೆ ಎಂದರು.




ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಒಂದು ಜಾತಿಗೆ ಸೀಮಿತವಲ್ಲ ದೇಶದ ಎಲ್ಲವರ್ಗದ ನಾಯಕರು. ಆಗಾಗಿ ಅವರು ಬರೆದುಕೊಟ್ಟಿರುವ ಸಂವಿಧಾನ ಅಳವಡಿಸಿಕೊಂಡು ಅಂಬೇಡ್ಕರ್ ಅವರನ್ನು ಪ್ರತಿಯೊಬ್ಬ ನಾಗರಿಕ ಪೂಜಿಸಬೇಕು ಎಂದರು.

ಉದ್ಯಮಿ ಶ್ರೀನಿಧಿ ಕುದರ್ ಮಾತನಾಡಿ, ಡಾ.ಬಿ.ಆರ್ ಅಂಬೇಡ್ಕರ್ ಅವರು ಮಹಿಳೆಯರ ಸಬಲೀಕರಣಕ್ಕಾಗಿ ಮುನ್ನುಡಿ ಬರೆದರು ಎಂದರು.

ಭೋಗಾಪುರ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಪಿ.ದೇವರಾಜು ಮುಖ್ಯಭಾಷಣ ಮಾತನಾಡಿ, ಅಂಬೇಡ್ಕರ್ ಜಯಂತಿ ಯನ್ನು ವಿಶ್ವಸಂಸ್ಥೆಯು ಆಚರಣೆ ಮಾಡುತ್ತಿದ್ದು ಅವರ ಜನ್ಮದಿನವನ್ನು ವಿಶ್ವ ಜ್ಞಾನ ದಿನವನ್ನಾಗಿ ಆಚರಣೆ ಮಾಡಲಾಗುತ್ತಿದೆ. ಬ್ರಿಟಿಷರನ್ನು ಭಾರತಕ್ಕೆ ಸ್ವಾತಂತ್ರ್ಯ ಕೊಡಿ ಎಂದು ನೇರವಾಗಿ ಕೇಳಿದ ವ್ಯಕ್ತಿ ಅಂಬೇಡ್ಕರ್. ಅವರ ಕೊಡುಗೆ ಅಪಾರವಾಗಿದೆ ಎಂದರು. ಕೆಇಬಿ ಜೂನಿಯರ್ ಇಂಜಿನಿಯರ್ ವಿ. ಮಯೂರ್, ಮಾತನಾಡಿದರು. ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಸಂಚಾಲಕ ಬಿ.ಕೆ.ದಾನೇಶ್ವರಿ ಅಧ್ಯಕ್ಷತೆ ವಹಿಸಿದ್ದರು. ಆಶ್ರಯ ಸೇವಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಎಂ.ರಮೇಶ್ ಪ್ರಭು ಪ್ರಾಸ್ತಾವಿಕ ಭಾಷಣ ಮಾಡಿದರು. ಗಡಿನಾಡ ಜನಪದ ಕೋಗಿಲೆಗಳ ಸಾಂಸ್ಕೃತಿಕ ವೇದಿಕೆ ಜಿಲ್ಲಾಧ್ಯಕ್ಷ ಜ.ಸುರೇಶ್ ನಾಗ್ ನಿರೂಪಿಸಿದರು ಇತರರು ಹಾಜರಿದ್ದರು.

# ರಸ್ತೆ ಅಭಿವೃದ್ಧಿಗೆ ಗುದ್ದಲಿಪೂಜೆ



ಗುಂಡ್ಲುಪೇಟೆ: ತಾಲ್ಲೂಕಿನ ವಿವಿಧ ಗ್ರಾಮದ ಸಂಪರ್ಕ ರಸ್ತೆ ಅಭಿವೃದ್ಧಿಗೆ ಮುಖ್ಯಮಂತ್ರಿ ಗಳ ವಿಶೇಷ ಅನುದಾನದಲ್ಲಿ ಸುಮಾರು ಏಳು ಕೋಟಿ ವೆಚ್ಚದಲ್ಲಿ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಗುದ್ದಲಿಪೂಜೆ ನಡೆಸಿದರು.

ತಾಲ್ಲೂಕಿನ ಬೇಗೂರು-ಕೌಲಂದೆ ರಸ್ತೆ ಯ ಸುಮಾರು 2 ಕಿ.ಮೀ ವರೆಗೆ 2.5. ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣಕ್ಕೆ ಕಮರಹಳ್ಳಿ ಬಳಿ ಗುದ್ದಲಿಪೂಜೆ ನಡೆಸಿದರು,ನಂತರ ಯಡಹುಂಡಿ ಯಿಂದ ಪಡಗೂರು ವರೆಗೆ 1.5 ಕೋಟಿ ವೆಚ್ಚದಲ್ಲಿ ಗುದ್ದಲಿಪೂಜೆ, ತೆರಕಣಾಂಬಿ ಬಳಿ ಜೆಎಸ್ ಎಸ್ ಶಾಲೆಯಿಂದ, ಲಕ್ಷ್ಮೀ ವರದರಾಜಸ್ವಾಮಿ ದೇವಸ್ಥಾನದ ವರೆಗೆ ಒಂದು ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣ, ಕೆ,ಕೆ ಹುಂಡಿ ಯಿಂದ ಕರಕಲಮಾದಳ್ಳಿ ವರೆಗೆ ಎರಡು ಕೋಟಿ, ವೆಚ್ಚದಲ್ಲಿ ಗುದ್ದಲಿಪೂಜೆ ನೆರವೇರಿಸಿದರು.

ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿ ನಡೆಯಲಿದ್ದು ಮುಂದಿನ ದಿನಗಳಲ್ಲಿ ರಸ್ತೆ ನಿರ್ಮಾಣ ಕ್ಕೆ ಆದ್ಯತೆ ನೀಡಲಾಗುತ್ತದೆ ಮುಂದೆ ಹೆಚ್ಚಿನ ಅನುದಾನ ತಂದು ರಸ್ತೆ ಅಭಿವೃದ್ಧಿ ಮಾಡಲಾಗುವುದು ಈ ವಿಚಾರವಾಗಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಜೊತೆ ಮಾತನಾಡಿದ್ದು ಅನುದಾನ ನೀಡುವ ಭರವಸೆ ಕೊಟ್ಟಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ಎಚ್ ಎಸ್ ನಂಜುಂಡಪ್ರಸಾದ್, ಕುಳ್ಳಪ್ಪನ ಮಹದೇವಪ್ಪ, ಗೌಡಕೆ ಬೆಳ್ಳಪ್ಪ, ರವಿ, ಕುಮಾರ, ಚಿನ್ನಸ್ವಾಮಿ, ಹೆಚ್ ಎಂ ಬಸವರಾಜು, ಕೋಟೆಕೆರೆ ಪಿಎಸಿಸಿ ಅಧ್ಯಕ್ಷ ಕೆ ಎಂ ಮಹದೇವಸ್ವಾಮಿ, ರಾಜೇಶ್, ಕಗ್ಗಳ ಮಾದಪ್ಪ, ಕಾಳಸ್ವಾಮಿ, ಮಾಜಿ ಜಿ.ಪಂ ಸದಸ್ಯ ಮಹದೇವಪ್ಪ ತೆರಕಣಾಂಬಿ, ಮಾಜಿ ತಾ.ಪಂ ಸದಸ್ಯ ನಾಗರಾಜು, ಚಿನ್ನಸ್ವಾಮಪ್ಪ, ಮಾಜಿ ಎಪಿಎಂಸಿ ಅಧ್ಯಕ್ಷ ಬಸವರಾಜು, ಬಸವಣ್ಣ ಕೊಡಸೋಗೆ,, ಸೇರಿದಂತೆ ಮತ್ತಿತರರಿದ್ದರು.

# ಜಿಲ್ಲಾಧಿಕಾರಿಯಿಂದ ಜನಗಣತಿ ಕೆಲಸ ಪರಿಶೀಲನೆ



ಮೈಸೂರು: ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಮೈಸೂರು ನಗರದ ತೊಣಚಿ ಕೊಪ್ಪಲ್ ಪ್ರದೇಶದಲ್ಲಿ ಜನಗಣತಿ ಕೆಲಸಗಳ ಬಗ್ಗೆ ಪರಿಶೀಲನೆ ನಡೆಸಿದರು.

ಗಣತಿದಾರರು ಮನೆಗಳ ಮ್ಯಾಪಿಂಗ್ ಕೆಲಸ ನಿರ್ವಹಿಸುತ್ತಿದ್ದು, ಗಣತಿದಾರರಿಂದ ಜಿಲ್ಲಾಧಿಕಾರಿಗಳು ಕಾರ್ಯನಿರ್ವಹಣೆಯ ಬಗ್ಗೆ ಮಾಹಿತಿ ಪಡೆದುಕೊಂಡರು. ಶನಿವಾರದವರೆಗೆ ಮನೆಗಳ ಮ್ಯಾಪಿಂಗ್ ಕೆಲಸ ನಡೆಯುತ್ತಿದ್ದು, ನಂತರ ಮನೆ-ಮನೆಗೆ ಗಣತಿದಾರರು ಭೇಟಿ ನೀಡಿ ಮಾಹಿತಿ ಪಡೆಯಲಿದ್ದಾರೆ. ಸಾರ್ವಜನಿಕರು ಗಣತಿದಾರರಿಗೆ ನಿಖರ ಮಾಹಿತಿ ನೀಡಿ ಎಂದರು.

ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಉಪಯುಕ್ತ ಹಾಗೂ ಮೈಸೂರು ನಗರ ಜನಗಣತಿ ಅಧಿಕಾರಿ ಜಿ. ಎಸ್.ಸೋಮಶೇಖರ್ ಇತರರು ಉಪಸ್ಥಿತರಿದ್ದರು.

# ಸಿಬಿಎಸ್‌ಸಿ ಫಲಿತಾಂಶ: ಹೋಲಿ ಕ್ರೆಸೆಂಟ್ ಶಾಲೆಗೆ ಶೇ.100 ಫಲಿತಾಂಶ



ರಾಮನಗರ: ನಗರದ ಹೋಲಿ ಕ್ರೆಸೆಂಟ್ ಆಂಗ್ಲ ಶಾಲೆಯ ಸಿಬಿಎಸ್‌ಸಿ ವಿದ್ಯಾರ್ಥಿಗಳು ಶೇ 100 ಫಲಿತಾಂಶವನ್ನು ಗಳಿಸಿಕೊಟ್ಟಿದ್ದಾರೆ.

ಹೋಲಿ ಕ್ರೆಸೆಂಟ್ ಸಮೂಹ ಶಿಕ್ಷಣ ಸಂಸ್ಥೆಯ 2025-26 ನೇ ಶೈಕ್ಷಣಿಕ ಸಾಲಿನ 10ನೇ ತರಗತಿ ಸಿ.ಬಿ.ಎಸ್.ಇ ವಾರ್ಷಿಕ ಪರೀಕ್ಷೆ ತೆಗೆದುಕೊಂಡಿದ್ದ ಎಲ್ಲ 33 ವಿದ್ಯಾರ್ತಿಗಳು ಉತ್ತೀರ್ಣರಾಗಿದ್ದಾರೆ. ಈ ಪೈಕಿ 27 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ ಹಾಗೂ 6 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶಾಶ್ಮೀನ್ ಅಹಮದ್ ಶೇ 96.4 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಲಲಿತಾದಿತ್ಯ ಗೌಡ ಶೇ 93 ಅಂಕಗಳನ್ನು ಪಡೆದು ದ್ವಿತೀಯ ಸ್ಥಾನದಲ್ಲಿದ್ದಾರೆ. ಪ್ರಾರ್ಥನಾ ಡಿ. ಜಿ ಶೇ 91.6 ಅಂಕಗಳನ್ನು ಪಡೆದು ತೃತೀಯ ಸ್ಥಾನಗಳಿಸಿದ್ದಾರೆ. ನೀತು ಜಿ ಶೇಕಡ 91 ಅಂಕಗಳನ್ನು ಪಡೆದು ನಾಲ್ಕನೇ ಸ್ಥಾನ ಮತ್ತು ಸೈಯದ ಜುನೇರಾ ತಜ್ಮುಲ್ ಶೇ 91 ಅಂಕಗಳನ್ನು ಪಡೆದು ಐದನೆಯ ಸ್ಥಾನಗಳಿಸಿದ್ದಾಋಎ. ವಿದ್ಯಾರ್ಥಿಗಳು ಮಾಡಿದ ಸಾಧನೆ ಶಾಲೆಗೆ ಮತ್ತು ಅವರ ತಂದೆ ತಾಯಿಯರಿಗೆ ಕೀರ್ತಿ ತಂದುಕೊಟ್ಟಿದ್ದಾರೆ ಎಂದು ಶಾಲೆಯ ಅಧ್ಯಕ್ಷೆ ಡಾ.ಶಾಜಿಯಾ, ಸಂಸ್ಥಾಪಕ ಕಾರ್ಯದರ್ಶಿ ಅಲ್ತಾಫ್ ಅಹಮದ್, ಪ್ರಾಂಶುಪಾಲರಾದ ಯೇಸುದಾಸ್, ಉಪಪ್ರಾಂಶುಪಾಲರಾದ ಲತಾ ಆನಂದ ಮತ್ತು ಬೋಧಕ ಬೋದಕೇತರ ವರ್ಗ ಸಂತಸ ವ್ಯಕ್ತಪಡಿಸಿದ್ದಾರೆ.

**ಜಿಲ್ಲಾಧಿಕಾರಿಗಳಿಂದ ಅಭಿನಂದನೆ**

2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 591 ಅಂಕಗಳನ್ನು ಗಳಿಸಿದ ಹೋಲಿ ಕ್ರೆಸೆಂಟ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಅಲ್‌ಫಿಯಾ ನೂರೈನ್ ಅವರನ್ನು ಜಿಲ್ಲಾಧಿಕಾರಿ ಯಶವಂತ್ ವಿ ಗುರುಕರ್ ಅವರು ಸನ್ಮಾನಿಸಿ ಗೌರವಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿದ್ಯಾರ್ಥಿನಿ ಅಲ್‌ಫಿಯಾ ನೂರೈನ್ ಅವರನ್ನು ಅಭಿನಂದಿಸಿದ ಜಿಲ್ಲಾಧಿಕಾರಿಗಳು, ಪಿಯುಸಿ ಪರೀಕ್ಷೆಯು ಮುಂದಿನ ಭವಿ?ಕ್ಕೆ ಟರ್ನಿಂಗ್ ಪಾಯಿಂಟ್ ಆಗಿದ್ದು ಮುಂದಿನ ವ್ಯಾಸಂಗದ ದಿನಗಳಲ್ಲಿ ಉನ್ನತ ಶಿಕ್ಷಣದಲ್ಲಿಯೂ ಉನ್ನತ ಶ್ರೇಣಿಯಲ್ಲಿ ಸಾಧನೆ ಮಾಡಿ ಪೋ?ಕರಿಗೆ ಹಾಗೂ ಗುರುಹಿರಿಯರಿಗೆ ಮತ್ತು ಜಿಲ್ಲೆಗೆ ಕೀರ್ತಿತರುವಂತೆ ಶುಭ ಹಾರೈಸಿದರು. ಅಲ್‌ಫಿಯಾ ನೂರೈನ್ ವಿದ್ಯಾರ್ಥಿನಿ ಪಿಯುಸಿ ಪರೀಕ್ಷೆಯಲ್ಲಿ 600 ಅಂಕಗಳಿಗೆ 591 ಅಂಕ ಪಡೆದಿದ್ದು, ಹಿಂದಿ ಬಾ?ಯಲ್ಲಿ-99, ಇಂಗ್ಲೀ?-96, ಭೌತಶಾಸ್ತ-100, ರಸಾಯನ ಶಾಸ್ತ್ರ-96, ಗಣಿತ-100 ಮತ್ತು ಜೀವಶಾಸ್ತ್ರದಲ್ಲಿ-100 ಅಂಕಗಳನ್ನು ಪಡೆದಿದ್ದಾರೆ. ರಾಜ್ಯದ 8ನೇ ರ‍್ಯಾಂಕ್, ಜಿಲೆಯಲ್ಲಿ 3ನೇ ಟಾಪರ್ ಹಾಗೂ ತಾಲ್ಲೂಕಿನಲ್ಲಿ 2ನೇ ಟಾಪರ್ ಆಗಿ ಸಾಧನೆ ಮಾಡಿದ್ದಾರೆ ಎಂದು ಕಾಲೇಜಿನ ಸಂಸ್ಥಾಪಕ ಕಾರ್ಯದರ್ಶಿ ಅಲ್ತಾಫ್ ಅಹಮದ್ ತಿಳಿಸಿದರು. ಈ ಸಂದರ್ಭದಲ್ಲಿ ಹೋಲಿ ಕ್ರೆಸೆಂಟ್ ಸಮೂಹ ವಿದ್ಯಾಸಂಸ್ಥೆ ಆಡಳಿತ ಮಂಡಳಿಯ ಪ್ರೊ. ಡಾ.ಪ್ರಕೃದ್ಧೀನ್, ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ.ಶಾಜಿಯಾ, ಪ್ರಾಂಶುಪಾಲ ಸ್ಟಾನ್ಲಿಪಾಲ್, ಉಪ ಪ್ರಾಂಶುಪಾಲ ಅರುಣ್‌ಕುಮಾರ್ ಹಾಗೂ ವಿದ್ಯಾರ್ಥಿನಿಯ ಪೋ?ಕರು ಇದ್ದರು.

# ಯುವಜನತೆ ಕ್ರೀಡಾಪಟುಗಳಾಗಲಿ

## ಜಿಲ್ಲಾ ಕ್ರೀಡಾಂಗಣದಲ್ಲಿ ನಟ ವಿಷ್ಣುವರ್ಧನ್ ಸ್ಮರಣೆಯಲ್ಲಿ ಕ್ರಿಕೆಟ್ ಪಂದ್ಯಾವಳಿ

ರಾಮನಗರ: ಯುವ ಸಮುದಾಯ ಉತ್ತಮ ಕ್ರೀಡಾಪಟುಗಳಾಗ ಬೇಕು, ಈ ನಿಟ್ಟಿನಲ್ಲಿ ಅಗತ್ಯ ತರಬೇತಿ ಪಡೆಯಬೇಕು, ರಾಷ್ಟ್ರದ ಹೆಮ್ಮೆಯಾಗಬೇಕು ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಕರೆ ನೀಡಿದರು.

ನಗರದಲ್ಲಿರುವ ಜಿಲ್ಲಾ ಕ್ರೀಡಾಂಗಣದಲ್ಲಿ ವಿಷ್ಣುನಂದನ ಚಾರಿಟಬಲ್ ಟ್ರಸ್ಟ್ ವತಿಯಿಂದ ನಟ ವಿಷ್ಣುವರ್ದನ್ ಸವಿನೆನಪಿನೊಂದಿಗೆ ಆಯೋಜಿಸಿರುವ ಮೂರು ದಿನಗಳ ರಾಮನಗರ ಪ್ರೀಮಿಯರ್ ಲೀಗ್ ನಾಲ್ಕನೇ ಆವೃತ್ತಿಯ ವಿಷ್ಣುಕಪ್ ಕ್ರಿಕೆಟ್ ಪಂದ್ಯಾವಳಿಗೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು. ಜೀವನದಲ್ಲಿ ಏಳು-ಬೀಳು ಸಹಜ, ಕ್ರೀಡೆಗಳಲ್ಲೂ ಸೋಲು-ಗೆಲುವು ಸಹಜ. ಕ್ರೀಡೆಗಳಲ್ಲಿ ಸೋತು ನಂತರ ಗೆದ್ದಿರುವವರು ಇದ್ದಾರೆ, ಗೆದ್ದು ನಂತರ ಸೋಲು ಕಂಡಿರುವವರು ಇದ್ದಾರೆ ಎಂದು ನೆರೆದಿದ್ದ ಕ್ರಿಕೆಟ್ಟಿಗರಲ್ಲಿ ಸ್ಫೂರ್ತಿ ತುಂಬಿದರು.

ಈ ಹಿಂದೆ ಶ್ರೀಲಂಕಾ ತಂಡ ಉತ್ತಮ ಬಲಿಷ್ಠ ತಂಡ ಅಂತಲೇ ಗುರುತಿಸಿಕೊಂಡಿತ್ತು. ಈಗ ಅದಕ್ಕೂ ಮೀರಿ ಉತ್ತಮ ಪ್ರದರ್ಶನ ನೀಡುವ ಕ್ರಿಕೆಟ್ ತಂಡಗಳು ಇವೆ. ರಘುನಂದನ್ ಮತ್ತು ಸ್ನೇಹಿತರು ಕ್ರಿಕೆಟ್ ಪಂದ್ಯಾವಳಿ ಆಯೋಜಿದ್ದಾರೆ, ಕ್ರಿಕೆಟ್ ಆಟಗಾರರಿಗೆ ವೇದಿಕೆ ಕಟ್ಟಿಕೊಟ್ಟಿದ್ದಾರೆ. ಅವರು ಇಂತಹ ಮತ್ತಷ್ಟು ಕಾರ್ಯಕ್ರಮಗಳನ್ನು ಆಯೋಜಿಸುವ ಶಕ್ತಿಯನ್ನು ದೇವರು ಕರುಣಿಸಲಿ ಎಂದು ಶುಭ ಕೋರಿದರು.

**ನಟ ವಿಷ್ಣುವರ್ಧನ್ ಶ್ರೇಷ್ಠ ಕಲಾವಿದ**

ಸಾಹಸಸಿಂಹ ವಿಷ್ಣುವರ್ದನ್ ನಾಡು ಕಂಡ ಶ್ರೇಷ್ಠ ಕಲಾವಿದ, ಅವರ ಜೀವನದುದ್ದಕ್ಕೂ ಮನೆಮಂದಿ ಕುಳಿತು ನೋಡುವಂತಹ ಉತ್ತಮ ಸಂದೇಶಗಳನ್ನು ನೀಡುವ ಚಿತ್ರಗಳನ್ನು ನಾಡಿಗೆ ಕೊಟ್ಟಿದ್ದಾರೆ. ಅವರು ಚಲನ ಚಿತ್ರಗಳಲ್ಲಿ ತ್ಯಾಗ, ಪ್ರೀತಿ, ವಾತ್ಸಲ್ಯಗಳನ್ನು ತೋರಿಸುವ ಮೂಲಕ ಅವರ ನಟನೆಯಲ್ಲಿ ಹೊರ ಬಂದ ಚಿತ್ರಗಳನ್ನು ಇಂದಿಗೂ ಸ್ಮರಿಸಬೇಕಿದೆ ಎಂದ ಅವರು ವಿಷ್ಣುವರ್ಧನ್ ಅವರ ಹೆಸರಿನ ಚಿತ್ರಗಳನ್ನು ಕ್ರಿಕೆಟ್ ತಂಡಗಳಿಗೆ ನಾಮಕರಣ ಮಾಡಿ ವಿಷ್ಣುವರ್ಧನ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್‌ಶೆಟ್ಟಿ ಬಣ) ರಾಜ್ಯಾಧ್ಯಕ್ಷ ಪ್ರವೀಣ್‌ಕುಮಾರ್‌ಶೆಟ್ಟಿ ಅಂಗಳದಲ್ಲಿ ಬ್ಯಾಟಿಂಗ್ ಮಾಡುವ ಮೂಲಕ ಯುವಕರಲ್ಲಿ ಸ್ಫೂರ್ತಿ ತುಂಬಿ ಮಾತನಾಡಿ ಕರ್ನಾಟಕದಲ್ಲಿ ಕನ್ನಡ ಉಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ನಿಮ್ಮೆಲ್ಲರ ಸಹಕಾರದಲ್ಲಿ ನಾಡು, ನುಡಿಯ ಪರವಾಗಿ ಹೋರಾಟ ಮಾಡುವ ಕೆಲಸದಲ್ಲಿ ನಿರತನಾಗಿದ್ದೇನೆ. ಹೋರಾಟಗಾರರು ಧ್ವನಿ ಎತ್ತದಿದ್ದರೆ ಕರ್ನಾಟಕವನ್ನೇ ಮಾರಾಟ ಮಾಡುವ ಜನಪ್ರತಿನಿಧಿಗಳಿದ್ದಾರೆ. ಈ ಬಗ್ಗೆ ಯುವಕರು ನಾಡಿನ ಬಗ್ಗೆ ಚಿಂತನೆ ನಡೆಸಿಕೊಂಡು ಕ್ರೀಡಾ ಸ್ಫೂರ್ತಿ ಮೆರೆಯಿರಿ ಎಂದು ಸಲಹೆ ನೀಡಿದರು.

ರಾಮನಗರ ಪ್ರೀಮಿಯರ್ ಲೀಗ್‌ನಲ್ಲಿ ಯಶಸ್ವಿಯಾಗಿ ಐಪಿಎಲ್‌ನಲ್ಲಿ ಸ್ಥಾನ ಪಡೆಯುವ ಯಶಸ್ವಿ ಉದಯೋನ್ಮುಖ ಆಟಗಾರರಾಗಿ ರಾಮನಗರದ ಕ್ರಿಕೆಟ್ ಆಟಗಾರರು ಹೊರಹೊಮ್ಮಿ ಎಂದು ಕ್ರೀಡಾಪಟು ಗಳಿಗೆ ಪ್ರೋತ್ಸಾಹದ ನುಡಿಗಳನ್ನಾಡಿದರು.

ಪಂದ್ಯಾವಳಿ ಆಯೋಜಕ ರಘುನಂದನ್.ಎಸ್, ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್‌ಶೆಟ್ಟಿ ಬಣ) ಜಿಲ್ಲಾಧ್ಯಕ್ಷ ಎಂಎನ್‌ಆರ್ ಮಂಜು, ನಗರ ಘಟಕದ ಅಧ್ಯಕ್ಷ ವಿನೋದ್, ತಾಲೂಕು ಅಧ್ಯಕ್ಷ ಪ್ರತಾಪ್, ಕರುನಾಡ ಸೇನೆ ಉಪಾಧ್ಯಕ್ಷ ಜಗದೀಶ್, ರಾಜ್ಯ ಉಸ್ತುವಾರಿ ಅಧ್ಯಕ್ಷ ವಿ.ಎಸ್.ಗಂಗಾಧರ್, ಆರ್‌ಬಿಎಲ್ ಲೋಕೇಶ್, ಪುಟ್ಟರಾಜು, ನಿಖಿಲ್, ಸುರೇಶ್, ಪ್ರವೀಣ್ ನವಚೇತನ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಂಜುನಾಥ್ ಸೇರಿದಂತೆ ಕ್ರಿಕೆಟ್ ಪಟುಗಳು ಇದ್ದರು.




### ತಂಡಗಳಿಗೆ ವಿಷ್ಣುವರ್ದನ್ ನಟಿಸಿದ ಚಿತ್ರಗಳ ಹೆಸರು

**ನಟ ವಿಷ್ಣುವರ್ಧನ್ ಅವರ ಸ್ಮರಣೆಯಲ್ಲಿ ವಿಷ್ಣುನಂದನ ಚಾರಿಟಬಲ್ ಟ್ರಸ್ಟ್ ಆಯೋಜಿಸಿರುವ ಕ್ರಿಕೆಟ್ ಪಂದ್ಯಾವಳಿಯಲ್ಲಿ 16 ತಂಡಗಳು ಭಾಗವಹಿಸುತ್ತಿವೆ. ವಿಷ್ಣುವರ್ಧನ್ ಅವರು ನಟಿಸಿರುವ ಚಿತ್ರಗಳ ಹೆಸರುಗಳನ್ನೇ ಪ್ರತಿ ತಂಡಕ್ಕೂ ನಾಮಕರಣ ಮಾಡಿರುವುದು ಪಂದ್ಯಾವಳಿಯ ವಿಶೇಷ. ಕೋಟಿಗೊಬ್ಬ, ಸೂರ್ಯವಂಶ, ಸಾಹಸಸಿಂಹ, ಜಯಸಿಂಹ, ಆಪ್ತರಕ್ಷಕ, ಒಂದೇಗುರಿ, ದಾದಾ, ಆಪ್ತಮಿತ್ರ, ಹೃದಯವಂತ, ಕದಂಬ, ನಾಗರಹಾವು, ದಿಗ್ಗಜರು, ಪರ್ವ, ಸಿಂಹಘರ್ಜನೆ, ಬೆಂಕಿಬಿರುಗಾಳಿ, ಸ್ನೇಹಿತರ ಸವಾಲು ಚಿತ್ರಗಳ ಹೆಸರುಗಳನ್ನು ತಂಡಗಳಿಗೆ ನಾಮಕರಣ ಮಾಡಲಾಗಿದೆ.**

# ರಕ್ಷಣೆ ಕೋರಿ ಠಾಣೆ ಮೆಟ್ಟಿಲೇರಿದ ಪ್ರೇಮಜೋಡಿ

ಮೈಸೂರು: ಅವರಿಬ್ಬರೂ ಗೃಹ ಸಚಿವರ ತವರು ಜಿಲ್ಲೆಯಿಂದ ಜೋಡಿ ಓಡಿ ಹೋಗಿ ಕೃಷಿ ಸಚಿವರ ಮಂಡ್ಯ ಜಿಲ್ಲೆಯಲ್ಲಿ ವಿವಾಹವಾಗಿ ಸಿಎಂ ಜಿಲ್ಲೆಯ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಬಳಿಗೆ ರಕ್ಷಣೆ ನೀಡುವಂತೆ ಕೋರಿದ ಘಟನೆ ಮೈಸೂರಿನಲ್ಲಿ ನಡೆದಿದೆ.

ಹೌದು ತುಮಕೂರು ಜಿಲ್ಲೆ ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನ ಸಂಗನಹಳ್ಳಿ ಮತ್ತು ಸೀಗೇನಹಳ್ಳಿ ಗ್ರಾಮದ ಪ್ರೇಮಿಗಳೇ ಮಂಡ್ಯ ಜಿಲ್ಲೆಯಲ್ಲಿ ಮದುವೆಯಾಗಿ ಮೈಸೂರಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಬಳಿ ರಕ್ಷಣೆ ಕೋರಿದವರಾಗಿದ್ದಾರೆ. ಕಳೆದ ಎರಡೂವರೆ ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದ ಕೃಪಾ ಮತ್ತು ಧರಣೇಶ್ ನಾಲ್ಕು ದಿನಗಳ ಹಿಂದೆ ಮಂಡ್ಯ ಜಿಲ್ಲೆಯ ಕೆ.ಆರ್ ಪೇಟೆಯ ಮಹದೇಶ್ವರ ದೇವಸ್ಥಾನದಲ್ಲಿ ಮದುವೆಯಾಗಿದ್ದರು. ಇಬ್ಬರೂ ಒಂದೆ ಸಮುದಾಯದವರಾಗಿದ್ದರೂ ಸಹ ಯುವತಿಯ ತಂದೆ ಶಿವಕುಮಾರ್ ವಿವಾಹಕ್ಕೆ ವಿರೋಧ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಮಾತನಾಡಿರುವ ಕೃಪಾ ನನ್ನ ತಂದೆಯಿಂದ ನಮಗೆ ಜೀವ ಭಯವಿದೆ. ನಾವಿಬ್ಬರೂ ಕಾನೂನು ಪ್ರಕಾರದಲ್ಲಿ ಪರಸ್ಪರ ಒಪ್ಪಿಗೆಯಿಂದಲೇ ವಿವಾಹ ಆಗಿದ್ದೇವೆ. ನಮಗೆ ರಕ್ಷಣೆ ಬೇಕು ಎಂದು ಕೋರಿದ್ದಾರೆ. ಇನ್ನೂ ಬೆಂಗಳೂರಿನ ಪೀಣ್ಯಾ ಪೊಲೀಸ್ ಠಾಣೆಯಲ್ಲಿ ಯುವತಿ ಕಾಣೆಯಾಗಿದ್ದಾಳೆಂದು ಕೃಪಾ ತಂದೆ ದೂರು ನೀಡಿದ್ದು, ಈ ನಡುವೆ ಪ್ರೇಮಿಗಳು ಪೊಲೀಸರ ಆಶ್ರಯ ಬೇಡಿ ಬಂದಿದ್ದಾರೆನ್ನಲಾಗಿದೆ.



# 25ವರ್ಷದ ಬಳಿಗೆ ತೆರೆಗೆ ಕೋಟಿಗೊಬ್ಬ




ಮೈಸೂರು: ಕರ್ನಾಟಕ ರತ್ನ ಸಾಹಸಸಿಂಹ ಡಾ. ವಿಷ್ಣುವರ್ಧನ್ ನಟಿಸಿ ಭರ್ಜರಿ ಜಯಭೇರಿ ಸಾಧಿಸಿರುವ ಕೋಟಿಗೊಬ್ಬ ಚಿತ್ರ 25 ವರ್ಷಗಳ ನಂತರ ಮತ್ತೆ ತೆರೆಯಲ್ಲಿ ಬಿಡುಗಡೆಗೊಂಡ ಹಿನ್ನೆಲೆಯಲ್ಲಿ ಅಭಿಮಾನಿಗಳಲ್ಲಿ ಸಂಭ್ರಮ ಮನೆ ಮಾಡಿತು.

ಬಿಡುಗಡೆ ಹಿನ್ನೆಲೆ ಚಾಮರಾಜ ಜೋಡಿ ರಸ್ತೆಯಲ್ಲಿರುವ ಗಾಯತ್ರಿ ಚಿತ್ರಮಂದಿರದಲ್ಲಿ ವಿಷ್ಣುವರ್ಧನ್ ಅಭಿಮಾನಿಗಳು ಬೃಹತ್ ಕಟೌಟ್ ಅಳವಡಿಸಿ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ,ಅನ್ನದಾನ ಮಾಡಿ, 101 ತೆಂಗಿನಕಾಯಿ ಒಡೆದು ಸಂಭ್ರಮಿಸಿದರು. ಇದೇ ಸಂದರ್ಭದಲ್ಲಿ ನಗರಪಾಲಿಕಾ ಮಾಜಿ ಸದಸ್ಯ ಎಂ.ಡಿ. ಪಾರ್ಥಸಾರಥಿ, ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ಎಸ್.ಎನ್.ರಾಜೇಶ್, ಪುಕಾರ್ ಸಿದ್ದಪ್ಪ, ಮದನ್, ಬಸವರಾಜು, ಮಹದೇವ್, ಸಂತೋಷ್, ನವೀನ್ ಇತರರು ಹಾಜರಿದ್ದರು.

# ಮುರುಘರಾಜೇಂದ್ರ ಶಾಲೆಗೆ 100%

ಚಾಮರಾಜನಗರ: ತಾಲೂಕಿನ ಮರಿಯಾಲ ಗ್ರಾಮದ ಶ್ರೀ ಮುರುಘರಾಜೇಂದ್ರಸ್ವಾಮಿ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಶಾಲೆಯ 26 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇಡಕ 100 ರಷ್ಟು ಫಲಿತಾಂಶ ಬಂದಿದೆ.

ಶಾಲೆಯಿಂದ ಪರೀಕ್ಷೆಗೆ ಹಾಜರಾದ 26 ವಿದ್ಯಾರ್ಥಿಗಳಲ್ಲಿ ದೀಕ್ಷಿತ ಬಿ (485) ಲಿಖಿತ ಡಿ (475) , ಚಿರಂತ್ (457), ಶರಣ್ಯ ಎನ್( 451), ಸುಚಿತ್ರ ಡಿ (444) ಮಾನಸ ಎಚ್ ಎನ್ (440), ಕೀರ್ತನ (438), ಬಿಂದು ಬಿ (419) ಸ್ಫೂರ್ತಿ ಎಂ (404,) ಸಿಂಚನ ಬಿ (390) ಮಿಥುನ್ (387), ಭರತ್ ಪಟೇಲ್ (384), ಅಕ್ಷಯ್ ಎಚ್ ಎನ್ (381), ಪ್ರೀತಂ ಪಿ (374) ಸೇರಿದಂತೆ 14 ವಿದ್ಯಾರ್ಥಿಗಳು ಅತ್ಯುನ್ನತ ದರ್ಜೆಯಲ್ಲಿ ಹಾಗೂ 12 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಶಾಲೆಯ ಪ್ರಾಂಶುಪಾಲ ಎಚ್.ಎಂ. ಗಿರೀಶ್ ತಿಳಿಸಿದ್ದಾರೆ.

ಸತತವಾಗಿ ಶೇ. 100 ರಷ್ಟು ಫಲಿತಾಂಶವನ್ನು ತಂದುಕೊಡುತ್ತಿರುವ ವಿದ್ಯಾರ್ಥಿಗಳ ಉತ್ತಮ ಸಾಧನೆಯನ್ನು ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿಗಳು ಪ್ರಶಂಸಿದ್ದರು. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಇಷ್ಟೊಂದು ದೊಡ್ಡ ಮಟ್ಟದ ಸಾಧನೆಯನ್ನು ಮಾಡುವ ಮೂಲಕ ನಮ್ಮ ಶಾಲೆ ಹಾಗೂ ಪೋಷಕರಿಗೆ ಕೀರ್ತಿ ತಂದಿದ್ದಾರೆ. ಅವರೆಲ್ಲರಿಗೂ ಅಭಿನಂದನೆಗಳು. ನಿಮ್ಮೆಲ್ಲರ ಭವಿಷ್ಯ ಉಜ್ವಲವಾಗಿರಲಿ ಎಂದು ಮರಿಯಾಲಶ್ರೀಗಳು ಆಶಿಸಿದರು.

ವಿದ್ಯಾರ್ಥಿಗಳ ಸಾಧನೆ ಹಾಗೂ ಶಾಲೆಯ ಪ್ರಾಂಶುಪಾಲರು, ಶಿಕ್ಷಕ ವರ್ಗದವರ ಪರಿಶ್ರಮವನ್ನು ಸ್ವಾಮೀಜಿಗಳು , ಆಡಳಿತ ಮಂಡಳಿಯವರು ಅಭಿನಂದನೆ ಸಲ್ಲಿಸಿದ್ದಾರೆ.



# ಏ.20ರಂದು ಬಸವ ಜಯಂತಿ

ಮೈಸೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಮೈಸೂರು ಬಸವ ಬಳಗಗಳ ಒಕ್ಕೂಟದ ವತಿಯಿಂದ ಬಸವ ಜಯಂತಿ-2026 ಹಾಗೂ 2025-26 ನೇ ಸಾಲಿನ ಬಸವ ರಾಷ್ಟ್ರೀಯ ಪುರಸ್ಕಾರ ಪ್ರಧಾನ ಸಮಾರಂಭವನ್ನು ಏ.20 ರಂದು ಬೆಳಗ್ಗೆ 12 ಘಂಟೆಗೆ ಕರ್ನಾಟಕ ಕಲಾಮಂದಿರದದಲ್ಲಿ ಆಯೋಜಿಸಲಾಗಿರುತ್ತದೆ.

ಏ.19 ರಂದು ಬೆಳಗ್ಗೆ 8:30 ಗಂಟೆಗೆ ಗನ್ ಹೌಸ್ ವೃತ್ತದ ಶ್ರೀ ಬಸವೇಶ್ವರ ಪ್ರತಿಮೆ ಬಳಿಯಿಂದ ಕರ್ನಾಟಕ ಕಲಾಮಂದಿರದ ವರೆಗೆ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನ 1.30 ಕ್ಕೆ ಕರ್ನಾಟಕ ಕಲಾಮಂದಿರದಲ್ಲಿರುವ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಹಿರಿಯ ಕಲಾವಿದ ಎಲ್.ಶಿವಲಿಂಗಪ್ಪ ರಚಿಸಿರುವ ವಚನ ಚಿತ್ರಗಳ ಪ್ರದರ್ಶನವನ್ನು ಮಾಡಲಾಗುತ್ತದೆ. ಮಧ್ಯಾಹ್ನ 2ಗಂಟೆಗೆ ಮಹಿಳಾ ಮತ್ತು ಮಕ್ಕಳ ಸಮಿತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತದೆ. ಸಂಜೆ 6ಗಂಟೆಗೆ ನಿರಂತರ ಮೈಸೂರು ಅಭಿನಯದ ಬಸವಣ್ಣನವರ ವಚನಗಳನ್ನಾದರಿಸಿದ ನೃತ್ಯ ರೂಪಕ ಆಯೋಜಿಸಲಾಗಿದೆ. ಏ.20 ರಂದು ಬೆಳಗ್ಗೆ 9.30ಗಂಟೆಗೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಹಾಗೂ ಗಣ್ಯರಿಂದ ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿ ಬಸವಣ್ಣನವರ ಪ್ರತಿಮೆ ಪ್ರತಿಷ್ಠಾಪನೆಗೆ ಶಂಕುಸ್ಥಾಪನೆ ಮಾಡಲಾಗುತ್ತದೆ. ನಂತರ ಗನ್ ಹೌಸ್ ವೃತ್ತದಲ್ಲಿರುವ ಶ್ರೀ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆಯನ್ನು ಮಾಡಲಾಗುತ್ತದೆ

**ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆ**

# ಕುಡಿಯುವ ನೀರಿಗೆ ಸಮಸ್ಯೆ ಆಗದಂತೆ ಅಗತ್ಯ ಕ್ರಮ

ರಾಮನಗರ: ಬೇಸಿಗೆಯಲ್ಲಿ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಆಗದಂತೆ ಅಗತ್ಯ ಕ್ರಮಗಳನ್ನು ವಹಿಸುತ್ತಿರುವುದಾಗಿ ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು.

ತಾಲೂಕಿನ ಕೈಲಂಚಾ ಹೋಬಳಿ ಹುಣಸನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಗುರುವಾರ ಪ್ರವಾಸ ಕೈಗೊಂಡು 9.50 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ವೇಳೆ ಅವರು ಮಾತನಾಡಿದರು. ಕೊಳವೆ ಬಾವಿಗಳು, ಕೆರೆಗಳು ಬತ್ತಿ ಹೋಗುತ್ತಿವೆ. ಜನ, ಜಾನುವಾರುಗಳಿಗೆ ಕುಡಿಯುವ ನೀರು ಮೇವಿನ ಕೊರತೆ ಆಗದಂತೆ ಎಚ್ಚರ ವಹಿಸಿದ್ದೇವೆ. ಗ್ರಾಮ ಪಂಚಾಯಿತಿ ಅಧಿಕಾರಿಗಳು ಸಮಸ್ಯೆ ಎದುರಾದರೆ ಕ್ರಮ ವಹಿಸುವಂತೆ ಸೂಚನೆ ನೀಡಿದ್ದೇನೆ ಎಂದರು.ರಸ್ತೆ, ಚರಂಡಿ, ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಬೇಡಿಕೆ ಹೆಚ್ಚಾಗಿದೆ. ಅರ್ಕಾವತಿ ನದಿ ಭಾಗದಲ್ಲಿ ನೀರಿನಲ್ಲಿ ಫ್ಲೋರಿಡ್ ಅಂಶ ಹೆಚ್ಚಾಗಿದೆ ಎಂದು ಕೇಳಿ ಬಂದಿದೆ. ಬೋರ್ ವೆಲ್, ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಲಾಗುತ್ತಿದೆ ಎಂದು ಅವರು ವಿವರಿಸಿದರು.



ನನಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ, ಡಿ.ಕೆ.ಶಿವಕುಮಾರ್ ಮತ್ತು ಮಾಜಿ ಸಂಸದರಾದ ಡಿ.ಕೆ.ಸುರೇಶ್ ಬೆನ್ನೆಲುಬಾಗಿ ನಿಂತಿರುವುದರಿಂದಲೇ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ ಎಂದು ಹೆಚ್.ಎ.ಇಕ್ಬಾಲ್ ಹುಸೇನ್ ಹೇಳಿದರು.

**ಹಕ್ಕು ಪತ್ರಗಳನ್ನು ವಿತರಿಸುತ್ತಿದ್ದೇವೆ**

ಅರಣ್ಯ ದಂಚಿನ ಪ್ರದೇಶಗಳಲ್ಲಿ ಅನುಭವದಲ್ಲಿರುವ ಜಮೀನುಗಳಲ್ಲಿ ಕೃಷಿ ಚಟುವಟಿಕೆ ಮಾಡಲು ಅರಣ್ಯ ಇಲಾಖೆ ತೊಂದರೆ ಕೊಡುತ್ತಿದ್ದಾರೆ ಎಂದು ದೂರುಗಳು ಬಂದಿವೆ. ಅವುಗಳನ್ನು ಉಪ ಗ್ರಾಮವನ್ನಾಗಿ ಪರಿವರ್ತಿಸಿ ಹಕ್ಕು ಪತ್ರ ವಿತರಿಸುವ ಕೆಲಸ ಮಾಡುತ್ತಿದ್ದೇವೆ ಎಂದರು. ಕಳೆದ 35 - 40 ವರ್ಷಗಳಿಂದ ಇದ್ದ ಶಾಸಕರು ಗಮನ ಹರಿಸಿದ್ದರೆ ಜನರು ಇಷ್ಟೊಂದು ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿರಲಿಲ್ಲ. ನಾನಾಗಲಿ ಅಥವಾ ಡಿಕೆ ಸಹೋದರರು ನಾವೆಲ್ಲರು ಸ್ಥಳೀಯರು. ನಾವು ಬೆಳಗಾದರೆ ಜನರೊಂದಿಗೆ ಜೀವನ ನಡೆಸುತ್ತೇವೆ. ಅವರಂತೆ ನಾವು ರಾಜಕಾರಣ ಮಾಡಲು ಬಂದಿಲ್ಲ. ಮನೆ ಮಗನಾಗಿ ಸೇವೆ ಸಲ್ಲಿಸುತ್ತೇನೆಂದು ಹೇಳಿದ್ದಕ್ಕೆ ಆಶೀರ್ವಾದ ಮಾಡಿದ್ದಾರೆ. ಅದನ್ನುಉಳಿಸಿಕೊಂಡು ಅವರ ನಿರೀಕ್ಷೆಗಳಿಗೂ ಮೀರಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿರುವುದಾಗಿ ಹೇಳಿದರು.

ರಾಜೀವ್ ಗಾಂಧಿ ಆರೋಗ್ಯ ವಿವಿ, ಹೈಟೆಕ್ ಆಸ್ಪತ್ರೆ, ಮೆಡಿಕಲ್ ಕಾಲೇಜು , ನರ್ಸಿಂಗ್ ಕಾಲೇಜು 850 ಕೋಟಿ ರುಪಾಯಿ ವೆಚ್ಚದಲ್ಲಿ ನಿರ್ಮಾಣವಾಗಲಿದೆ. ಕಾಡು ಪ್ರಾಣಿಗಳು ಆಹಾರ ಅರಸಿ ಗ್ರಾಮಗಳಿಗೆ ಲಗ್ಗೆ ಇಡುತ್ತಿವೆ. ಮಾನವ ವನ್ಯಜೀವಿಗಳ ಸಂಘರ್ಷ ತಪ್ಪಿಸಲು ಗ್ರಾಮಗಳ ವೃತ್ತಗಳಲ್ಲಿ 100 ಹೈಮಾಸ್ಟ್ ದೀಪಗಳನ್ನು ಅಳವಡಿಸ ಲಾಗುತ್ತಿದೆ ಎಂದರು. ಈ ವೇಳೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಕೆ.ರಾಜು, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವಿ.ಹೆಚ್.ರಾಜು, ಮಾಜಿ ಅಧ್ಯಕ್ಷ ಜಯರಾಮಯ್ಯ, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ತಾ.ಪಂ ಮಾಜಿ ಸದಸ್ಯ ಸಿದ್ದೇಗೌಡ,ಮುಖಂಡರಾದ ವಾಸುಪುಟ್ಟಮಾಸ್ತಿಗೌಡ, ಚೇತನ್, ಮಲ್ಲೇಗೌಡ, ಅಪ್ಪಾಜಿ ಉಪಸ್ಥಿತರಿದ್ದರು.

## ಮೂವರು ಸರಗಳ್ಳರ ಬಂಧನ: 21 ಲಕ್ಷ ಮೌಲ್ಯದ 152 ಗ್ರಾಂ ಚಿನ್ನ ವಶ

ಮೈಸೂರು: ಮೈಸೂರು ಜಿಲ್ಲೆ ಕೆ.ಆರ್.ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸರಗಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಿ 21,28,000 ರೂ ಮೌಲ್ಯದ 152 ಗ್ರಾಂ. ಚಿನ್ನವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಕೃಷ್ಣಕುಮಾರ್ ಎ.ವಿ, ನವೀನ್ ಕುಮಾರ್ ಎಸ್.ಆರ್. ಮತ್ತು ಸೈಯದ್ ಫರ್ಹಾನ್ ಎಸ್. ಬಂಧಿತ ಆರೋಪಿಗಳು.

ಕೆ.ಆರ್.ನಗರದ ಲಾಲನಹಳ್ಳಿ ಗ್ರಾಮದ ಅನ್ನಪೂರ್ಣ ಎಂಬುವವರು 06.04.2026 ರಂದು ಸಂಜೆ 4.30 ಗಂಟೆ ಸಮಯದಲ್ಲಿ ತಿಪ್ಪೆಗೆ ಕಸ ಹಾಕಲು ಹೋದ ಸಮಯದಲ್ಲಿ ಬೈಕ್ ನಲ್ಲಿ ಬಂದು 35 ಗ್ರಾಂ. ತೂಕದ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡ ಮೈಸೂರು ಜಿಲ್ಲಾ ಪೊಲೀಸರು ಸರ್ಕಲ್ ಇನ್ಸ್ ಪೆಕ್ಟರ್ ಶಿವಪ್ರಕಾಶ್ ಎಸ್. ಅವರ ನೇತೃತ್ವದಲ್ಲಿ ತಂಡ ರಚಿಸಿ ಮೂವರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ವೇಳೆ ಕೆ.ಆರ್.ನಗರ ವ್ಯಾಪ್ತಿಯಲ್ಲಿ ನಡೆದಿರುವ ನಾಲ್ಕು ಸರಗಳ್ಳತನ ಮತ್ತು ಒಂದು ಮನೆಗಳ್ಳತನ ಮಾಡಿರುವುದು ತಿಳಿದು ಬಂದಿದೆ. ಒಟ್ಟು ಐದು ಪ್ರಕರಣಗಳಲ್ಲಿ 21,28,000 ರೂ ಮೌಲ್ಯದ 152 ಗ್ರಾಂ. ಚಿನ್ನ, ಕೃತ್ಯಕ್ಕೆ ಬಳಸಲಾಗಿದ್ದ ಮೂರು ಬೈಕ್ ಗಳನ್ನು ವಶಕ್ಕೆ ಪಡೆಯಲಾಗಿದೆ.

ಪೊಲೀಸ್ ಅಧೀಕ್ಷಕರಾದ ಮಲ್ಲಿಕಾರ್ಜುನ ಬಾಲದಂಡಿ, ಅಪರ ಪೊಲೀಸ್ ಅಧೀಕ್ಷಕರುಗಳಾದ ಸಿ. ಮಲ್ಲಿಕ್ ಹಾಗೂ ನಾಗೇಶ್.ಎಲ್. ಮೈಸೂರು ಗ್ರಾಮಾಂತರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ ಟಿ.ಬಿ ರಾಜಣ್ಣ ಪೊಲೀಸರನ್ನು ಪ್ರಶಂಸಿದ್ದಾರೆ.

## ಮನೆಕಳವು: ಓರ್ವನ ಬಂಧನ, 51.7 ಗ್ರಾಂ ಚಿನ್ನ 3.50 ಲಕ್ಷ ನಗದು ವಶ

ಮೈಸೂರು: ಮನೆಗಳ್ಳತನ ಮಾಡಿ ತಲೆ ಮರೆಸಿಕೊಂಡಿದ್ದ ಓರ್ವ ವ್ಯಕ್ತಿಯನ್ನು ಬಂಧಿಸಿ 51.7 ಗ್ರ ಚಿನ್ನ ಹಾಗೂ 3.50.000 ನಗದನ್ನು ಮೈಸೂರು ಜಿಲ್ಲೆ ಕೆ.ಆರ್.ನಗರ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಸಂತೋಷ (35) ಬಂಧಿತ ಆರೋಪಿ. ಈತ ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳದ ಅಜ್ಜಿಬೆಟ್ಟು ಗ್ರಾಮದವನು ಎಂದು ಹೇಳಲಾಗಿದೆ.

ಕೆ.ಆರ್.ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ಆರ್.ನಗರ ಟೌನಿನ ಮುಸ್ಲಿಂ ಬ್ಲಾಕ್ ನಿವಾಸಿ ಅಫ್ಸರ್ ಪಾಷ ಎಂಬುವವರ ಮನೆಯಲ್ಲಿ 2024 ರಲ್ಲಿ ಸುಮಾರು 600 ಗ್ರಾಂ. ಚಿನ್ನದ ಒಡವೆಗಳು ಹಾಗೂ 25 ಲಕ್ಷ ನಗದನ್ನು ಕಳ್ಳತನಮಾಡಲಾಗಿತ್ತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಅಬ್ದುಲ್ ನನ್ನು ಬಂಧಿಸಿ 9 ಲಕ್ಷ ನಗದು ಹಣವನ್ನು ವಶಪಡಿಸಿಕೊಂಡಿದ್ದರು. ಎರಡನೇ ಆರೋಪಿ ಸಂತೋಷ್ ತಲೆಮರೆಸಿಕೊಂಡಿದ್ದನು.

ಕೆ.ಆರ್.ನಗರ ಪೊಲೀಸ್ ಠಾಣೆ ಸರ್ಕಲ್ ಇನ್ಸ್ ಪೆಕ್ಟರ್ ಶಿವಪ್ರಕಾಶ್ ನೇತೃತ್ವದಲ್ಲಿ ತಂಡ ರಚಿಸಿ ಎ.9 ರಂದು ಸಂತೋಷನನ್ನು ಬಂಧಿಸಿ ಕಳ್ಳತನ ಮಾಡಿದ್ದ 57.1 ಗ್ರಾಂ ಚಿನ್ನ ಹಾಗೂ 3.50.000 ರೂ. ನಗದನ್ನು ವಶಕ್ಕೆ ಪಡೆದಿದ್ದಾರೆ.

ಪೊಲೀಸ್ ಅಧೀಕ್ಷಕರಾದ ಮಲ್ಲಿಕಾರ್ಜುನ ಬಾಲದಂಡಿ,ಅಪರ ಪೊಲೀಸ್ ಅಧೀಕ್ಷಕರುಗಳಾದ ಸಿ. ಮಲ್ಲಿಕ್ ಹಾಗೂ ನಾಗೇಶ್.ಎಲ್. ಮೈಸೂರು ಗ್ರಾಮಾಂತರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಟಿ.ಬಿ ರಾಜಣ್ಣ ರವರು ಪೊಲೀಸರ ಕಾರ್ಯವನ್ನು ಶ್ಲಾಘಿಸಿದರು.

## ಸ್ವಚ್ಛತೆಗೆ ರಸ್ತೆಬದಿ ವ್ಯಾಪಾರಿಗಳು ಸಹಕರಿಸಿ



ಚಾಮರಾಜನಗರ: ಏಪ್ರಿಲ್ 17 ನಗರದ ಸ್ವಚ್ಛತೆಗೆ ರಸ್ತೆಬದಿ ವ್ಯಾಪಾರಿಗಳು ತಳ್ಳುಗಾಡಿ ವ್ಯಾಪಾರಿಗಳು ಸಹಕರಿಸಬೇಕು ಎಂದು ಪೌರಾಯುಕ್ತ ಪರಶುರಾಮ ಎಂ.ಛಲವಾದಿ ಮನವಿ ಮಾಡಿದರು.

**ನಗರಸಭೆ ಪೌರಾಯುಕ್ತ ಪರಶುರಾಮ ಎಂ. ಛಲವಾದಿ ಮನವಿ**

**ರಸ್ತೆಬದಿ, ತಳ್ಳುಗಾಡಿ ವ್ಯಾಪಾರಿಗಳು ಸಭೆ**

ನಗರಸಭೆ ಕಚೇರಿ ಸಭಾಂಗಣದಲ್ಲಿ ನಡೆದ ರಸ್ತೆಬದಿ, ತಳ್ಳುಗಾಡಿ ವ್ಯಾಪಾರಿಗಳು ಸಭೆಯಲ್ಲಿ ಅವರು ಮಾತನಾಡಿ, ನಗರವನ್ನು ಸ್ವಚ್ಛ ನಗರವನ್ನಾಗಿ ಸುವ ಗುರಿ ಹೊಂದಲಾಗಿದೆ ಆಗಾಗಿ ಎಲ್ಲೆಂದರಲ್ಲಿ ಕಸ ಹಾಕದೆ ತಮ್ಮತಮ್ಮ ಅಂಗಡಿ ಮುಂಭಾಗದಲ್ಲಿ ಡಬ್ಬವನ್ನಿಟ್ಟು ಕಸ ಹಾಕುವ ಮೂಲಕ ಸ್ವಚ್ಛವಾಗಿಟ್ಟು ಕೊಳ್ಳಬೇಕು ನಿಷೇಧಿತ ಪ್ಲಾಸ್ಟಿಕ್ ಬಳಸದೆ ಬಟ್ಟೆ ಬ್ಯಾಗ್ ಬಳಸುವ ಮೂಲಕ ನಗರ ಸ್ವಚ್ಛತೆಗೆ ಸಹಕರಿಸಬೇಕು.ಇಲ್ಲದಿದ್ದರೆ ನಿಮ್ಮ ವಿರುದ್ಧ ಕ್ರಮಕೈಗೊಳ್ಳಬೇಕಾಗುತ್ತದೆ ಎಂದು ಸೂಚನೆ ನೀಡಿದರು. ತಳ್ಳುಗಾಡಿಗಳನ್ನು ಎಲ್ಲೆಂದರಲ್ಲಿ ನಿಲ್ಲಿಸಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯನ್ನುಂಟು ಮಾಡಬಾರದು ಕಾನೂನು ಉಲ್ಲಂಘಿಸಿದರೆ ಕ್ರಮ ವಹಿಸುವುದಾಗಿ ಎಚ್ಚರಿಕೆ ನೀಡಿದರು. ಸಭೆಯಲ್ಲಿ ಪರಿಸರ ಅಭಿಯಂತರಾದ ರೂಪ, ಕಂದಾಯಾಧಿಕಾರಿ ಹೇಮಂತ್ ಕುಮಾರ್, ಆರೋಗ್ಯ ಅಧಿಕಾರಿ ಮಂಜು ನಾಥ್, ರಸ್ತೆ ಬದಿ ವ್ಯಾಪಾರಿಗಳು ಭಾಗವಹಿಸಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಯುವ ಜನತೆ ಸಮುದಾಯದ ದಾರಿದೀಪ ಆಗಲಿ

ಮೈಸೂರು: ಡಾ.ಬಿ.ಆರ್. ಅಂಬೇಡ್ಕರ್ ಹೇಳಿದಂತೆ ಯುವಕರು ಸಮುದಾಯದ ದಾರಿ ದೀಪಗಳಾಗಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಎಂಬಿಎ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಹೇಳಿದರು.

**ಮೈಸೂರು ವಿಶ್ವವಿದ್ಯಾನಿಲಯದ ಎಂಬಿಎ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಅಭಿಮತ**

ನಗರದ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಮಹಾರಾಜ ಕಾಲೇಜು ಮತ್ತು ಮೈಸೂರು ವಿಶ್ವವಿದ್ಯಾನಿಲಯ ಪಠ್ಯೇತರ ಚಟುವಟಿಕೆ ಸಮಿತಿ ಸಹಯೋಗದಲ್ಲಿ ಶುಕ್ರವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಮುದಾಯ ಎಂದರೆ ಕೇವಲ ಒಂದು ಜಾತಿ, ಕುಲ ಅಲ್ಲ. ಕಮ್ಯುನಿಟಿ ಎಂದ ತಕ್ಷಣ ನಾವು ಒಂದು ಜಾತಿಗೊ, ಕುಲಕ್ಕೋ ಸಂಬಂಧಪಟ್ಟಂತೆ ಕಮ್ಯುನಿಟಿ ಎಂಬ ಪದವನ್ನು ಬಳಸುತ್ತೇವೆ. ಆದರೆ ಕಮ್ಯುನಿಟಿ ಪದದ ವಿಶಾಲ ಅರ್ಥ ಸಮುದಾಯ



ಅಥವಾ ಜನ ಸಮುದಾಯ. ಈ ಕಾರಣಕ್ಕೆ ಕಮ್ಯುನಿಸ್ಟ್, ಕಮ್ಯುನಿಕೇಷನ್ ಅನ್ನುವ ಪದ ಇದೆ. ಇಲ್ಲಿಂದ ಕಮ್ಯುನಿಟಿ ಎಂಬ ಪದ ಬಂದಿರುವುದು ಎಂದರು.

ನಾನು ಮೊದಲು ಭಾರತೀಯ, ಕೊನೆಯಲ್ಲಿ ಭಾರತೀಯ ಎಂದು ಅವರು ಸದಾ ಹೇಳುತ್ತಿದ್ದರು. ಆದರೆ, ದೇಶವು ಅವರನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲಿಲ್ಲ. ಸ್ವಾತಂತ್ರ?ಯಕ್ಕೂ ಮುನ್ನ ಅವರನ್ನು ನಿಮ್ನ ವರ್ಗಗಳ ನಾಯಕ ಎಂದು ಮಾತ್ರ ಗುರುತಿಸಲಾಯಿತು. ಸ್ವಾತಂತ್ರ?ಯಾನಂತರ 'ಸಂವಿಧಾನ ಶಿಲ್ಪಿ' ಎಂಬ ಗೌರವ ದೊರಕಿದರೂ, ಅವರ ವಿದ್ವತ್ತಿನ ಸಂಪೂರ್ಣ ಪ್ರಯೋಜ ಪಡೆಯಲಿಲ್ಲ. ಇಂತಹ ಮಹಾನ್ ಚಿಂತಕ ಬೇರೆ ದೇಶದಲ್ಲಿ ಹುಟ್ಟಿದ್ದರೆ, ಅವರ ಜ್ಞಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಂಡಿರುತ್ತಿದ್ದರು ಎಂದರು.

ಕಾಲೇಜುಗಳು, ವಿಶ್ವವಿದ್ಯಾಲಯಗಳಿಗೆ ಬರುವ ವಿದ್ಯಾರ್ಥಿಗಳು ಕೇವಲ ಜ್ಞಾನವನ್ನು ಪಡೆಯುವುದಕ್ಕಷ್ಟೇ ಅಲ್ಲ, ಅದನ್ನು ಸಮಾಜದೊಂದಿಗೆ ಹಂಚಿಕೊಳ್ಳುವುದಕ್ಕೂ ಹೊಣೆಗಾರರಾಗಿರಬೇಕು. ನೀವು ಪಡೆದ ಜ್ಞಾನವನ್ನು ಇತರರೊಂದಿಗೆ ಹಂಚಿಕೊಳ್ಳದಿದ್ದರೆ ನಿಮ್ಮ ಶಿಕ್ಷಣವೇ ವ್ಯರ್ಥವಾಗಲಿದೆ ಎಂದರು. ಗ್ರಾಮೀಣ ಪ್ರದೇಶಗಳಿಂದ ಬಂದಿರುವ ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ನಿರೀಕ್ಷೆಗಳು ಇರುತ್ತವೆ. ನೀವು ಓದುತ್ತಿರುವ ಊರಿನಲ್ಲಿ ಜನರು ನಿಮ್ಮನ್ನು ಆಸೆಗಣ್ಣಿನಿಂದ ನೋಡುತ್ತಾರೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ಸ್ಪಷ್ಟ ಗುರಿ ಇರಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ. ಸವಿತಾ ಮಾತನಾಡಿ, ಅಂಬೇಡ್ಕರ್ ಹಿಂದುಳಿದ ಮತ್ತು ತಳಮಟ್ಟದ ಜನರ ಪರ ಹೋರಾಡಿ, ಅವರಿಗೆ ಮಾನವೀಯ ಜೀವನ ರೂಪಿಸುವಲ್ಲಿ ಮಹತ್ತರ ಪಾತ್ರವಹಿಸಿದ್ದಾರೆ. ವಿದೇಶಗಳಲ್ಲಿ ಅಧ್ಯಯನ ನಡೆಸಿ ಸಂವಿಧಾನ ರೂಪಿಸಿದ ಅವರು, ಸಮಾಜದಲ್ಲಿದ್ದ ಮೌಢ್ಯ ಮತ್ತು ಅಸ್ಪೃಶ್ಯತೆ ನಿವಾರಣೆಗೆ ಶ್ರಮಿಸಿದ್ದಾರೆ ಎಂದು ಹೇಳಿದರು. ಮಹಾರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ವಿ.ಷಣ್ಮುಗಂ, ಕಾಲೇಜಿನ ಆಡಳಿತಾಧಿಕಾರಿ ಪ್ರೊ.ಕೆ.ಎಸ್.ಗೋವಿಂದರಾಜು, ಪಠ್ಯೇತರ ಚಟುವಟಿಕೆಗಳ ಸಮಿತಿಯ ಸಂಚಾಲಕ ಪ್ರೊ.ರಾಚಯ್ಯ ಕಾರ್ಯಕ್ರಮದಲ್ಲಿ ಹಾಜರಿದ್ದರು.

### ಬೇಸಿಗೆ ಹಿನ್ನಲೆ

# ಹಲವು ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಸಾಧ್ಯತೆ

**ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ಪ್ರಾರಂಭದ ದಿನಗಳಾದ ಏಪ್ರಿಲ್ ಮೊದಲ ವಾರದಿಂದಲೇ ಗರಿಷ್ಠ ತಾಪಮಾನ ಸಾಮಾನ್ಯಕ್ಕಿಂತ ಹೆಚ್ಚಳವಾಗಿ, ಬಿಸಿಲು ಜನರ ನೆತ್ತಿ ಸುಟ್ಟಿದ್ದರೆ, ಭೂಮಿ ಕಾದ ಕಾವಲಿಯಂತಾಗಿ ಶಾಖದ ಅಲೆಗೆ ಜನರು ಹೈರಾಣಾಗಿದ್ದರು.

ಮೇ ತಿಂಗಳಿನಲ್ಲಿ ತಾಪಮಾನ ಇನ್ನಷ್ಟು ಹೆಚ್ಚಳವಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಶಾಖದ ಅಲೆಗಳು ಇನ್ನಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ನೀರಿನ ನಿರ್ವಹಣೆ ವಿಷಯದಲ್ಲಿ ಎಚ್ಚರಿಕೆ ವಹಿಸುವಂತೆ ಮುನ್ಸೂಚನೆ ನೀಡಿದ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ, ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಟ್ಟಿಗೆ ವಿಧಾನ ಸೌಧದಲ್ಲಿ ಸಭೆ ನಡೆಸಿ ಸುದೀರ್ಘವಾಗಿ ಅವಲೋಕಿಸಿದ್ದಾರೆ.


ಗ್ರಾಮೀಣ ಹಾಗೂ ಪಟ್ಟಣ ಭಾಗಗಳಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾದರೆ ಜಿಲ್ಲಾಡಳಿತವೇ ನೇರ ಹೊಣೆ ಎಂದು ಎಚ್ಚರಿಕೆ ನೀಡಿದ್ದಾರೆ. ಬಿಸಿಲಿನ ತಾಪಕ್ಕೆ ಜಲಾಶಯಗಳ ನೀರಿನ ಮಟ್ಟ ಕುಸಿತ ಕಂಡಿದ್ದು, ಕಾವೇರಿ ಕೊಳ್ಳದ ಜಲಾಶಯಗಳಾದ ಕೃಷ್ಣರಾಜ ಜಲಾಶಯ ನೂರು ಅಡಿಗೆ ಕುಸಿದರೆ, ರೈತರ ಕೃಷಿಗೆ ಆಶ್ರಯವಾಗು





ವುದರೊಂದಿಗೆ, ಮೈಸೂರು, ಬೆಂಗ ಳೂರು ಮಹಾನಗರಗಳಿಗೆ ಕುಡಿಯುವ ನೀರಿಗೆ ನೆರವಾಗಿರುವ, ರಾಜ್ಯದಲ್ಲೇ ಕಬಿನಿ ಜಲಾಶಯ ಇದೀಗ, 2.36 ಟಿಎಂಸಿ ಕುಸಿತ ಕಂಡಿದೆ.

2284 ಅಡಿ ಗರಿಷ್ಟ ನೀರಿನ ಸಾಮರ್ಥ್ಯ ಹೊಂದಿರುವ ಜಲಾಶಯದಲ್ಲಿ ಕಳೆದ ವರ್ಷ 2266 ಅಡಿ ನೀರಿತ್ತು. ಪ್ರಸ್ತುತ 2260 ನೀರಿನ ಮಟ್ಟದೊಂದಿಗೆ 6 ಅಡಿ ನೀರು ಕಡಿಮೆಯಾಗಿದೆ. ಕಳೆದ ವರ್ಷ ಇದೇ ಸಮಯದಲ್ಲಿ 10 ಟಿಎಂಸಿ ನೀರಿನ ಸಂಗ್ರಹ ಹೊಂದಿದ್ದ ಜಲಾಶಯದಲ್ಲಿ ಶುಕ್ರವಾರ 7.63 ಟಿಎಂಸಿ ನೀರು ಹೊಂದಿದ್ದು, ಕಳೆದ ವರ್ಷಕ್ಕಿನ್ನ 2.37 ಟಿಎಂಸಿ ನೀರಿನ ಮಟ್ಟ ಕಡಿಮೆಯಾಗಿದೆ. 3.100 ಕ್ಯೂಸೆಕ್ ಒಳ ಹರಿವಿದ್ದು, 1.200 ಹೊರಹರಿವು ಹೊಂದಿದೆ. ಕಳೆದ ಬಾರಿ ಉತ್ತಮ ಮಳೆಯಾದ್ದರಿಂದ ನೀರಿನ ಸಮಸ್ಯೆ ತಲೆದೂರಿರಲಿಲ್ಲ. ಪ್ರಸಕ್ತ ಸಾಲಿನಲ್ಲಿ ಜನವರಿಯಲ್ಲಿ ಒಮ್ಮೆ, ಯುಗಾದಿ ಹಬ್ಬದ ಆಸುಪಾಸಿನಲ್ಲಿ ಬಂದ ರೇವತಿ ಮಳೆ ಕೈಕೊಟ್ಟಿದೆ. ಏ.11ರಂದು ಬರಬೇಕಿದ್ದ ಅಶ್ವಿನಿ ಮಳೆ ಈವರೆಗೂ ಆಗಮನ ವಾಗಿಲ್ಲ. ಪೂರ್ವ ಮುಂಗಾರು, ಮುಂಗಾರು ಕೈ ಕೊಟ್ಟರೆ ಕೃಷಿ ಹಾಗೂ ಕುಡಿಯುವ ನೀರಿನ ಸಮಸ್ಯೆ ಇನ್ನಷ್ಟು ಜಟಿಲವಾಗಲಿದೆ. ಸಿಎಂ ನೇತೃತ್ವದ ಸಭೆಯಲ್ಲಿ 213 ತಾಲೂಕುಗಳಲ್ಲಿ ನೀರಿನ ಕೊರತೆಯಿದೆ ಎಂದು ಅಧಿಕಾರಿಗಳು ವರದಿ ನೀಡಿದ್ದಾರೆ. ಹನಿ, ಹನಿ ನೀರನ್ನು ಮಿತವಾಗಿ ಬಳಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಸಧ್ಯ ಎಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕುಗಳ 16 ಗ್ರಾಮಗಳಲ್ಲಿ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೂರಲಿದೆ.



ಕೆಟ್ಟಿರುವ ಕೊಳವೆ ಬಾವಿಗಳು, ಮೋಟಾರ್ ಗಳನ್ನು ತ್ವರಿತವಾಗಿ ದುರಸ್ತಿ ಮಾಡಲು, ಖಾಸಗೀ ಸಹಭಾಗಿತ್ವದಲ್ಲಿ ಕುಡಿಯುವ ನೀರು ಒದಗಿಸಲು ಹಾಗೂ ಅಗತ್ಯ ಬಿದ್ದರೆ ಟ್ಯಾಂಕರ್ ನಲ್ಲಿ ನೀರು ಪೂರೈಸಬೇಕು. ಜನರಿಗೆ ನೀರಿನ ಸಮಸ್ಯೆ ಸೃಷ್ಟಿಯಾಗದಂತೆ ನೋಡಿಕೊಳ್ಳುವಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದ್ದೇನೆ.

**–ಧರಣೇಶ್** ಕಾರ್ಯನಿರ್ವಾಹಕ ಅಧಿಕಾರಿ, ಎಚ್.ಡಿ.ಕೋಟೆ ತಾ.

### ಕುಡಿಯುವ ನೀರು ಸಮಸ್ಯೆ ಎದುರಿಸಲಿರುವ ಗ್ರಾಮಗಳು

**ಎಚ್.ಡಿ.ಕೋಟೆ ತಾಲೂಕಿನ ಡಿ.ಬಿ.ಕುಪ್ಪೆ, ಹಿರೇಹಳ್ಳಿ, ಸೀರನಹುಂಡಿ, ಮೊತ್ತ, ಸೋನಹಳ್ಳಿ, ಕಂಡೇಗೌಡನಪುರ, ಬೂದನೂರು, ಕಲ್ಲಹಟ್ಟಿ, ಸಿದ್ದಾಪುರ, ಎಲೆಹುಂಡಿ, ಬಸವನಗಿರಿ ಎ ಹಾಡಿ, ಗೌಂಡರ್ ಕಾಲೋನಿ, ಸರಗೂರು ತಾಲೂಕಿನ ಕಾಡಗೆರೆ, ಹಾಲಹಳ್ಳಿ, ಪುರದಕಟ್ಟೆ, ಮುಳ್ಳೂರು ಸೇರಿದಂತೆ ಜನವಸತಿ ಪ್ರದೇಶಗಳಾದ ಮಚ್ಚೂರು, ಸತ್ತಿಗೆ ಹುಂಡಿ, ಸೋನಹಳ್ಳಿ ಹಾಡಿ, ನಂಜಯ್ಯನ ಕಾಲೋನಿ, ಪುರದಕಟ್ಟೆ ಹಾಡಿ, ಹೊಸ ಹೆಗ್ಗುಡಿಲು.**

## ಇಂದು ವಿದ್ಯುತ್ ವ್ಯತ್ಯಯ

ಮೈಸೂರು: 66/11 ಕೆ.ವಿ ದೇವನೂರು ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ. ರಾಧಕೃಷ್ಣ ಮತ್ತು ಮಾನಸೀನಗರ ಫೀಡರ್‌ಗಳ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ನಿಮಿತ್ತ ಏಪ್ರಿಲ್ 18 ರಂದು ಬೆಳಿಗ್ಗೆ 9:00 ರಿಂದ ಸಂಜೆ 5:30 ಘಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.




ವಿದ್ಯುತ್ ವ್ಯತ್ಯಯವಾಗಲಿರುವ ಮುಖ್ಯ ಪ್ರದೇಶಗಳು: ಸಾತಗಳ್ಳಿ ಲೇಔಟ್, ಸಾತಗಳ್ಳಿ 'ಬಿ' ವಲಯ, ವಿದ್ಯಾಶಂಕರ ಬಡಾವಣೆ, ಶಕ್ತಿನಗರ, ಟೀರ?ಸ್ ಲೇಔಟ್, ಹೆಚ್.ಪಿ.ಓ ಆರ್.ಎಂ.ಎಸ್ ಲೇಔಟ್, ತ್ರಿವೇಣಿ ವೃತ್ತ ಸುತ್ತ–ಮುತ್ತ, ಪಾಪಣ್ಣ ಲೇಔಟ್, ಯರಗನಹಳ್ಳಿ, ಮಾನಸೀನಗರ 'ಬಿ' ವಲಯ, ಬಿ.ಎಸ್.ಎನ್.ಎಲ್ ಬಡಾವಣೆ, ಕೆ.ಎಸ್.ಎಫ್.ಸಿ ಬಡಾವಣೆ, ದೇವೇಗೌಡ ವೃತ್ತ ಸುತ್ತ–ಮುತ್ತ, ಪ್ಯಾರಡೈಸ್ ಲೇಔಟ್, ವಿದ್ಯಾವಿಕಾಸ ಕಾಲೇಜು ಮುಂಭಾಗ, ವಾಣಿ ವಿಲಾಸ ಲೇಔಟ್, ಎಂಪ್ರೋ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಇಂದು ನ.ರಾ. ಮೊಹಲ್ಲಾ ವಿಭಾಗ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

## ರಸಗೊಬ್ಬರ ಖರೀದಿಸುವಂತೆ ಒತ್ತಾಯಿಸುವಂತಿಲ್ಲ:ಡಿಸಿ

ಮೈಸೂರು: ರಸಗೊಬ್ಬರ ಮಾರಾಟಗಾರರು ರೈತರು ಯುರಿಯಾ ಸೇರಿ ಅಗತ್ಯ ರಸಗೊಬ್ಬರ ಖರೀದಿಸುವಾಗ ಅವರಿಗೆ ಅಗತ್ಯವಿಲ್ಲದ ರಸಗೊಬ್ಬರ ಖರೀದಿಸುವಂತೆ ಲಿಂಕ್ ಮಾಡಿ ಒತ್ತಾಯ ಮಾಡಿದರೆ ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಎಚ್ಚರಿಕೆ ನೀಡಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ 2026–27 ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಸಮರ್ಪಕ ಪೂರೈಕೆ ಸಂಬಂಧ ಕೃಷಿ ಪರಿಕರಗಳ ಸರಬರಾಜುದಾರರ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಅಧಿಕಾರಗಳ ಸಭೆ ನಡೆಸಿ ಮಾತನಾಡಿದರು. ರೈತರಿಗೆ ಯುರಿಯಾ ಕೊರತೆಯಾಗದಂತೆ ಮಾರಾಟ ಮಾಡಲು ಜಿಲ್ಲೆಯಲ್ಲಿ ರಸಗೊಬ್ಬರ ಸರಬರಾಜುದಾರ ಸಂಸ್ಥೆ ಹಾಗೂ ಡೀಲರ್ ಗಳು ಕೃಷಿ ಇಲಾಖೆಯಿಂದ ಹೊರಡಿಸಲಾಗಿರುವ ಸೂಚನೆಗಳನ್ನು ಪಾಲಿಸಬೇಕು ಎಂದರು. ರಸಗೊಬ್ಬರ ಸರಬರಾಜುದಾರ ಕಂಪನಿಗಳು ಡೀಲರ್ ಗಳಿಗೆ ರಸಗೊಬ್ಬರ ವಿತರಣೆ ಮಾಡುವ ಮೊದಲೇ ರೇಕ್ (ಖಚಿಇಜ) ವಿವರವನ್ನು ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು. ಯುರಿಯಾ ಮತ್ತು ಡಿ.ಎ.ಪಿ ದಾಸ್ತಾನು ಜಿಲ್ಲೆಗೆ ಬಂದ ತಕ್ಷಣ ಕೆ.ಎಸ್.ಎಸ್.ಸಿ ಮತ್ತು ಕೆ.ಎಸ್.ಸಿ.ಎಂ.ಎಫ್ ನಲ್ಲಿ ಶೇ.40ರಿಂದ 50 ರಷ್ಟು ಪರಿಮಾಣವನ್ನು ಬಫರ್ ಸ್ಟಾಕ್ ರೂಪದಲ್ಲಿ ಸಂಗ್ರಹಿಸಬೇಕು. ರೈತರಿಗೆ ಮಾರಾಟ ಮಾಡಬೇಕಿರುವ ಯುರಿಯಾ ಹಾಗೂ ಡಿ.ಎ.ಪಿ ರಸಗೊಬ್ಬರಗಳನ್ನು ಅನಧಿಕೃತವಾಗಿ ದಾಸ್ತಾನು ಮಾಡುವುದು, ಕೈಗಾರಿಕೆಗಳಿಗೆ ಮಾರಾಟ ಮಾಡುವುದು ಕಂಡು ಬಂದಲಿ ಅಂತಹ ಡೀಲರ್ ಅಥವಾ ಸರಬರಾಜು



ಕಂಪನಿಗಳ ಪರವಾನಗಿ ರದ್ದು ಪಡಿಸಿ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು. ಯುರಿಯಾ ರಸಗೊಬ್ಬರವನ್ನು ಕಡ್ಡಾಯವಾಗಿ ಯುರಿಯಾ ವಿತರಣಾ ಆಪ್‌ನಲ್ಲಿ ಹಾಗೂ ಪಿ.ಒ.ಎಸ್ ತಂತ್ರಾಂಶದಲ್ಲಿ ನಮೂದಿಸಿ ನಂತರ ಮಾರಾಟ ಮಾಡಬೇಕು. ರೈತರ ಎಫ್.ಐ.ಡಿ ಯಲ್ಲಿ ಜಮೀನಿನ ವಿವರ ಲಭ್ಯವಿದ್ದು, ವಿಸ್ತೀರ್ಣ ಹಾಗೂ ಬೆಳೆಗಳಿಗೆ ಇಲಾಖೆ ನಿಗದಿಪಡಿಸುವ ಯುರಿಯಾ ಬಳಕೆಯ ಪರಿಮಾಣವನ್ನು ಮಾತ್ರ ಆಯಾ ರೈತರಿಗೆ ಮಾರಾಟ ಮಾಡಬೇಕು. ಎಂದರು.

ಜಂಟಿ ಕೃಷಿ ನಿರ್ದೇಶಕ ಕೆ.ಎಚ್ ರವಿ ಅವರು ಮಾತನಾಡಿ ಮಾರಟಗಾರರು ತಮ್ಮಲ್ಲಿರುವ ರಸಗೊಬ್ಬರದ ದಾಸ್ತಾನು, ದರದ ವಿವರವನ್ನು ಅಂಗಡಿಯ ಮುಂಭಾಗ ಅನಾವರಣ ಮಾಡಬೇಕು, ಕಡ್ಡಾಯವಾಗಿ ಎಂ. ನಮೂನೆಯಲ್ಲಿ ಬಿಲ್ ನೀಡಬೇಕು ಎಂದರು.ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕ್, ಜಂಟಿ ಕೃಷಿ ನಿರ್ದೇಶಕ( ಜಾಗೃತ ಕೋಶ) ರಾಮಕೃಷ್ಣ, ಜಿಲ್ಲಾ ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷ ವೆಂಕಟೇಶ ಉಪಸ್ಥಿತರಿದ್ದರು.

# ಕ್ಷೇತ್ರ ಪುನರ್ ವಿಂಗಡಣೆಯಿಂದ ದಕ್ಷಿಣ ರಾಜ್ಯಗಳಿಗೆ ಅನ್ಯಾಯ

ಮೈಸೂರು: ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ವಿರೋಧ ಇಲ್ಲ. ಕ್ಷೇತ್ರ ಪುನರ್ ವಿಂಗಡಣೆಯಿಂದ ದಕ್ಷಿಣದ ರಾಜ್ಯಗಳಿಗೆ ಭಾರೀ ಅನ್ಯಾಯವಾಗಲಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಹೇಳಿದರು.

ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರ ಪುನರ್ ವಿಂಗಡಣೆಗೆ ಮಹಿಳಾ ಮೀಸಲಾತಿಯನ್ನು ಸೇರಿಸಿ ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ದಕ್ಷಿಣದ 6 ರಾಜ್ಯಗಳನ್ನು ನಿರುಪಯುಕ್ತಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದರು. ಕ್ಷೇತ್ರದ ಪುನರ್ ವಿಂಗಡಣೆಯಿಂದ ದಕ್ಷಿಣ ಭಾರತ ನೂರು ವರ್ಷ ಹಿಂದಕ್ಕೆ ಹೋಗಲಿದೆ. ಶೇ. 50 ಸೀಟು ಹೆಚ್ಚಳದ ಮಾನದಂಡದಲ್ಲಿ ದಕ್ಷಿಣ ರಾಜ್ಯಗಳ ಸೀಟುಗಳನ್ನು ಕಡಿಮೆ ಮಾಡಲಾಗಿದೆ. ಉದಾ: ಉತ್ತರ ಪ್ರದೇಶದಲ್ಲಿ ಪ್ರಸ್ತುತ 80 ಸೀಟುಗಳಿವೆ. ಶೇ.50 ಹೆಚ್ಚಳವಾದರೆ 120 ಆಗಬೇಕು. 142 ಸ್ಥಾನಕ್ಕೆ ಹೆಚ್ಚಿಸಲಾಗಿದೆ. ಯಾವ ಮಾನದಂಡದಲ್ಲಿ ಹೆಚ್ಚಿಸಲಾಗಿದೆ ಎಂದು ಪ್ರಶ್ನಿಸಿದರು. ಮೈಸೂರು, ಕೊಡಗು, ಚಾಮರಾಜನಗರ ಮೂರು ಲೋಕಸಭಾ ಕ್ಷೇತ್ರಗಳಾಗಲಿವೆ. ವಿಧಾನಸಭೆಯ 6 ಸೀಟುಗಳು ಹೆಚ್ಚಾಗುವ ಸಾಧ್ಯತೆ ಇದೆ ಎಂದರು. ದಕ್ಷಿಣದ ರಾಜ್ಯಗಳು ದೇಶದ ಜಿಡಿಪಿಗೆ ಶೇ. 40, ಜಿಎಸ್‌ಟಿ ಒಟ್ಟಾರೆ 22 ಲಕ್ಷ



ಕೋಟಿಯಲ್ಲಿ 7 ಲಕ್ಷ ಕೋಟಿ ನೀಡುವ, 48 ಲಕ್ಷ ಕೋಟಿ ತೆರಿಗೆಯಲ್ಲಿ ಕರ್ನಾಟಕ 5 ಲಕ್ಷ ಕೋಟಿ ಪಾವತಿಸುತ್ತದೆ. ವಾಪಸ್ ಕೊಡುವುದು 60 ಸಾವಿರ ಕೋಟಿ. ಉತ್ತರ ಪ್ರದೇಶ 2.15 ಲಕ್ಷ ಕೋಟಿ ತೆರಿಗೆ ಸಂಗ್ರಹವಾದರೆ ಕೇಂದ್ರ ವಾಪಸ್ ನೀಡುವುದು 6 ಲಕ್ಷ ಕೋಟಿ ರೂ ಎಂದು ವಿವರಿಸಿದರು.

ಹೊಗಸೊಪ್ಪು ಬೆಲೆ ಭಾರೀ ಕುಸಿತಕಂಡು ತಂಬಾಕು ಬೆಳೆಗಾರರು ನರಕ ನೋಡುತ್ತಿದ್ದಾರೆ. 1 ಕೆಜಿ ಹೊಗೆಸೊಪ್ಪು ಬೆಳೆಯಲು 260 ರೂ. ಖರ್ಚಾಗುತ್ತಿದೆ. ಆದರೆ, ಕೆಜಿ ಹೊಗೆ ಸೊಪ್ಪು 140 ರೂ. ಖರೀದಿ ಮಾಡುತ್ತಿದ್ದಾರೆ. ರೈತರಿಗೆ ಅನ್ಯಾಯವಾಗುತ್ತಿದ್ದರು ಮೈಸೂರು–ಕೊಡಗು ಸಂಸದರು ಮೌನವಾಗಿದ್ದಾರೆ. ಜೆಡಿಎಸ್ ನಿಯೋಗ ಕೇಂದ್ರ ಸಚಿವರ ಭೇಟಿ ಮಾಡಿದ್ದರ ಪ್ರಯೋಜನ ಏನಾಯಿತು? ಎಂದು ಪ್ರಶ್ನಿಸಿದರು. ಕೇಂದ್ರ ಸಚಿವ ವಿ.ಸೋಮಣ್ಣ 500 ಕೋಟಿ ರೂ. ಕಾಮಗಾರಿಗಳಿಗೆ ಅಧಿಕಾರಿಗಳು ಟೆಂಡರ್ ಕರೆಯುತ್ತಾರೆ ಎಂದು ಹೇಳಿದ್ದಾರೆ. ಹಾಗಾದರೆ ನಿಮ್ಮ ಕೆಲಸ ಏನು? ಎಂದು ಪ್ರಶ್ನಿಸಿದರು. ಮಂತ್ರಿಯಾಗಿ 2 ವರ್ಷಗಳಾಯಿತು ಕರ್ನಾಟಕಕ್ಕೆ ಯಾವ ಯೋಜನೆ ತಂದ್ದೀದಿರಿ ತಿಳಿಸುವಂತೆ ಒತ್ತಾಯಿಸಿದರು.

ಮಾಜಿ ಸಂಸದ ಪ್ರತಾಪಸಿಂಹಗೆ ಅಶೋಕಪುರಂ ಹೆಸರೆಂದರೆ ಅಲರ್ಜಿ. ಹೆಸರು ಬದಲಾಯಿಸಿ ಅಮೃತಾ ನಿಲ್ದಾಣವೆಂದು ಹೆಸರಿಟ್ಟರೆ 30 ಕೋಟಿ ರೂ. ಅನುದಾನ ಬರುತ್ತದೆ ಎಂದು ಹೇಳಿದ್ದಾರೆ. ಕೋಟ್ಯಂತರ ರೂ. ಅನುದಾನ ಬರುವುದಾದರೆ ಎಲ್ಲ ನಿಲ್ದಾಣಗಳ ಹೆಸರು ಬದಲಿಸಬಹುದಲ್ಲ? ಎಂಥ ದುರಂತ ಇದು ಎಂದು ಟೀಕಿಸಿದರು. ನಗರ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ ವಿಜಯಕುಮಾರ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ. ರಾಮು, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಜಿಲ್ಲಾ ವಕ್ತಾರ ಎಂ.ಮಹೇಶ್, ರಾಹುಲ್ ಕುಂಬ್ರಹಳ್ಳಿ, ಗೋಪಿನಾಥ್, ಗಿರೀಶ್ ಇದ್ದರು.

### ಗೂಡ್ಸ್ ಟರ್ಮಿನಲ್ ಶಿಫ್ಟ್ ಮಾಡಿದರೆ ಉಗ್ರ ಚಳವಳಿ

ಮೈಸೂರು: ಗೂಡ್ಸ್ ಟರ್ಮಿನಲ್ ಅನ್ನು ಮಂಡ್ಯ ತಾಲೂಕಿನ ಎಲಿಯೂರಿಗೆ ಶಿಫ್ಟ್ ಮಾಡಿದರೆ ಉಗ್ರ ಚಳವಳಿ ಮಾಡಬೇಕಾಗುತ್ತದೆ ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಎಚ್ಚರಿಸಿದರು.

ಗೂಡ್ಸ್ ಟರ್ಮಿನಲ್ ಮೇಲೆ ಕೇಂದ್ರ ಸಚಿವರಾದ ಎಚ್.ಡಿ . ಕುಮಾರಸ್ವಾಮಿ ಮತ್ತು ವಿ. ಸೋಮಣ್ಣ ಕಣ್ಣು ಬಿದ್ದಿದೆ. 1882ರಲ್ಲಿ ಆರಂಭವಾದ ಗೂಡ್ಸ್ ಟರ್ಮಿನಲ್ ಅನ್ನು ವಂದೇ ಭಾರತ್ ರೈಲು ಗಾಡಿಗಾಗಿ ಶಿಫ್ಟ್ ಮಾಡಲು ಮುಂದಾಗಿದ್ದಾರೆ. ಕುಮಾರಸ್ವಾಮಿ ಅವರು ಚಾಮುಂಡಿಬೆಟ್ಟ ಸೇರಿ ಇಡೀ ಮೈಸೂರು ಅನ್ನು ತಮ್ಮ ಕ್ಷೇತ್ರಕ್ಕೆ ಶಿಫ್ಟ್ ಮಾಡಿಕೊಳ್ಳಲಿ ಎಂದು ಟೀಕಿಸಿದರು. ಗೂಡ್ಸ್ ಟರ್ಮಿನಲ್ ಅನ್ನು 10 ಸಾವಿರ ಜನರು ಅವಲಂಬಿತರಾಗಿದ್ದಾರೆ. ನಿತ್ಯ 60 ಟ್ರಕ್ ಲೋಡ್, ಅನ್‌ಲೌಡ್ ಆಗುತ್ತದೆ 2025–26ನೇ ಸಾಲಿನಿಂದ 4990 ಕೋಟಿ ಆದಾಯ ಬಂದಿದೆ. ಶಿಫ್ಟ್ ಮಾಡಿದರೆ ರೈಲು ನಿಲ್ದಾಣ ಬಂದ್ ಮಾಡಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

### ಶೇ.15 ಮತದಾರರು ಗುರುತು ಮಾಡಿಲ್ಲ

ಮೈಸೂರು: ಮತದಾರರ ಪಟ್ಟಿಯ ವಿಶೇಷ ಪರಿ ಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಕರ್ನಾಟಕದಲ್ಲಿ ಮ್ಯಾಪಿಂಗ್ ಮುಗಿದಿದ್ದು, ಶೇ. 15 ಮತದಾರರು ಪಟ್ಟಿಯಿಂದ ಹೊರಗುಳಿದಿದ್ದಾರೆ. ಅಂದಾಜು 90 ಲಕ್ಷ ಜನರ ಮತ ಕಸಿಯುವ ಪ್ರಯತ್ನ ನಡೆದಿದೆ ಎಂದು ಎಂ.ಲಕ್ಷ್ಮಣ್ ತಿಳಿಸಿದರು.

**ಮ್ಯಾಪಿಂಗ್ ಬಹಳ ವಿಚಿತ್ರವಾಗಿದೆ. ಉದಾ:** ನನ್ನ ಹೆಸರು ಮೊದಲು ಲಕ್ಷ್ಮಣ್ ಎಂದು ನಮೂದಾಗಿದೆ. ಈಗ ಲಕ್ಷ್ಮಣ ಎಂದರೆ ತೆಗೆದುಕೊಳ್ಳುತ್ತಿಲ್ಲ. ಅಪ್ಪ ಹುಟ್ಟಿದ ದಾಖಲೆಯನ್ನು ಎಲ್ಲಿಂದ ತರುವುದು? ಮುಸ್ಲಿಂರ ಹೆಸರುಗಳಲ್ಲಿ ಬಹಳ ಸ್ಪೆಲ್ಲಿಂಗ್ ತಪ್ಪಾಗಿದೆ. ಅರ್ಹ ಮತದಾರರನ್ನು ತೆಗೆಯುವ ಪ್ರಯತ್ನ ನಡೆಯುತ್ತಿದೆ ಎಂದರು.

# ಠಾಣೆಗಳಲ್ಲಿ ಮಹಿಳೆಯರಿಗೆ ಗೌರವ ಕೊಡಿ: ಡಾ.ನಾಗಲಕ್ಷ್ಮಿ ಚೌಧರಿ
## ಪೊಲೀಸ್ ಸಿಬ್ಬಂದಿಗೆ ಲಿಂಗ ಸೂಕ್ಷ್ಮತೆ ಅರಿವಿರಲಿ

**ಮಂಡ್ಯ:** ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಮಹಿಳೆಯರು ದೂರು ನೀಡಲು ಬಂದಾಗ ಅವರಿಗೆ ಗೌರವಪೂರ್ಣವಾಗಿ ವರ್ತಿಸಬೇಕು ಮತ್ತು ಅವರ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದು ಪೊಲೀಸರ ಮೂಲಭೂತ ಕರ್ತವ್ಯ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಹೇಳಿದರು.

ಶುಕ್ರವಾರ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದ ನಿರ್ದೇಶನದಂತೆ ಆಯೋಜಿಸಲಾದ ಮಹಿಳಾ ಜನ್ ಸುನ್ವಾಯಿ (ಸಾರ್ವಜನಿಕ ವಿಚಾರಣೆ) ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಹಿಳೆಯರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಪೊಲೀಸ್ ಇಲಾಖೆಯಲ್ಲಿ ಲಿಂಗ ಸೂಕ್ಷ್ಮತೆ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ಅವರು ಸೂಚಿಸಿದರು. ಶಾಲೆಗಳು ಮತ್ತು ಕಾಲೇಜುಗಳಲ್ಲಿ ಆಂತರಿಕ ದೂರು ಸಮಿತಿ ರಚನೆ ಕಡ್ಡಾಯವಾಗಿದ್ದು, ಅದರ ಬಗ್ಗೆ ವ್ಯಾಪಕ ಅರಿವು ಮೂಡಿಸುವುದು ಅಗತ್ಯವಾಗಿದೆ ಎಂದರು. ಪ್ರತಿ ಮೂರು ತಿಂಗಳಿಗೊಮ್ಮೆ ಸಭೆಗಳನ್ನು ನಡೆಸಿ ವರದಿಗಳನ್ನು ಮಹಿಳಾ ಆಯೋಗಕ್ಕೆ ಸಲ್ಲಿಸಬೇಕು ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುವ



ನಿಟ್ಟಿನಲ್ಲಿ ಡಿಜಿಟಲ್ ಪೊಲೀಸ್ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಬೇಕೆಂದು ತಿಳಿಸಿದ ಅವರು, ಎಲ್ಲಾ ಪೊಲೀಸ್ ಠಾಣೆಗಳಲ್ಲಿ ದೂರು ಸಲ್ಲಿಸಲು ಕ್ಯೂಆರ್ ಕೋಡ್ ವ್ಯವಸ್ಥೆ ಕಲ್ಪಿಸಬೇಕೆಂದು ಸಲಹೆ ನೀಡಿದರು. ಠಾಣೆಗೆ ಬರುವ ಮಹಿಳೆಯರ ಅಹವಾಲುಗಳನ್ನು ತಕ್ಷಣ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದು ಅಗತ್ಯ ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಭದ್ರತೆಯನ್ನು ದೃಢಪಡಿಸುವ ಸಲುವಾಗಿ ಅಕ್ಕಪಡೆ ವಾಹನಗಳ ಮೂಲಕ ಶಾಲೆಗಳು, ಕಾಲೇಜುಗಳು, ಉದ್ಯಾನವನಗಳು, ಆಸ್ಪತ್ರೆಗಳು ಹಾಗೂ ಬಸ್ ನಿಲ್ದಾಣಗಳಲ್ಲಿ ನಿಯಮಿತ ಪರಿಶೀಲನೆ ನಡೆಸಬೇಕೆಂದು ಅವರು ಸೂಚಿಸಿದರು. ಸಾರ್ವಜನಿಕ ಸ್ಥಳಗಳಲ್ಲಿ ಸಹಾಯವಾಣಿ ಸಂಖ್ಯೆಗಳ ಪ್ರದರ್ಶನವೂ ಕಡ್ಡಾಯವಾಗಿರಬೇಕು ಎಂದರು.

ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ಮಹಿಳಾ ಮತ್ತು ಮಕ್ಕಳ ವಸತಿ ನಿಲಯಗಳಲ್ಲಿ ವೈದ್ಯಕೀಯ ಸೌಲಭ್ಯ, ಸ್ವಚ್ಛತೆ ಹಾಗೂ ಸಮರ್ಪಕ ಬೆಳಕು ವ್ಯವಸ್ಥೆ ಕಲ್ಪಿಸುವುದು ಅಗತ್ಯ ಎಂದು ತಿಳಿಸಿದರು. ಜೊತೆಗೆ ಜಿಲ್ಲೆಯ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಮಕ್ಕಳ ಪಾಲನಾ ಕೇಂದ್ರ (ತಾಯಂದಿರಿಗೆ ಹಾಲುಣಿಸುವ ಕೊಠಡಿ), ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯಗಳನ್ನು ಒದಗಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಪೊಲೀಸ್ ಇಲಾಖೆ ಮೈಕ್ರೋ ಫೈನಾನ್ಸ್ ಸಮಸ್ಯೆಗಳಿಗೆ ಕಡಿವಾಣ ಹಾಕಿರುವ ಕಾರ್ಯವನ್ನು ಅವರು ಶ್ಲಾಘಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಹೆಣ್ಣು ಭ್ರೂಣ ಹತ್ಯೆ ಹಾಗೂ ಬಾಲ್ಯ ವಿವಾಹ ತಡೆಗೆ ಜಿಲ್ಲೆಯಲ್ಲಿ ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಶಾಲಾ ವಿದ್ಯಾರ್ಥಿಗಳು ಮೂರು ದಿನಕ್ಕಿಂತ ಹೆಚ್ಚು ಗೈರುಹಾಜರಾಗಿದರೆ, ಪೋಷಕರನ್ನು ಸಂಪರ್ಕಿಸಿ ಕಾರಣ ತಿಳಿದುಕೊಳ್ಳುವ ವ್ಯವಸ್ಥೆ ಜಾರಿಗೆ ತಂದಿರುವುದಾಗಿ ಹೇಳಿದರು.


ಜಿಲ್ಲಾ ಆರಕ್ಷಕ ಅಧೀಕ್ಷಕಿ ಶೋಭರಾಣಿ ವಿ.ಜೆ. ಅವರು 2024ರಲ್ಲಿ ಕಾಣೆಯಾದ 420 ಮಹಿಳೆಯರಲ್ಲಿ 410 ಜನರನ್ನು ಪತ್ತೆಹಚ್ಚಲಾಗಿದೆ ಮತ್ತು 2025ರಲ್ಲಿ 483 ಪ್ರಕರಣಗಳಲ್ಲಿ 468 ಜನರನ್ನು ಪತ್ತೆಹಚ್ಚಲಾಗಿದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಡಾ. ನಾಗಲಕ್ಷ್ಮಿ ಚೌಧರಿ ಅವರು ಸಂತ್ರಸ್ತ ಮಹಿಳೆಯರಿಂದ ಅಹವಾಲುಗಳನ್ನು ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿ ರೂಪ, ರಾಜ್ಯ ಸಣ್ಣ ಕೈಗಾರಿಕೆಗಳ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್.ನಂದಿನಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಆಶಾ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

# ಏಪ್ರಿಲ್ 20 ರಂದು ಬಸವ ಜಯಂತಿ

**ಮೈಸೂರು:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಮೈಸೂರು ಬಸವ ಬಳಗಗಳ ಒಕ್ಕೂಟದ ವತಿಯಿಂದ ಬಸವ ಜಯಂತಿ–2026 ಹಾಗೂ 2025–26 ನೇ ಸಾಲಿನ ಬಸವ ರಾಷ್ಟ್ರೀಯ ಪುರಸ್ಕಾರ ಪ್ರಧಾನ ಸಮಾರಂಭವನ್ನು ಏಪ್ರಿಲ್ 20 ರಂದು ಬೆಳಗ್ಗೆ 12 ಘಂಟೆಗೆ ಕರ್ನಾಟಕ ಕಲಾಮಂದಿರದದಲ್ಲಿ ಆಯೋಜಿಸಲಾಗಿರುತ್ತದೆ.

ಏಪ್ರಿಲ್ 19 ರಂದು ಬೆಳಗ್ಗೆ 8:30 ಗಂಟೆಗೆ ಗನ್ ಹೌಸ್ ವೃತ್ತ, ಶ್ರೀ ಬಸವೇಶ್ವರ ಪ್ರತಿಮೆ ಬಳಿಯಿಂದ ಕರ್ನಾಟಕ ಕಲಾಮಂದಿರದ ವರೆಗೆ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನ 1:30 ಕ್ಕೆ ಕರ್ನಾಟಕ ಕಲಾಮಂದಿರದಲ್ಲಿರುವ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಹಿರಿಯ ಕಲಾವಿದರಾದ ಎಲ್. ಶಿವಲಿಂಗಪ್ಪ ಅವರು ರಚಿಸಿರುವ ವಚನ ಚಿತ್ರಗಳ ಪ್ರದರ್ಶನವನ್ನು ಮಾಡಲಾಗುತ್ತದೆ. ಮಧ್ಯಾಹ್ನ 2:00 ಗಂಟೆಗೆ ಮಹಿಳಾ ಮತ್ತು ಮಕ್ಕಳ ಸಮಿತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತದೆ. ಸಂಜೆ 6:00 ಗಂಟೆಗೆ ನಿರಂತರ ಮೈಸೂರು ಅಭಿನಯದ



ಬಸವಣ್ಣನವರ ವಚನಗಳನ್ನಾದರಿಸಿದ ನೃತ್ಯ ರೂಪಕ ಆಯೋಜಿಸಲಾಗಿದೆ.

# ಡಾ.ಬಿ.ಆರ್.ಅಂಬೇಡ್ಕರ್ ಮಾರ್ಗ ಚಿಂತನೆಗಳ ಗಣಿ: ಡಾ.ರೂಪಾ ರೈನಾ




**ರಾಮನಗರ:** ಭಾರತ ದೇಶದ ಇತಿಹಾಸದಲ್ಲಿ ಅನೇಕ ಮಹಾನ್ ವ್ಯಕ್ತಿತ್ವಗಳು ಉದಯಿಸಿ ತಮ್ಮ ಚಿಂತನೆಗಳ ಮೂಲಕ ಸಮಾಜದ ಮೇಲೆ ಅಚ್ಚಳಿಯದ ಗುರುತು ಮೂಡಿಸಿದ್ದಾರೆ. ಅಂತಹ ಮಹಾನ್ ಚೇತನರಲ್ಲಿ ಪ್ರಮುಖರಾದವರು ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್. ಅವರು ಕೇವಲ ಸಂವಿಧಾನ ರಚನೆಗಾರರಷ್ಟೇ ಅಲ್ಲ, ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವ ಹಕ್ಕುಗಳ ಪರ ಹೋರಾಡಿದ ಕ್ರಾಂತಿಕಾರಿ ಚಿಂತಕರೂ ಹೌದು. ಅವರ ಜೀವನ ಮತ್ತು ಚಿಂತನೆಗಳು ಇಂದಿಗೂ ನಮ್ಮ ಸಮಾಜಕ್ಕೆ ದಾರಿದೀಪವಾಗಿವೆ. ಅಂಬೇಡ್ಕರ್ ಮಹತ್ವದ ಚಿಂತನೆಗಳ ಗಣಿ ಎಂದು ರಾಜ್ಯಶಾಸ್ತ್ರ ಪ್ರಾಧ್ಯಾಪಕಿ ಡಾ. ರೂಪಾ ರೈನಾ ಅವರು ಅಭಿಪ್ರಾಯಪಟ್ಟರು.

ಕನಕಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಡಾ.ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು.

ಅಂಬೇಡ್ಕರ್ ಅವರ ವ್ಯಕ್ತಿತ್ವದ ಆಳವನ್ನು ಚೆನ್ನಾಗಿ ಪ್ರತಿಬಿಂಬಿಸುತ್ತದೆ. ಡಾ. ಅಂಬೇಡ್ಕರ್ ಅವರು ಸಮಾಜದಲ್ಲಿ ಆಳವಾಗಿ ನೆಲೆಗೊಂಡಿದ್ದ ಅಸಮಾನತೆ, ಅಸ್ಪೃಶ್ಯತೆ ಮತ್ತು ಶೋಷಣೆಯ ವಿರುದ್ಧ ಹೋರಾಡಿದ ಮಹಾನ್ ನಾಯಕರು. ಅವರು ತಾವು ಅನುಭವಿಸಿದ ಅನ್ಯಾಯವನ್ನು ಕೇವಲ ವೈಯಕ್ತಿಕ ಸಮಸ್ಯೆಯಾಗಿ ನೋಡದೇ, ಅದನ್ನು ಸಮಸ್ತ ಶೋಷಿತ ವರ್ಗಗಳ ಸಮಸ್ಯೆಯಾಗಿ ಪರಿಗಣಿಸಿ, ಅದರ ವಿರುದ್ಧ ಸಂಘಟಿತ ಹೋರಾಟ ನಡೆಸಿದರು. ಅವರ ಚಿಂತನೆಗಳ ಮೂಲದಲ್ಲೇ ಸಮಾನತೆ, ಸ್ವಾತಂತ್ರ?ಯ ಮತ್ತು ಭ್ರಾತೃತ್ವ ಎಂಬ ಮೌಲ್ಯಗಳು ಇದ್ದವು ಎಂದರು.

ಅಂಬೇಡ್ಕರ್ ಅವರ ಚಿಂತನೆಗಳನ್ನು ವಿಶ್ಲೇಷಿಸಿ, ಅವರು ಕೇವಲ ಒಂದು ಸಮುದಾಯದ ನಾಯಕನಲ್ಲ, ಸಂಪೂರ್ಣ ಮಾನವಕುಲದ ಮಾರ್ಗದರ್ಶಕ ಎಂದು ಹೇಳಿದರು. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಶಿಕ್ಷಣವೇ ಸಮಾಜದ ಪರಿವರ್ತನೆಯ ಪ್ರಮುಖ ಸಾಧನ. ?ಶಿಕ್ಷಣ ಪಡೆಯಿರಿ, ಸಂಘಟಿತರಾಗಿ, ಹೋರಾಡಿ ಎಂಬ ಅವರ ಘೋಷಣೆ ಇಂದಿಗೂ ಯುವಜನತೆಗೆ ಪ್ರೇರಣೆ ನೀಡುತ್ತದೆ ಎಂದು ತಿಳಿಸಿದರು. ಅಂಬೇಡ್ಕರ್ ಅವರು ಸಮಾಜದಲ್ಲಿ ಸಮಾನತೆ ಸಾಧಿಸಲು ಶಿಕ್ಷಣವನ್ನು ಅತ್ಯಂತ ಪ್ರಮುಖ ಆಯುಧವೆಂದು ಪರಿಗಣಿಸಿದರು. ಅವರು ತಮ್ಮ ಜೀವನದಲ್ಲಿ ಎಷ್ಟೇ ಅಡೆತಡೆಗಳು ಬಂದರೂ, ವಿದ್ಯಾಭ್ಯಾಸವನ್ನು ಕೈಬಿಡಲಿಲ್ಲ. ಕೊಲಂಬಿಯಾ ವಿಶ್ವವಿದ್ಯಾಲಯ ಮತ್ತು ಲಂಡನ್ ಶಾಲಾ ಆಫ್ ಎಕಾನಾಮಿಕ್ಸ್ ನಲ್ಲಿ ಅವರು ಉನ್ನತ ಶಿಕ್ಷಣ ಪಡೆದರು. ಅವರ ಈ ಸಾಧನೆಗಳು ಶೋಷಿತ ಸಮುದಾಯದ ಯುವಕರಿಗೆ ಹೊಸ ದಾರಿಯನ್ನು ತೋರಿಸಿವೆ ಎಂದವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಡಾ. ಶಾಮಲ ಬಿ. ಅವರು ಮಾತನಾಡಿ, ಅಂಬೇಡ್ಕರ್ ದೇಶಕ್ಕೆ ಸೈದ್ಧಾಂತಿಕ ತಿರುವು ಕೊಟ್ಟ ಮಹಾನ್ ಚೇತನ ಎಂದು ಹೇಳಿದರು. ನಿಜಕ್ಕೂ, ಅಂಬೇಡ್ಕರ್ ಅವರ ಚಿಂತನೆಗಳು ಭಾರತದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಗೆ ಹೊಸ ದಿಕ್ಕನ್ನು ನೀಡಿದವು. ಅವರು ರೂಪಿಸಿದ ಭಾರತೀಯ ಸಂವಿಧಾನವು ವಿಶ್ವದಲ್ಲೇ ಅತ್ಯಂತ ಪ್ರಗತಿಪರ ಸಂವಿಧಾನಗಳಲ್ಲಿ ಒಂದಾಗಿದೆ ಎಂದು ಹೇಳಿದರು. ಅಂಬೇಡ್ಕರ್ ಅವರ ಸಂವಿಧಾನದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಗಳನ್ನು ನೀಡಲಾಗಿದೆ. ಜಾತಿ, ಧರ್ಮ, ಲಿಂಗ ಇತ್ಯಾದಿ ಆಧಾರದ ಮೇಲೆ ನಡೆಯುವ ಭೇದಭಾವವನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗಿದೆ. ಇದು ಅವರ ಸಮಾನತೆಯ ಕನಸಿನ ಪ್ರತಿಫಲವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಇತಿಹಾಸ ವಿಭಾಗದ ಮುಖ್ಯಸ್ಥರಾದ ಸಾವಿತ್ರಿ ಅವರು ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ವಿಶ್ವರಾಧ್ಯ ಅವರು ಸ್ವಾಗತಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ಆರ್. ನಂಜುಂಡ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಈ ಎಲ್ಲರ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ಕಾರ್ಯಕ್ರಮದ ಒಂದು ಪ್ರಮುಖ ಅಂಶವಾಗಿ ಅಂಬೇಡ್ಕರ್ ಅಧ್ಯಯನ ಕೇಂದ್ರದ ವತಿಯಿಂದ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳು ಆಯೋಜಿಸಲಾಯಿತು. ಅಂಬೇಡ್ಕರ್ ಅವರ ಜೀವನ ಮತ್ತು ಚಿಂತನೆಗಳ ಕುರಿತಾಗಿ ನಡೆದ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಇದು ವಿದ್ಯಾರ್ಥಿಗಳಲ್ಲಿ ಅಂಬೇಡ್ಕರ್ ಅವರ ಚಿಂತನೆಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವಲ್ಲಿ ಸಹಾಯಕವಾಯಿತು.

ಗ್ರಂಥಪಾಲಕರಾದ ಡಾ. ಮುಕ್ತಾಯಿ ಅವರು ಸಂವಿಧಾನದ ಪೀಠಿಕೆಯನ್ನು ವಾಚಿಸಿದರು. ಇದು ವಿದ್ಯಾರ್ಥಿಗಳಿಗೆ ಸಂವಿಧಾನದ ಮಹತ್ವವನ್ನು ತಿಳಿಯಲು ಒಂದು ಉತ್ತಮ ಅವಕಾಶವಾಯಿತು. ಸಂವಿಧಾನದ ಪೀಠಿಕೆ ನಮ್ಮ ದೇಶದ ಮೂಲ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ.

ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಡಾ. ಕೋಮಲ ಎ.ಸಿ, ಡಾ. ಅಕ್ಷತಾ ಪರಂಜತಿ ಕುಮಾರ್, ಡಾ. ಗೀತಾಬಾಯಿ ಬಸವರಾಜು, ಡಾ. ಮುಕ್ತಾರ್ ಪಾಷಾ, ಮಹಮ್ಮದ್ ಪಾಷಾ, ಪ್ರಸನ್ನ ಕುಮಾರ್, ಲೋಕೇಶ್, ಮಂಜುನಾಥ್, ಚಂದ್ರಶೇಖರ್ ಸೇರಿದಂತೆ ಕಾಲೇಜಿನ ಬೋಧಕರು ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕರ್ನಾಟಕ ಲೋಕಾಯುಕ್ತಕ್ಕೆ ನಾಲ್ಕು ದಶಕಗಳು
## ಏ. 18 ರಂದು ವಿಶೇಷ ಕಾರ್ಯಕ್ರಮ

**ಬೆಂಗಳೂರು:** ಭ್ರಷ್ಟಾಚಾರ ನಿರ್ಮೂಲನೆ ಮತ್ತು ಆಡಳಿತ ಸುಧಾರಣೆಯಲ್ಲಿ ಮಹತ್ತರ ಪಾತ್ರ ವಹಿಸಿರುವ ?ಕರ್ನಾಟಕ ಲೋಕಾಯುಕ್ತ' ಸಂಸ್ಥೆಯು ತನ್ನ ಯಶಸ್ವಿ ನಾಲ್ಕು ದಶಕಗಳ ಪಯಣವನ್ನು ಪೂರೈಸಿದ್ದು, 2026ರ ಏಪ್ರಿಲ್ 18, ಶನಿವಾರದಂದು ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಭಾರತದ ಮುಖ್ಯ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಉದ್ಘಾಟನೆ ನೆರವೇರಿಸಲಿದ್ದಾರೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಅವರು ಗೌರವ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕರ್ನಾಟಕದ ಲೋಕಾಯುಕ್ತರಾದ ಬಿ.ಎಸ್. ಪಾಟೀಲ್, ಉಪಲೋಕಾಯುಕ್ತರುಗಳಾದ ಕೆ.ಎನ್. ಫಣೀಂದ್ರ ಮತ್ತು ಬಿ. ವೀರಪ್ಪ ಅವರ ಘನ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮವು ಜರುಗಲಿದೆ.

ಈ ಸಂದರ್ಭದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಅವರು ಲೋಕಾಯುಕ್ತ ನಿಯತಕಾಲಿಕೆಯನ್ನು ಬಿಡುಗಡೆ ಮಾಡುವ ಜೊತೆಗೆ ಚುನಾಯಿತ ಪ್ರತಿನಿಧಿಗಳ ಆಸ್ತಿ ಮತ್ತು ಹೊಣೆಗಾರಿಕೆಗಳ ಹೊಸ ಪೋರ್ಟಲ್ ಹಾಗೂ ಆನ್‌ಲೈನ್ ತನಿಖಾ ಮಾಡ್ಯೂಲ್‌ಗೆ ಚಾಲನೆ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ಮಾಜಿ ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರನ್ನು ಸನ್ಮಾನಿಸಲಾಗುವುದು.

ಸಭಾ ಕಾರ್ಯಕ್ರಮದ ನಂತರ ಸಂಜೆ 4:30 ರಿಂದ 6:00 ರವರೆಗೆ ವಿಶೇಷ ವಿಚಾರಗೋಷ್ಠಿಗಳು




ನಡೆಯಲಿದ್ದು, ನಂತರ ಭ್ರಷ್ಟಾಚಾರದ ವಿರುದ್ಧದ ಹೋರಾಟ ಕುರಿತು ವಿವಿಧ ಗೋಷ್ಠಿಗಳು ನಡೆಯಲಿವೆ.

ಭ್ರಷ್ಟಾಚಾರ ಮತ್ತು ದುರಾಡಳಿತ ವಿರುದ್ಧ ಹೋರಾಟದ ಬಗ್ಗೆ ನಿವೃತ್ತ ನ್ಯಾಯಮೂರ್ತಿಗಳಾದ ಬಿ.ಎಸ್. ಪಾಟೀಲ್, ಲೋಕಾಯುಕ್ತ ಕಾಯ್ದೆಯಡಿ ಕುಂದುಕೊರತೆಗಳ ಪರಿಹಾರ ವಿಷಯದ ಮೇಲೆ ನಿವೃತ್ತ ನ್ಯಾಯಮೂರ್ತಿಗಳಾದ ಕೆ.ಎನ್. ಫಣೀಂದ್ರ ಹಾಗೂ ಭ್ರಷ್ಟಾಚಾರ ತಡೆಗಟ್ಟುವುದು ಹೇಗೆ? ಎಂಬುದರ ಬಗ್ಗೆ ನಿವೃತ್ತ ನ್ಯಾಯಮೂರ್ತಿಗಳಾದ ಬಿ. ವೀರಪ್ಪ ಅವರು ವಿಚಾರಗೋಷ್ಠಿ ನಡೆಲಿಸಲಿದ್ದಾರೆ.

ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ತನ್ನ ಅರ್ಥಪೂರ್ಣ ಹಾಗೂ ಅವಿರತ ಸೇವೆಯ 40 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದ್ದು, ಈ ಸುದೀರ್ಘ ಅವಧಿಯಲ್ಲಿ ಸಂಸ್ಥೆಯು ಹಲವಾರು ಸವಾಲುಗಳನ್ನು ಎದುರಿಸಿದ್ದರೂ ಸಹ, ಸಾರ್ವಜನಿಕ ಸೇವೆಯಲ್ಲಿನ ಭ್ರಷ್ಟಾಚಾರ, ಸ್ವಜನಪಕ್ಷಪಾತ ಹಾಗೂ ಆಡಳಿತ ದುರುಪಯೋಗದ ವಿರುದ್ಧದ ಹೋರಾಟದಲ್ಲಿ ಸದಾ ಸ್ಥಿತಪ್ರಜ್ಞವಾಗಿ ಕಾರ್ಯ ನಿರ್ವಹಿಸಿಕೊಂಡು ಬಂದಿದೆ.

ಸಮಾಜದಲ್ಲಿ ಭ್ರಷ್ಟಾಚಾರವು ಭಯಾನಕ ರೀತಿಯಲ್ಲಿ ಬೆಳೆಯುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಇದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ ಎಂಬ ಟೀಕೆಗಳಿದ್ದರೂ ಸಹ, ಧನಾತ್ಮಕ ಚಿಂತನೆ ಹಾಗೂ ಪರಿಶ್ರಮದಿಂದ ಭಷ್ಟಾಚಾರವನ್ನು ಹತ್ತಿಕ್ಕಬಹುದು ಎಂಬ ವಿಶ್ವಾಸವನ್ನು ಸಂಸ್ಥೆಯು ಮೂಡಿಸಿದೆ. ಜೀವನದ ಹಾದಿಯಲ್ಲಿ ಬರುವ ಕಠಿಣ ಸವಾಲುಗಳನ್ನು ಧೈರ್ಯ ಮತ್ತು ತಾಳ್ಮೆಯಿಂದ ಎದುರಿಸಿದಾಗ ಮಾತ್ರ ಯಶಸ್ಸು ಸಾಧ್ಯ.

ಆಮಿಷಗಳಿಗೆ ಒಳಗಾಗದ, ಅಧಿಕಾರದ ಆಸೆಗೆ ಮಣಿಯದ ಮತ್ತು ದೃಢ ಸಂಕಲ್ಪವುಳ್ಳ ಪ್ರಾಮಾಣಿಕ ವ್ಯಕ್ತಿಗಳ ಅಗತ್ಯತೆ ಇಂದು ಹೆಚ್ಚಿದೆ. ಸಾರ್ವಜನಿಕ ಹಿತಾಸಕ್ತಿಯೇ ಪರಮ ಗುರಿಯಾಗಿಸಿಕೊಂಡು ಕೆಲಸ ಮಾಡುವ ವ್ಯಕ್ತಿಗಳನ್ನು ನಾವು ಪ್ರೋತ್ಸಾಹಿಸಬೇಕಿದೆ. ಎಂತಹದೇ ನಿರಾಸೆ ಎದುರಾದರೂ ಶಾಂತ ಮತ್ತು ಸ್ಥಿರವಾದ ದೃಢತೆಯೊಂದಿಗೆ ಭ್ರಷ್ಟಾಚಾರದ ವಿರುದ್ಧದ ಹೋರಾಟ ಮುಂದುವರಿಯಬೇಕು.

ಒಟ್ಟಾರೆಯಾಗಿ, ಪ್ರಾಮಾಣಿಕ ವ್ಯಕ್ತಿಗಳನ್ನು ಬೆಳೆಸುವಲ್ಲಿ ನಾವು ವಿಫಲವಾದರೆ ಅನ್ಯಾಯವು ಗೆದ್ದು, ನ್ಯಾಯವು ಮರೆಯಾಗುವ ಅಪಾಯವಿದೆ ಎಂದು ಸಂಸ್ಥೆಯು ಎಚ್ಚರಿಸಿದೆ. ಸವಾಲುಗಳೇ ವ್ಯಕ್ತಿಯನ್ನು ಪರಿಪೂರ್ಣಗೊಳಿಸುತ್ತವೆ ಎಂಬ ಧ್ಯೇಯವಾಕ್ಯದೊಂದಿಗೆ ಲೋಕಾಯುಕ್ತವು ನಾಲ್ಕು ದಶಕಗಳನ್ನು ದಾಟಿ ಮುಂದಿನ ಹೆಜ್ಜೆಯನ್ನು ಇಡುತ್ತಿದೆ.

# ಜನಗಣತಿ ಕಾರ್ಯ ಪರಿಶೀಲಿಸಿದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ



**ಮೈಸೂರು:** ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಜಿ. ಅವರು ಶುಕ್ರವಾರ ನಗರದ ತೊಣಚಿಕೊಪ್ಪಲ್ ಪ್ರದೇಶಕ್ಕೆ ಭೇಟಿ ನೀಡಿ ನಡೆಯುತ್ತಿರುವ ಜನಗಣತಿ ಕಾರ್ಯಗಳನ್ನು ಪರಿಶೀಲಿಸಿದರು.

ಗಣತಿದಾರರು ಮನೆಗಳ ಮ್ಯಾಪಿಂಗ್ ಕಾರ್ಯದಲ್ಲಿ ತೊಡಗಿಕೊಂಡಿದ್ದು, ಅವರ ಕಾರ್ಯನಿರ್ವಹಣೆ ಕುರಿತು ಜಿಲ್ಲಾಧಿಕಾರಿಗಳು ಸ್ಥಳದಲ್ಲೇ ಮಾಹಿತಿ ಪಡೆದುಕೊಂಡರು. ಶನಿವಾರದವರೆಗೆ ಮ್ಯಾಪಿಂಗ್ ಕಾರ್ಯ ನಡೆಯಲಿದ್ದು, ಬಳಿಕ ಮನೆ–ಮನೆಗೆ ತೆರಳಿ ಜನರ ಮಾಹಿತಿಯನ್ನು ಸಂಗ್ರಹಿಸುವ ಪ್ರಕ್ರಿಯೆ ಆರಂಭವಾಗಲಿದೆ ಎಂದು ತಿಳಿಸಿದರು.

ಸಾರ್ವಜನಿಕರು ಗಣತಿದಾರರಿಗೆ ನಿಖರ ಮತ್ತು ಸತ್ಯ ಮಾಹಿತಿ ನೀಡುವ ಮೂಲಕ ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಹಾಗೂ ನಗರ ಜನಗಣತಿ ಅಧಿಕಾರಿ ಸೋಮಶೇಖರ್ ಜಿ.ಎಸ್ ಉಪಸ್ಥಿತರಿದ್ದರು.

ವಿಶ್ವಕರ್ಮ ವಧು–ವರರ ಅನ್ವೇಷಣಾ ಸಮಾವೇಶ: ಏಪ್ರಿಲ್ 24ರಿಂದ ಬೆಂಗಳೂರುನಲ್ಲಿ ಆಯೋಜನೆ

ನಾಗಮಂಗಲ: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ವತಿಯಿಂದ ಏಪ್ರಿಲ್ 24ರಿಂದ 26ರವರೆಗೆ ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯ ಗುರುರಾಜ ಕಲ್ಯಾಣ ಮಂಟಪದಲ್ಲಿ 3ನೇ ರಾಜ್ಯ ಮಟ್ಟದ ವಿಶ್ವಕರ್ಮ ವಧು–ವರರ ಅನ್ವೇಷಣಾ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ರಾಜ್ಯ ಉಪಾಧ್ಯಕ್ಷ ಬಸವರಾಜ್ ಕದಲೂರು ತಿಳಿಸಿದರು.

ನಾಗಮಂಗಲದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಪಿ. ನಂಜುಂಡಿ ಅವರ ನೇತೃತ್ವದಲ್ಲಿ ನಡೆಯುವ ಈ ಸಮಾವೇಶವು ಅವಿವಾಹಿತರು, ವಿಧವೆಯರು, ವಿಧುರರು ಮತ್ತು ವಿಚ್ಛೇದಿತರಿಗಾಗಿ ನೋಂದಣಿ ಆಧಾರಿತ ಮ್ಯಾಟ್ರಿಮೋನಿ ಕಾರ್ಯಕ್ರಮವಾಗಿರುತ್ತದೆ ಎಂದರು.

ಭಾಗವಹಿಸುವವರಿಗೆ ಪರಸ್ಪರ ಭೇಟಿ ಹಾಗೂ ಕುಟುಂಬಗಳೊಂದಿಗೆ ಸಮಾಲೋಚನೆ ನಡೆಸಿ, ಒಪ್ಪಂದವಾದಲ್ಲಿ ಸ್ಥಳದಲ್ಲೇ ವಿವಾಹ ನಿಶ್ಚಯ ಮಾಡುವ ಅವಕಾಶವೂ ಕಲ್ಪಿಸಲಾಗಿದೆ. ಭಾಗವಹಿಸುವವರು ಜಾತಿ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್ ಕಡ್ಡಾಯವಾಗಿ ತರಬೇಕು ಎಂದು ತಿಳಿಸಿದರು.

# ಗ್ರಾ.ಪಂ ನೌಕರರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

**ಮೈಸೂರು:** ಗ್ರಾಮ ಪಂಚಾಯತಿ ನೌಕರರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದಿಂದ ಜಿಲ್ಲಾ ಪಂಚಾಯತ್ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಗ್ರಾಮ ಪಂಚಾಯತಿ ನೌಕರರ ಬೇಡಿಕೆ ಈಡೇರಿಕೆಗೆ ನಿರಂತರವಾಗಿ ಹೋರಾಟ ನಡೆಯುತ್ತಲೇ ಇದೆ. ಆದರೆ, ಇದುವರೆಗೂ ನಮ್ಮ ಬೇಡಿಕೆ ಈಡೇರಿಲ್ಲ. ಕಳೆದ ಡಿ.22ರಂದು ಸಂಘಟನೆಯ ಮುಖಂಡರ ಸಭೆ ಕರೆದು ಬೇಡಿಕೆ ಈಡೇರಿಕೆಯ ಭರವಸೆ ನೀಡಲಾಗಿತ್ತು. ಆದರೆ, ಭರವಸೆ ನೀಡಿ 3 ತಿಂಗಳಾದರೂ ಯಾವುದೇ ಕ್ರಮ ಕೈಗೊಂಡಿಲ್ಲ. 19 ಬೇಡಿಕೆಗಳಲ್ಲಿ ಸರ್ಕಾರದ ಹಂತದಲ್ಲಿರುವ ಬೇಡಿಕೆಗಳನ್ನು ಹೊರತುಪಡಿಸಿ ಪ್ರಮುಖವಾಗಿರುವ 7 ಬೇಡಿಕೆಗಳನ್ನು ಈಡೇರಿಸಿ ಆದೇಶ ನೀಡುವುದಾಗಿ ನೀಡಿದ್ದ ಭರವಸೆ ಸಾಕಾರವಾಗಿಲ್ಲ. ಇಲ್ಲಿವರೆಗೆ ಒಂದೇ ಒಂದು ಬೇಡಿಕೆ ಈಡೇರಿಸದೇ ಇರುವುದು ವಿಷಾದನೀಯ ಎಂದು ಕಿಡಿ ಕಾರಿದರು.

ನಮ್ಮ ಮನವಿಗೆ ಸ್ಪಂದಿಸದಿದ್ದರೆ ಬೃಹತ್ ಪ್ರಮಾಣದಲ್ಲಿ ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗುವುದು. ಈ ಹೋರಾಟದಲ್ಲಿ ಏನಾದರೂ ಅನಾಹುತಗಳಾದರೆ ಇದಕ್ಕೆ ನೇರವಾಗಿ ಆರ್ಡಿಪಿಆರ್ ಇಲಾಖೆಯೆ ಹೊಣೆ ಎಂದು ಎಚ್ಚರಿಕೆ ನೀಡಿದರು.

**ಬೇಡಿಕೆಗಳು:** ಎಲ್ಲ ನೌಕರರಿಗೆ 5000 ರೂ. ವೇತನ ಹೆಚ್ಚಳ ಮಾಡಿ ಇಲಾಖೆಯಿಂದ ಆದೇಶ




ಹೊರಡಿಸಬೇಕು. ನೌಕರರು ನಿವೃತ್ತಿ, ನಿಧನ ಹೊಂದಿದರೆ ಅವರಿಗೆ 6 ಲಕ್ಷ ರೂ ಇಡುಗಂಟು ನೀಡಬೇಕು. ಸೇವಾ ಹಿರಿತನದ ಆಧಾರದಲ್ಲಿ ವೇತನ ನೀಡಬೇಕು.

ಸ್ವಚ್ಛವಾಹಿನಿ ನೌಕರರ ಸಭೆ ಮಾಡಿ ಅವರ ಪ್ರಮುಖ ಬೇಡಿಕೆಗಳನ್ನು ಇತ್ಯರ್ಥಪಡಿಸಬೇಕು. ಪ್ರತಿಯೊಂದು ಪಂಚಾಯತಿಗೆ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳನ್ನು ತುಂಬಬೇಕು.

ಕಳೆದ 18–20 ವರ್ಷಗಳಿಂದ ಡಾಟಾ ಎಂಟ್ರಿ ಆಪರೇಟರ್ಗಳಾಗಿ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ ಅನುಮೋದನೆ ನೀಡಬೇಕು. 2ನೇ ಡಾಟಾ ಎಂಟ್ರಿ ಆಪರೇಟರ್ ನೇಮಕಾತಿ ಆಗಬೇಕು ಎಂದು ಆಗ್ರಹಿಸಿದರು.

ಆರೋಗ್ಯದ ಕುರಿತು ಸಿಬ್ಬಂದಿಗಳ ಮಾಹಿತಿಗಾಗಿ ನೀಡಿರುವ ಫಾರ್ಮೆಟ್ ಸರಿಪಡಿಸಬೇಕು. ಬಾಕಿ ಉಳಿದಿರುವ ಎಲ್ಲಾ ನೌಕರರಿಗೆ ಅನುಮೋದನೆ ನೀಡಬೇಕು. ಭವಿಷ್ಯನಿಧಿ ಜಾರಿ ಮಾಡಬೇಕು. ನಿವೃತ್ತಿ ನೌಕರರು ಅಕಾಲಿಕ ಮರಣ ಹೊಂದಿದವರಿಗೆ ಉಪಧನ ಹಾಗೂ ಅನುಕಂಪದ ನೇಮಕಾತಿ ಮಾಡಬೇಕು. ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ, ಬಾಕಿ ವೇತನ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಕೆ.ಬಸವರಾಜ್, ಕಾರ್ಯದರ್ಶಿ ಟಿ.ಎಸ್.ದಿನೇಶ್, ಖಜಾಂಚಿ ಲೋಕೇಶ್ ಕಿರಿಜಾಜಿ, ಮುಖಂಡರಾದ ಹೆಚ್. ಜೆ.ಜಗದೀಶ್, ಕರಿಗೌಡ, ಸೋಮೇಶ್, ನಂಜುಂಡ ಸ್ವಾಮಿ, ಕೇತುಪುರ ನಾಗರಾಜ್, ರಾಜಣ್ಣ ಹುಲ್ಲಳ್ಳಿ, ಪ್ರಕಾಶ್, ರೇಖಾ, ದಿವ್ಯ, ಗೀತಾ, ಮಹೇಶ್ವರಿ, ರಮೇಶ, ಕೃಷ್ಣ, ವರುಣಾ, ಕಿರಣ್ ಸೇರಿ ಅನೇಕರು ಭಾಗವಹಿಸಿದ್ದರು.

# ಸರ್ಕಾರಿ ತೋಪು ಅತಿಕ್ರಮಿಸಿ ಅಕ್ರಮ ಕಟ್ಟಡ ನಿರ್ಮಾಣ

**ತಿ.ನರಸೀಪುರ :** ಪಟ್ಟಣದ ಹಳೇ ಸಂತೆಮಾಳದ ಬಳಿ ಹೆಮ್ಮಿಗೆ ಮುಖ್ಯ ರಸ್ತೆ ಬದಿಯಲ್ಲಿರುವ ರೈತರ ಕೃಷಿ ಚಟುವಟಿಕೆಗಳಿಗೆ ಬಳಕೆಯಾಗುತ್ತಿದ್ದ ತೋಪಿನ ನಿವೇಶನವನ್ನು ಪುರಸಭಾ ನಾಮ ನಿರ್ದೇಶಿತ ಸದಸ್ಯನೋರ್ವ ಸಚಿವ, ಸಂಸದರ ಹೆಸರನ್ನು ಹೇಳಿಕೊಂಡು ಅತಿಕ್ರಮಿಸಿ, ಅಕ್ರಮ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದಾರೆ ಎಂದು ಮಂಗಳವಾರ ಟೌನ್ ರೈತರು ಹಾಗೂ ನಿವಾಸಿಗಳು ಗಂಭೀರ ಆರೋಪವನ್ನು ಮಾಡಿದ್ದಾರೆ.

ಪಟ್ಟಣದ ಆಲಗೂಡು ಸರ್ವೇ ನಂಬರ್ 76 ರಲ್ಲಿರುವ 19 ಕುಂಟೆ ಸರ್ಕಾರಿ ತೋಪಿನ ನಿವೇಶನವನ್ನು ಅತಿಕ್ರಮಸಿಕೊಂಡಿರುವ ಸ್ಥಳದಲ್ಲಿಯೇ ಜಮಾಣಿಗೊಂಡಿದ್ದ ಪಕ್ಕದ ಅಚ್ಚುಕಟ್ಟು ಪ್ರದೇಶದ ರೈತರು ಹಾಗೂ ನಿವಾಸಿಗಳು ಕೃಷಿ ಚಟುವಟಿಕೆಗಳನ್ನು ನಡೆಸಲು ಜಾಗವನ್ನು ಪುರಸಭೆ ನಾಮಿನಿ ಸದಸ್ಯ ಸಬೀಲ್ ಖಾನ್ ಒತ್ತುವರಿ ಮಾಡಿಕೊಂಡು ರೈತರಿಗೆ ತೊಂದರೆ ನೀಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತ ಮಹದೇವಸ್ವಾಮಿ ಮಾತನಾಡಿ, ಹತ್ತಾರು ದಶಕಗಳಿಂದ ಕೃಷಿಯನ್ನು ನಂಬಿಕೊಂಡು ಜಮೀನಿನಲ್ಲಿ ಭೂಮಿ ಹುಳುಮೆ ಮಾಡಿತ್ತಿದ್ದೇವೆ. ಸರ್ವೆನಂಬರ್ 76ರಲ್ಲಿ ಇರುವ 19 ಗುಂಟೆ ಸರಕಾರಿ ತೋಪು ಜಾಗವನ್ನು ರೈತರು ಹಲವು ವರ್ಷಗಳಿಂದ ರಸ್ತೆ ಮತ್ತು ಒಕ್ಕಣೆ ಮಾಡಲು ಬಳಸಿಕೊಂಡಿದ್ದು, ಜೋರು ಮಳೆ ಬಂದಾಗ ವೇಳೆ ಕೋಡಿ ಒಡೆದು ಜಮೀನುಗಳಿಗೆ ನೀರು ನುಗ್ಗಿ



ಸಮರ್ಪಕವಾದ ಬೆಳೆ ತೆಗೆಯಲು ಸಾಧ್ಯವಾಗದೆ ಜಮೀನಿನಲ್ಲಿ ಜೋಡು ಬೆಳೆದುಕೊಂಡಿದೆ. ಜತೆಗೆ ಕೆಲವು ವರ್ಷಗಳ ಹಿಂದೆ ಆಲಗೂಡು ಕೆರೆಯ ಉದ್ದಿ ಒಡೆದು, ಜಮೀನುಗೆ ನೀರು ನುಗ್ಗಿದ ಪರಿಣಾಮ ಕೃಷಿ ಮಾಡಲು ಅಸಾಧ್ಯವಾದ ಪರಿಸ್ಥಿತಿ ಉಂಟಾಗಿತ್ತು. ಈ ನಿವೇಶನವನ್ನು ನಾಮ ನಿರ್ದೇಶಿತ ಸದಸ್ಯ ಸಬಿಲ್ ಕಾಪೌಂಡ್ ಹಾಕಿ ಮುಚ್ಚಿ, ರೈತರಿಗೆ ಜಮೀನಿಗೆ ಹೋಗಲು ದಾರಿ ಸಂಪೂರ್ಣವಾಗಿ ಅಕ್ರಮಿಸಿಕೊಂಡಿದ್ದಾರೆ.

ರೈತ ಜಮೀನಿನ ದಾರಿ ಬಿಡಿಸುವಂತೆ ತಹಸೀಲ್ದಾರ್, ಪುರಸಭೆ ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೂ ದೂರು ನೀಡಲಾಗಿದೆ. ಅಧಿಕಾರಿಗಳು ತಕ್ಷಣ ಸ್ಥಳ ಪರಿಶೀಲನೆ ನಡೆಸಿ ರೈತರಿಗೆ ನ್ಯಾಯ ಬದಗಿಸುವಂತೆ ಒತ್ತಾಯಿಸಿದರು.

ರೈತರುಗಳಾದ ಪುಟ್ಟಮಾದೇಗೌಡ, ಸುಂದರಮ್ಮ, ಉಮೇಶ್, ನಂಜುಡಸ್ವಾಮಿ, ಮಲ್ಲೇಯ್ಯ, ಮಹದೇವ, ಕನಕಪಾಪು, ಗುರುಪ್ರಸಾದ್‌ಅಯ್ಯಂಗಾರ್, ಪ್ರಕಾಶ್, ನಂಜೇಗೌಡ ಹಾಗೂ ಇತರರು ಇದ್ದರು.

# ಅತ್ಯಧಿಕ ಪ್ರೋಟೀನ್ ಕಡಿಮೆ ಕ್ಯಾಲರಿಯ : ಆರೋರೂಟ್



✍ಸೌಮ್ಯಸನತ್

ಹಲವು ಸತ್ವಯುತ ಆಹಾರ ಪದಾರ್ಥಗಳು ನಮ್ಮ ಸುತ್ತಮುತ್ತಲೇ ಇದ್ದರೂ ಅದರ ಮಹತ್ವ ಅರಿಯದೆ ಅದರತ್ತ ಉದಾಸೀನ ತೋರುತ್ತೇವೆ. ಇಂತಹ ಆಹಾರ ಪದಾರ್ಥಗಳ ಪೈಕಿ ಕೂವೆ ಅರ್ಥಾತ್ ಆರಾರೂಟ್ ಕೂಡ ಒಂದಾಗಿದೆ. ಇದು ಆರೋರೂಟ್! ಇದರ ಕುರಿತು ಹೆಚ್ಚಿಗೆ ಹೇಳಬೇಕಾಗಿಲ್ಲ ಬಿಡಿ! ಇದೊಂದು ಮನೆಯಲ್ಲಿ ಇರಬೇಕಾದ ದಿವ್ಯ ಔಷಧದಂತಹ ವಸ್ತು ಎಂದೇ ಹೇಳಬಹುದು! ಗಿಡಗಳು ಅರಶಿನ ಗಿಡದಂತಿದ್ದರೆ, ಗೆಡ್ಡೆಗಳು ಶುಂಠಿಯನ್ನು ಹೋಲುತ್ತವೆ. ಕೂವೆಯನ್ನು ಮುಖ್ಯ ಬೆಳೆಯಾಗಿ ಬೆಳೆಯದಿದ್ದರೂ ಹಳ್ಳಿ ಪ್ರದೇಶದಲ್ಲಿ ಇತರ ಬೆಳೆಗಳ ನಡುವೆ ಮಿಶ್ರ ಬೆಳೆಯಾಗಿ ಬೆಳೆಯುವುದು ಕಂಡು ಬರುತ್ತದೆ. ಆಂಗ್ಲ ಭಾಷೆಯಲ್ಲಿ ಕರಕ್ಯೂಮ್ ಸ್ಟಾರ್ಚ್ ಅಥವಾ ಆರಾರೂಟ್ ಎಂದು ಕರೆಯುವ ಈ ಪೌಡರ್ ಅನ್ನು ನೆಲದಲ್ಲಿ ಬೆಳೆಯುವ ಒಂದು ಗಡ್ಡೆಯಿಂದ ತಯಾರಿಸುತ್ತಾರೆ.

ಗೆಡ್ಡೆ ಗೆಣಸು ಸೇವಿಸಿಯೇ ಜೀವನ ಮಾಡುತ್ತಿದ್ದ ಕಾಲವೂ ಇತ್ತು. ಆ ಕಾಲದಲ್ಲಿ ಹಲವು ಗೆಡ್ಡೆ ಗೆಣಸುಗಳನ್ನು ತಿಂದು ಜೀವಿಸುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಈ ಆರೋರೂಟ್ ನ್ನು ಸೇವಿಸುತ್ತಿದ್ದರು. ಇದು ಹೊಟ್ಟೆ ತಣಿಸುವ ಮತ್ತು ದೇಹಕ್ಕೆ ಬೇಕಾದ ವಿಟಮಿನ್ ಒದಗಿಸುವ ಪ್ರಮುಖ ಆಹಾರ ಪದಾರ್ಥವಾಗಿತ್ತು. ಇವತ್ತಿಗೂ ಮಲೆನಾಡುಗಳಲ್ಲಿ ತಮ್ಮ ಮನೆಯ ಹಿತ್ತಲಲ್ಲಿ ಇದನ್ನು ಬೆಳೆಸುವುದನ್ನು ನಾವು ಕಾಣಬಹುದಾಗಿದೆ. ಅಲ್ಲದೆ ಗೆಡ್ಡೆಯನ್ನು ಬೇಯಿಸಿ ತಿನ್ನುತ್ತಾರೆ. .

ಸಿಹಿ ಗುಣದ ಇದು ಹಲವರಿಗೆ ಇಷ್ಟದ ತಿನಿಸಾಗಿದೆ. ಹಿಂದೆ ಅನಾರೋಗ್ಯದ ಸಂದರ್ಭ ಇದನ್ನು ಔಷಧಿಯಾಗಿಯೂ, ಆಹಾರವಾಗಿಯೂ ನೀಡುತ್ತಿದ್ದರು. ಗೆಡ್ಡೆಗಳು ರುಚಿಯಾಗಿರುವುದರಿಂದ ಅದನ್ನು ತೊಳೆದು ನೀರಿನಲ್ಲಿ ಬೇಯಿಸಿ ತಿನ್ನುತ್ತಿದ್ದರು. ಇದು ಇತರೆ ಗೆಡ್ಡೆ ಗೆಣಸುಗಳಂತೆ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿರಲಿಲ್ಲ. ಇದಕ್ಕೆ ಇದರಲ್ಲಿ ಹಲವು ರೀತಿಯ ಔಷಧಿ ಗುಣಗಳೇ ಕಾರಣವಾಗಿದೆ. ಇಂದು ಮಾರುಕಟ್ಟೆಯಲ್ಲಿ ಲಭ್ಯವಿರುವ ಶುದ್ಧ ಆರೋರೂಟ್ ಪುಡಿಯನ್ನು ಆರೋಗ್ಯಕರ ಆಹಾರವಾಗಿ ಬಳಸಬಹುದು.

ಆರೋರೂಟ್ (Arrowroot) ಎನ್ನುವುದು Maranta arundinacea ಸಸ್ಯದ ಗೆಡ್ಡೆಯಿಂದ ಪಡೆಯಲಾಗುವ ಅತ್ಯಂತ ಪೌಷ್ಟಿಕಾಂಶಯುಕ್ತ, ಗ್ಲುಟನ್ ಮುಕ್ತ ಪಿಷ್ಟವಾಗಿದೆ. ಇದು ಸುಲಭವಾಗಿ ಜೀರ್ಣವಾಗುವ ಆಹಾರವಾಗಿದ್ದು,

ಅತ್ಯಧಿಕ ಪ್ರೋಟೀನ್ ಭರಿತವಾಗಿ ಕಡಿಮೆ ಕ್ಯಾಲರಿ ಹೊಂದಿರುವ ಈ ಪದಾರ್ಥವು ಸುಲಭವಾಗಿ ಜೀರ್ಣವಾಗುವ ಕಾರಣ ಮಕ್ಕಳಿಂದ ಹಿಡಿದು ವೃದ್ಧರವರೆಗೂ ಹಲವಾರು ರೀತಿಯಲ್ಲಿ ಉಪಯೋಗಿಸಬಹುದು.!







ಇದರಲ್ಲಿರುವ ಔಷಧೀಯ ಗುಣಗಳು ಮತ್ತು ಆರೋಗ್ಯಕಾರಿ ಪದಾರ್ಥವೂ ಆಗಿರುವುದರಿಂದ ಇದನ್ನು ಮಲೆನಾಡಿನಲ್ಲಿ ಮನೆಯ ಹಿತ್ತಲಿನಲ್ಲಿಯೇ ಬೆಳೆಸಿ ಬಳಸುತ್ತಿದ್ದರು. ಇದರ ಗೆಡ್ಡೆಯನ್ನು ಬೇಯಿಸಿ ತಿನ್ನಬಹುದು, ಪುಡಿ ಮಾಡಿ (Arrowroot powder) ದೋಸೆ, ಹಲ್ವಾ, ದೂದ್ ಪೇಡಾ, ಸೂಪ್‌ಗಳಲ್ಲಿ , ಸಾಸ್, ಪುಡ್ಡಿಂಗ್ ಮತ್ತು ವಿವಿಧ ತಿನಿಸುಗಳನ್ನು ದಪ್ಪವಾಗಿಸಲು ಬಳಸಲಾಗುತ್ತದೆ. ಇದರ ಮಹತ್ವ ಅರಿತು ಬಳಕೆ ಮಾಡಿದ್ದೇ ಆದರೆ ಆರೋಗ್ಯವಾಗಿರಲು ಸಾಧ್ಯವಾಗುತ್ತದೆ.

**ಬಳಕೆ ಮಾಡುವುದು ಹೇಗೆ ಗೊತ್ತಾ?**

ಗೆಡ್ಡೆಗಳನ್ನು ಗಿಡದಿಂದ ಬೇರ್ಪಡಿಸುವ ಸಂದರ್ಭ ಗೆಡ್ಡೆಗಳಲ್ಲಿರುವ ಮೊಳಕೆ ಕಣ್ಣುಗಳನ್ನು ಒಂದೆಡೆ ರಾಶಿ ಹಾಕಿಟ್ಟುಕೊಂಡಿದ್ದೇ ಆದರೆ ಮುಂದಿನ ವರ್ಷಕ್ಕೆ ಅವುಗಳಿಂದ ಸಸಿ ತಯಾರಿಸಲು ಅನುಕೂಲವಾಗುವುದು.




ಗೆಡ್ಡೆಗಳನ್ನು ಪ್ರತಿವರ್ಷ ಕೀಳುವ ಅಗತ್ಯವಿಲ್ಲ. ಬೇಸಿಗೆಯಲ್ಲಿ ಗಿಡ ಒಣಗಿದರೂ ಗೆಡ್ಡೆಗಳಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ. ಮಳೆ ಬಿದ್ದೊಡನೆಯೇ ಮತ್ತೆ ಗೆಡ್ಡೆಯಿಂದ ಮೊಳಕೆಯೊಡೆದು ಚಿಗುರಿ ಬಲಿಷ್ಠವಾಗಿ ಬೆಳೆಯುವುದು. ಎರಡು ವರ್ಷಗಳ ಕಾಲದ ಗೆಡ್ಡೆಗಳಲ್ಲಿ ಆಹಾರವು ಹೆಚ್ಚು ಪ್ರಮಾಣದಲ್ಲಿ ಸಂಗ್ರಹವಾಗುವುದರಿಂದ ಇದನ್ನು ಉಪಯೋಗಿಸುವುದರಿಂದ ಹೆಚ್ಚು ಪ್ರಯೋಜನ ಪಡೆಯಬಹುದು.

ಎರಡು ರೀತಿಯ ಪದ್ಧತಿಯನ್ನು ಅನುಸರಿಸುವುದರ ಮೂಲಕ ಈ ಗೆಡ್ಡೆಯಿಂದ ಹಿಟ್ಟನ್ನು ಪಡೆಯಬಹುದು. ಬಲಿತ ಗೆಡ್ಡೆಗಳನ್ನು ತೊಳೆದು ಸಿಪ್ಪೆ ತೆಗೆದು ಚಿಕ್ಕ ಚಿಕ್ಕ ಚೂರುಗಳನ್ನಾಗಿ ಮಾಡಿ ಆ ನಂತರ ಈ ಚೂರುಗಳನ್ನು ರುಬ್ಬಿ ತೆಗೆದು ಮಿಶ್ರಣವನ್ನು ನೀರಿನಲ್ಲಿ ಬೆರೆಸಿ ಬಟ್ಟೆಯಲ್ಲಿ ಹಾಕಿ ಸೋಸಬೇಕು. ಸೋಸಿ ಉಳಿದ ಜಿಗುಟನ್ನು ಚೆನ್ನಾಗಿ ಹಿಂಡಿ ಹಿಟ್ಟಿನ ದ್ರಾವಣವನ್ನು ಹಲವು ಗಂಟೆಗಳ ಕಾಲ ಇಡಬೇಕು. ಹೀಗೆ ಇಟ್ಟಾಗ ಅಡಿಯಲ್ಲಿ ಹಿಟ್ಟು ನಿಲ್ಲುತ್ತದೆ. ಹಿಟ್ಟಿನ ಮೇಲೆ ನಿಂತ ತಿಳಿ ನೀರನ್ನು ಬಸಿದು ತೆಗೆದು ಈ ಹಿಟ್ಟಿನ ಮಿಶ್ರಣಕ್ಕೆ ಮತ್ತೆ ಮೂರರಿಂದ ನಾಲ್ಕು ಬಾರಿ ಹೊಸ ನೀರನ್ನು ಹಾಕಿ ಬಸಿಯುವುದರ ಮೂಲಕ ಕಲ್ಮಶಗಳು ಸಂಪೂರ್ಣವಾಗಿ ಹೋದ ಬಳಿಕ ಹಿಟ್ಟನ್ನು ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿ ಡಬ್ಬಿಯಲ್ಲಿ ತುಂಬಿಸಿಟ್ಟುಕೊಂಡು ಬೇಕಾದಾಗ ಉಪಯೋಗಿಸಿಕೊಳ್ಳಬಹುದು.

**ಏನೆಲ್ಲ ಔಷಧೀಯ ಗುಣಗಳಿವೆ?**

ಹೆಚ್ಚಿನವರು ಗೆಡ್ಡೆಯನ್ನು ಬೇಯಿಸಿ ಸೇವಿಸುವುದನ್ನು ನಾವು ಕಾಣಬಹುದಾಗಿದೆ.ಇನ್ನು ಇದರಲ್ಲಿ ಏನೇನು ಪೌಷ್ಟಿಕಾಂಶಗಳಿವೆ ಎನ್ನುವುದನ್ನು ನೋಡುವುದಾದರೆ ಪಿಷ್ಠ, ಸಕ್ಕರೆ, ಮೇದಸ್ಸು, ಲವಣಗಳು ಸಾಕಷ್ಟು ಪ್ರಮಾಣದಲ್ಲಿದೆ. ಆಮಶಂಕೆ, ಉರಿಮೂತ್ರ, ಗೆನೋರಿಯಾ(ಶುಕ್ಲದೋಷ), ವಿಷಮ ಶೀತಜ್ವರ, ಅಲ್ಸರೇಶನ್, ಮೂಲವ್ಯಾಧಿ, ಜಠರಾಮ್ಲ ಮುಂತಾದ ಕಾಯಿಲೆಯಿಂದ

ಆರೋಗ್ಯ ಭಾಗ್ಯ



ಬಳಲುವವರು ಬಾರ್ಲಿ ನೀರಿನಂತೆಯೇ ಇದನ್ನು ಸೇವಿಸಬಹುದು. ಅಥವಾ ಗಂಜಿ ಮಾಡಿ ಅದಕ್ಕೆ ಹಾಲು, ಸಕ್ಕರೆ, ಸೇರಿಸಿ ಊಟದ ಸಮಯದಲ್ಲಿ ರೋಗಿಗೂ ನೀಡಬಹುದಾಗಿದೆ. ಹೊಟ್ಟೆಯ ಅಸ್ವಸ್ಥತೆ, ಅತಿಸಾರ ಮತ್ತು ಜೀರ್ಣಕ್ರಿಯೆಯ ಸಮಸ್ಯೆಗಳನ್ನು ಕಡಿಮೆ ಮಾಡಲು ಇದು ಸಹಕಾರಿ. ಇದು ಜೀರ್ಣಿಸಿಕೊಳ್ಳಲು ಸುಲಭವಾಗಿರುವುದರಿಂದ ಮತ್ತು ಎದೆಹಾಲು ಬತ್ತಿದಾಗ ಪರ್ಯಾಯವಾಗಿ ಶಿಶುಗಳಿಗೆ ಬಳಸಬಹುದು. ಗೋಧಿ ಅಥವಾ ಇತರ ಧಾನ್ಯಗಳಿಗೆ ಅಲರ್ಜಿ ಇರುವವರಿಗೆ ಇದು ಅತ್ಯುತ್ತಮ ಪರ್ಯಾಯ ಆಹಾರ. ಇದರಲ್ಲಿ ಪೋಷಕಾಂಶಗಳಾದ ಕಾರ್ಬೋಹೈಡ್ರೇಟ್, ಪ್ರೋಟೀನ್, ಮತ್ತು ನಾರಿನಂಶಗಳಿದ್ದು, ದೇಹಕ್ಕೆ ಶಕ್ತಿ ನೀಡುತ್ತದೆ. ಏಲಕ್ಕಿಯೊಂದಿಗೆ ಮಿಶ್ರ ಮಾಡಿದ ಕೂವೆಯ/ ಆರೋರೊಟ್ ಪಾನೀಯ ಸೇವಿಸುವುದರಿಂದ ಹೊಟ್ಟೆಯನ್ನು ತಂಪಾಗಿಸುವುದಲ್ಲದೆ, ಆಹಾರದಂತೆಯೂ ವರ್ತಿಸುವುದು. ದೇಹದ ಉಷ್ಣತೆಯನ್ನು ಶಮನಗೊಳಿಸುವುದು. ಗೋಡಂಬಿ, ಏಲಕ್ಕಿ, ದ್ರಾಕ್ಷಿ ಹಾಕಿ ತಯಾರಿಸಿದ ಹಲ್ವಾ ಬಹಳ ರುಚಿಯಾಗಿರುತ್ತದೆ. ಇದನ್ನು ಮಕ್ಕಳಿಂದ ಮುದಕರವರೆಗೂ ಸೇವಿಸಬಹುದು. ಗೆಡ್ಡೆಯಿಂದ ಹಿಟ್ಟನ್ನು ಬೇರ್ಪಡಿಸುವ ಸಂದರ್ಭ ಉಳಿಯುವ ಜಿಗುಟನ್ನು ಗೊಬ್ಬರವಾಗಿಯೂ ಉಪಯೋಗಿಸಬಹುದು.

### ಆರೋರೂಟ್ ಪುಡಿಯೊಂದಿಗೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು


**ಆರೋರೂಟ್ ಪುಡಿಯನ್ನು ಸುರಕ್ಷಿತವೆಂದು ಪರಿಗಣಿಸಲಾಗುತ್ತದೆ; ಆದಾಗ್ಯೂ, ಹೆಚ್ಚಿನ ಪ್ರಮಾಣದಲ್ಲಿ ಇದರ ಸೇವನೆಯ ಬಗ್ಗೆ ಸಾಕಷ್ಟು ಮಾಹಿತಿ ಇಲ್ಲ. ಹಾಗಾಗಿ ದೊಡ್ಡ ಪ್ರಮಾಣದಲ್ಲಿ ಆರೋರೂಟ್ ಅಥವಾ ಯಾವುದೇ ಗಿಡಮೂಲಿಕೆ ಪೂರಕಗಳನ್ನು ತೆಗೆದುಕೊಳ್ಳುವ ಮೊದಲು ನೀವು ಅರ್ಹ ವೈದ್ಯರನ್ನು ಸಂಪರ್ಕಿಸಬೇಕು. ಅರ್ಹ ವೈದ್ಯರನ್ನು ಸಂಪರ್ಕಿಸದೆ ಆಧುನಿಕ ಔಷಧದ ನಡೆಯುತ್ತಿರುವ ಚಿಕಿತ್ಸೆಯನ್ನು ಆಯುರ್ವೇದ/ಗಿಡಮೂಲಿಕೆಗಳ ತಯಾರಿಕೆಯೊಂದಿಗೆ ನಿಲ್ಲಿಸಬೇಡಿ ಅಥವಾ ಬದಲಾಯಿಸಬೇಡಿ.ಆರೋರೂಟ್ ಪುಡಿಯನ್ನು ಸೇವಿಸಿದ ನಂತರ ನೀವು ಯಾವುದೇ ಅಡ್ಡಪರಿಣಾಮಗಳನ್ನು ಗಮನಿಸಿದರೆ ನಿಮ್ಮ ವೈದ್ಯರನ್ನು ಸಂಪರ್ಕಿಸಿ ಸ್ವಯಂ-ಔಷಧಿ ಮಾಡಬೇಡಿ.**

---

## ಪದ ಬಂಧ

ಜ್ಯೋತಿ ರಾಜೇಶ್





### ಎಡದಿಂದ ಬಲಕ್ಕೆ


2. ತುಂಡು ಬಟ್ಟೆಗಳನ್ನು ಕೂಡಿಸಿ ಹೊಲಿದ ದಪ್ಪನೆಯ ದುಪ್ಪಟಿ......(2)
5. ಚರ್ಮಕ್ಕೆ ಕಿರಿಕಿರಿ ಮಾಡುವ ನವೆ ಹಿಂದುಮುಂದಾಗಿದೆ.....(3)
6. ನಾವು ಕಲಿಯುತ್ತಲೇ ಇರಬೇಕಾದ ಈ ಕಾಲ.....(4)
8. ಪ್ರಾಣ ತೆಗೆಯಲೂ ಅಂಜದ ಕಠಿಣ ಹೃದಯದವರು.....(4)
10. ತೋಳುಳ್ಳ ಮೇಲಂಗಿ ಹಿಂದುಮುಂದಾಗಿದೆ.....(2)11. ಕೈ ಮಣಿಕಟ್ಟಿನ ಸುತ್ತ ಕಟ್ಟುವ ಅರಿಶಿನ ಬೇರಿನ ಜೊತೆಗಿನ ದಾರ.....(3)
12. ಈಗ ಕಡಿತವಾಗುತ್ತಿರುವ ಕನ್ನಡದ ಫೈಲ್..... (3)
13. ಇದೊಂದು ರೀತಿಯ ಕಾವ್ಯ ವಾಚನದ ಕಲೆ.....(3)
15. ಕಪಿ ಅಲ್ಲ ಇದು, ಮಧುರವಾಗಿ ಉಲಿಯುವ ಪಕ್ಷಿ.....(2)
17. ಇದು ಕಾನನದಲ್ಲಿರುವ ಪಾಪದ ಪ್ರಾಣಿಯೆ?.....(4)
19. ಸಂಜೆ ಕಾಫಿ/ಟೀ ಜೊತೆ ತಿನ್ನಲು ಬಯಸುವ ತಿಂಡಿ.....(4)
21. ಇದೊಂದು ಜನಪದ ನೃತ್ಯಕಲೆ.....(3)
22. ಇದು ತುಂಬಿದ್ದರೆ ತುಳುಕುವುದಿಲ್ಲಾ.....(2)

### ಮೇಲಿನಿಂದ ಕೆಳಕ್ಕೆ.....

1. ಕಾವೇರಿ ನದಿ ಧುಮುಕುವಲ್ಲಿ, ಕುರಿ ದಾಟುವಷ್ಟೇ ಸ್ಥಳವಿರುವ, ಕರ್ನಾಟಕದ ಒಂದು ಪ್ರೇಕ್ಷಣೀಯ ವಿಹಾರ ಸ್ಥಳ.....(4)
2. ಇದೊಂದು 'ಕುತೂಹಲ' ಮೂಡಿಸಿದ ಶಬ್ದ.....(3)
3. ಮಾಡುವ ಕೆಲಸ, ಪಡೆಯುವ ಸಂಬಳ....ಎರಡಕ್ಕೂ ಒಂದೇ ಹೆಸರು....(2)
4. ಇದು ಕರಾವಳಿಯ ಕಡೆಯ ಭೂತಾರಾಧನೆ.....(2)
6. ಕರುನಾಡಿನಲ್ಲಿರುವ ದನದ ಕೂಸು......(2)
7. ಹಾಡುಗಾರನಿವ.....(3)
9. .....ನಿಮ್ಮ ಆಯ್ಕೆಯ ಪದ ಬರೆಯಿರಿ.... ಇಂದಿನ ಪದಬಂಧದ ವಿಶೇಷ ಗಮನಿಸಿ.....(5)
14. ಕಲಸುಮೇಲೋಗರವಾದ ಕರುಣೆ.....
16. ಕಾಯಿ ಚಿಪ್ಪಿನ ಜೊತೆ ಬಂದ ಪಂಚತಂತ್ರದಲ್ಲಿನ ಪ್ರಾಣಿ.....(4)
17. ಪೂರ್ಣದಲ್ಲಿ ನಾಲ್ಕನೇ ಒಂದರ ಭಾಗ.....ನಮ್ಮ ದೇಹದ ಅಂಗವೂ ಹೌದು.....(2)
18. ಕೊಡದ ತುಂಬ ತಂದ, ಎಣ್ಣೆಯಲ್ಲಿ ಕರಿದ ತಿಂಡಿ.....(3)
19. ಅಂಕುಶದಲ್ಲಿರುವ ಶ್ರೀರಾಮ ಸುತ.....(2)
20. ಬಣ್ಣ, ಪ್ರಾಣಿ ಎರಡೂ ಒಂದೇ ಶಬ್ದದಲ್ಲಿ.....(2)

---

# " ನಿಮ್ಮ ಸಂಗಾತಿಗಿಂತಲೂ ಬೆಸ್ಟ್ ಫ್ರೆಂಡ್ ಬೇಕೇ....?



✍ಹಿರಿಯೂರು ಪ್ರಕಾಶ್.

ನೀವು ನಿಮ್ಮ ಆಫ್ಫೀಸು, ಕಂಪನಿ ಅಥವಾ ಕಚೇರಿಯ ಕೆಲಸದ ಬಿಜಿ ಶೆಡ್ಯೂಲ್ ನಲ್ಲಿದ್ದಾಗ ಅಥವಾ ಯಾವುದೋ ನಿತ್ಯ ವ್ಯವಹಾರದಲ್ಲಿ ನಿರತರಾಗಿದ್ದಾಗ ಅನೇಕ ಫೋನ್ ಕಾಲ್ ಗಳನ್ನು ರಿಸೀವ್ ಮಾಡುತ್ತಲಿರುತ್ತೀರಿ. ಅಂಥಾ ಸಂದರ್ಭಗಳ ಮಧ್ಯೆ ಒಂದೊಮ್ಮೆ ಮನೆಯಿಂದ ನಿಮ್ಮ ಸಂಗಾತಿಯ ಕರೆ ಬಂದಾಗ ಅದಕ್ಕೆ ಇತರೆ ಕರೆಗಳಿಗೆ ತೋರುವ ಕುತೂಹಲ, ಆಸಕ್ತಿ ಅಥವಾ ಫೋಕಸ್ ಇರಲು ಸಾಧ್ಯವೇ ... ?

Of course, ಇದಕ್ಕೆ ಉತ್ತರ ವಿಭಿನ್ನವಾಗಿಯೇ ಇರುತ್ತೆ. ಆದರೆ ಸಾಮಾನ್ಯವಾಗಿ ಬಹಳಷ್ಟು ಕೇಸುಗಳಲ್ಲಿ ಅಂತಹ ಸಮಯದಲ್ಲಿ ಇತರರ ಕರೆಗಳಿಗೆ ತೋರುವ ಅರ್ಧಭಾಗದ ಆಸಕ್ತಿಯನ್ನೂ ತೋರದೇ ಯಾಂತ್ರಿಕವಾಗಿ ರಿಸೀವ್ ಮಾಡಿ.....

" ಈಗ ಬಿಜಿ ಇದೀನಿ ಏನಾದ್ರೂ ಇದ್ರೆ ಅರ್ಜೆಂಟ್ ಹೇಳು, ಇಲ್ಲಾಂದ್ರೆ ನಾನೇ ಫ್ರೀಯಾದಾಗ ಕರೆ ಮಾಡುವೆ" ಎಂತಲೋ...

" ಏನಮ್ಮಾ...... ಎಷ್ಟು ಸಾರಿ ಹೇಳ್ತೀನಿ ಈ ಸಮಯದಲ್ಲಿ ಕಾಲ್ ಮಾಡ್ಬೇಡಾ ಅಂತ....ಆದ್ರೂ ಅರ್ಥ ಆಗೋಲ್ಲ ನಿನಗೆ. ಓಕೆ , ಅದೇನು ಬೇಗ ಹೇಳು, ಇಲ್ಲ ಸಂಜೆ ಮನೆಗೆ ಬಂದಾಗ ಮಾತಾಡೋಣ.".... ಎನ್ನುತ್ತಲೋ ಅವರು ಮಾತನ್ನು ಆರಂಭಿಸಲು ಅವಕಾಶ ಕೊಡದೆಯೇ ತೀರ್ಮಾನ ಕೊಟ್ಟಿರುತ್ತೇವೆ. !

ಕೆಲವರು ಸಂಗಾತಿಯ ಕರೆ ರಿಸೀವ್ ಮಾಡುವ ಮುನ್ನವೇ ಮನದಲ್ಲೇ " ಏನ್ ತಲೆ ತಿಂತಾಳ್ರೀ .....ಈಗಷ್ಟೇ ಮನೆಯಿಂದ ಬರುವಾಗ ಎಲ್ಲಾ ಮಾತನಾಡಿ ಬಂದಿದ್ದೇನೆ. ಮತ್ತೇ ಫೋನ್ ಮಾಡಿದ್ದಾಳೆ "..... ಎಂದು ಗೊಣಗುತ್ತಲೇ ಕರೆ ಸ್ವೀಕರಿಸೋದೂ ಉಂಟು !

ಆದರೆ ಅದೇ ಸಮಯದಲ್ಲಿ ಸಾಕಷ್ಟು ಅಫ್ಫಿಷಿಯಲ್ ಅಥವಾ ಅನಫ್ಫಿಷಿಯಲ್ ಕರೆಗಳೂ ಬರುತ್ತಲಿರುತ್ತವೆ. ಆದರೆ ಅವೆಲ್ಲವೂ ಮುಖ್ಯವಿರಲೀ....ಬಿಡಲೀ ಸ್ವಲ್ಪವೂ ಬೇಸರಿಸಿಕೊಳ್ಳದೇ ತಾಳ್ಮೆಯಿಂದಲೇ ಸ್ವೀಕರಿಸಿ ಉತ್ತರಿಸುತ್ತೇವೆ. ಅದಕ್ಕೆ ಕಾರಣಗಳು ಉದ್ದೇಶಗಳು ಸಾವಿರವಿದ್ದಿರಬಹುದು...ಆ ಮಾತು ಬೇರೆ !

ಈ ರೀತಿಯ ದೃಶ್ಯಾವಳಿಗಳು ಸಾಮಾನ್ಯವಾಗಿ ಮದುವೆಯಾಗಿ ಕೆಲವು ವರ್ಷಗಳಾಗಿರುವ ಜೋಡಿಗಳಲ್ಲಿದ್ದರೆ, ತೀರಾ ಇತ್ತೀಚೆಗಷ್ಟೇ ಮದುವೆಯಾದ ಯುವಜೋಡಿ ಮಾತ್ರ ಇದಕ್ಕಿಂತ ಸ್ವಲ್ಪ ಡಿಫ್ಫರೆಂಟಾಗಿ ರಿಯಾಕ್ಟ್ ಮಾಡಬಹುದು. ಅಲ್ಲಿಗೆ ಒಂದಂಶ ಪಕ್ಕಾ ಆಗಿದ್ದೇನೆಂದರೆ ಇತರೆ ಫೋನ್ ಕಾಲ್ ಗಳನ್ನು ಆಸಕ್ತಿಯಿಂದ ಸ್ವೀಕರಿಸುವ ನಾವು ಮನೆಯಿಂದ ಬರುವ ಫೋನ್ ಕರೆಗಳನ್ನು ಅವು ಮುಖ್ಯವಲ್ಲದ, ತಲೆ ತಿನ್ನುವ ಅಥವಾ ಬೇಡವಾದ ಕರೆಗಳೆಂಬಂತೆ ಅನಾಮತ್ತು ಟ್ರೀಟ್ ಮಾಡುತ್ತೇವೆ ಅಥವಾ ಇನ್ನೂ ಒಂದರ್ಥದಲ್ಲಿ ಹೇಳಬೇಕೆಂದರೆ ಅವರನ್ನು " ಟೇಕನ್ ಫಾರ್ ಗ್ರಾಂಟೆಡ್ " ಎಂಬಂತೆ ವ್ಯವಹರಿಸುತ್ತೇವೆ.

ಇದು ಎಲ್ಲರಿಗೂ ಅನ್ವಯಿಸದಿದ್ದರೂ ಕೆಲವರಾದರೂ ತಮ್ಮ ಸಂಗಾತಿ ಅಥವಾ ಮನೆಯವರ ಕರೆಗಳ ಬಗೆಗೆ ಹೀಗೆ ಅನೇಕ ಸಂಧರ್ಭದಲ್ಲಿ ವರ್ತಿಸುವುದುಂಟು. !

( ಇಲ್ಲಿ ಸಂಗಾತಿ ಎಂಬುದನ್ನು ಗಂಡ -ಹೆಂಡತಿ ಇಬ್ಬರಿಗೂ ಸಮಾನವಾಗಿ ಅನ್ವಯಿಸಲಾಗಿದೆ. )

ಸಾಮಾನ್ಯವಾಗಿ ಮದುವೆಯಾಗಿ ಐದಾರು ವರ್ಷವಾಯಿತೆಂದರೆ ಸಾಕು, ಸಂಗಾತಿಯೆಡೆಗಿನ ಮೊದಲಿದ್ದ ಜೀವನೋತ್ಸಾಹ , ಅದೇ ಕುತೂಹಲ, ಅದೇ ಆಸಕ್ತಿ ಎಲ್ಲವೂ ಮನದೊಳಗೆ ಇದ್ದರೂ ಅದು ಅವರ ವರ್ತನೆಯಲ್ಲಿ ವ್ಯಕ್ತವಾಗದು. ಅಂದರೆ ಮನದ ಮೂಲೆಯಲ್ಲೆಲ್ಲೋ ಒಂದೆಡೆ ಸಂಗಾತಿಯೆಡೆಗೆ "ಚಲ್ತಾ ಹೈ" ಆಟಿಟ್ಯೂಡ್ ಅನ್ನೋದು ಒಬ್ಬರಿಗರಿವಿಲ್ಲದಂತೆಯೇ ಬೈ ಡೀಫಾಲ್ಟ್ ಮನದೊಳಗೇ ಸೇರಿಬಿಟ್ಟಿರುತ್ತದೆ. ಹೀಗಾಗಿಯೇ ಆಕೆಯ/ ಆತನ ಮಾತುಗಳು, ಸಲಹೆಗಳು, ಉಪದೇಶಗಳು ಅಥವಾ ಮಾರ್ಗದರ್ಶನಗಳೆಲ್ಲವೂ ಒಂಥರಾ ಸ್ಟೀರಿಯೋ ಟೈಪ್ ಆಗಿ ಮನದಲ್ಲಿ ರೆಕಾರ್ಡ್ ಆಗಿ ಕೂತು ಆ ತರಹದ ನೀರಸ ಫೀಲಿಂಗಿನಲ್ಲಿ ಆಟವಾಡಿಸಬಹುದು. !

ಇನ್ನೂ ಬಿಡಿಸಿ ಹೇಳಬೇಕೆಂದರೆ ತನ್ನ ಬಾಳ ಸಂಗಾತಿ ಇತರೆಯವರ ಮಾತಿಗೆ ತೋರಿಸೋ ಸಹಜ ಆಸಕ್ತಿ, ಕುತೂಹಲ, ನೀಡುವ ಬೆಲೆ , ಮಹತ್ವ ಇವುಗಳು ತನ್ನ ವಿಷಯದಲ್ಲಿ ಸವಕಲಾದಂತೆ ಆಕೆಗೆ ಅನಿಸುವಂತಾದಾಗ ತಾನೊಂಥರಾ " ಅಮುಖ್ಯ " ಎನಿಸಿ ಸಂಸಾರದ ಸರಿಗಮದಲ್ಲಿ ಕೆಲವೊಮ್ಮೆ ಅಪಸ್ವರಗಳು ಏಳಲಿಕ್ಕೂ ಅವು ಕಾರಣವಾಗಬಹುದು !

ಆಲ್ ರೈಟ್, ಏಳಲಿ ಬಿಡಿ..... ಎಂತಹಾ ಅಪಸ್ವರಗಳಾದರೂ ಅದನ್ನು ಸುಸ್ವರವನ್ನಾಗಿಸುವ ಜಾಣ್ಮೆ, ಕಲೆ ಅನ್ನೋದು ಇದ್ದಾಗ ಹಾಗೂ



ಪರಸ್ಪರ ಭಾವನೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ನಂಬಿಕೆ ಹಾಗೂ ಹೊಂದಾಣಿಕೆ ಸ್ಟ್ರಾಂಗ್ ಆಗಿದ್ದಾಗ ನೀರಲ್ಲಿ ರಾಡಿಯಂತೇಳುವಂತಹಾ ಸನ್ನಿವೇಶಗಳು ದೊಡ್ಡ ಸಮಸ್ಯೆಯೇನಲ್ಲ. ಅವು ತಾವಾಗಿಯೇ ನಿಧಾನಕ್ಕೆ ನಿರ್ಮಲವಾಗಬಲ್ಲವು !

ನಾವೆಲ್ಲಾ ಯಾರಿಗಾಗಿ, ಏತಕ್ಕಾಗಿ ಅಷ್ಟೆಲ್ಲಾ ರಿಸ್ಕ್ ತೆಗೆದುಕೊಂಡು ದುಡಿಯುತ್ತೇವೆಯೋ ಗೊತ್ತಿಲ್ಲ, ಒಟ್ಟಾರೆ ಬಿಡುವಿಲ್ಲದ ಕೆಲಸ, ಹೆಚ್ಚಿನ ಕೌಟುಂಬಿಕ ಜವಾಬ್ದಾರಿ, ಅಸಂಖ್ಯಾತ ಫ್ರೆಂಡ್ಸ್ ಸರ್ಕಲ್, ನಮ್ಮದೇ ಆದ ಪ್ರವೃತ್ತಿ, ಮನರಂಜನೆಯ ದಾರಿ, ವಯಸ್ಸಾದಂತೆಲ್ಲಾ ಹೆಂಡತಿಯ ಪ್ರೀತಿಯಿಂದ ಮಕ್ಕಳ ಭವಿಷ್ಯದೆಡೆಗೆ ಡೀವಿಯೇಟ್ ಆಗುವ ಟೋಟಲ್ ಫೋಕಸ್, ಹಾಗೂ ಇವೆಲ್ಲದಕ್ಕೂ ಕಳಶವಿಟ್ಟಂತೆ ಅಂಗೈಯಲ್ಲಿ ಸದಾ ಕುಣಿಯುವ ಮೊಬೈಲ್ ಎಂಬ ಮಾಯಾಂಗಿನಿಯ ಪಾಶ. ಬಹುತೇಕ ಈ ಎಲ್ಲಾ ಬಿಜಿ ಅಂಶಗಳಿಂದ ಪಕ್ಕದಲ್ಲಿದ್ದರೂ ಮನದನ್ನೆಯ ಮೌಲ್ಯದ ಅರಿವು, ಆಗಬೇಕಾದಷ್ಟು ಪ್ರಮಾಣದಲ್ಲಿ ಆಗಿರಲಾರದು ಅಥವಾ ಆಗಿದ್ದರೂ ಅದು ಮುನ್ನೆಲೆಗೆ ಬಂದಿರಲಾರದು. !

ಹೀಗೆ ಮಾಡುವಾಗ ಸಂಸಾರದ ಬಂಡಿಯಲ್ಲಿ, ಮನೋರಮೆಯೊಂದಿಗೆ ಇಂತಹಾ ಮನೋಭಾವದಿಂದ ಸಾಗುವಾಗ ನಾವು ಒಂದು ವಿಷಯವನ್ನು ಮರೆತು ಪಕ್ಕಕ್ಕೆ ಸರಿಸಿಬಿಡುತ್ತೇವೆ. ಅದೇನು ಗೊತ್ತಾ..? ನಮ್ಮ ಜೀವನದ ಬೆಸ್ಟ್ ಫ್ರೆಂಡು ಅವಳೇ/ನೇ ಎಂಬ ಸಿಂಪಲ್ ಥಾಟ್ ಪ್ರಾಸೆಸ್ ! ಈ ಬಗ್ಗೆ ಯಾರಿಗೂ ಗೊತ್ತಿಲ್ಲವೆಂದಲ್ಲ. ಆದರೆ ಗೊತ್ತಿದ್ದೋ ಗೊತ್ತಿಲ್ಲದೆಯೋ ನಮ್ಮ ನಮ್ಮ ಬಿಜಿ ಶೆಡ್ಯೂಲಿನಲ್ಲಿ ಪಕ್ಕಕ್ಕೆ ಸರಿದುಹೋಗುವ ಅನೇಕ ಸಂಗತಿಗಳಲ್ಲಿ " ಸಂಗಾತಿಯ ನಿರ್ಲಕ್ಷ್ಯ " ಕೂಡಾ ಒಂದು. ಹೀಗೆ ಮಾಡುವಾಗ ನಮ್ಮಲ್ಲಿ ಬಹುತೇಕರಿಗೆ ಕೆಲ ವ್ಯಕ್ತಿಗಳ ಅಥವಾ ವಸ್ತುಗಳ ತಕ್ಕ ಬೆಲೆ ಅವು ಸನಿಹದಲ್ಲಿದ್ದಾಗ ಬಿಲ್ ಕುಲ್ ಗೊತ್ತಾಗೋದೇ ಇಲ್ಲ.

ಅಸಲಿಗೆ ಒಂದು ಐತಿಹಾಸಿಕ ಸತ್ಯವೇನು ಗೊತ್ತಾ !ಮನುಷ್ಯನ ದೇಹಕ್ಕೆ ವಯಸ್ಸಾದಂತೆಲ್ಲಾ, ಪ್ರಾಪಂಚಿಕ ಅನುಭವ ಹೆಚ್ಚಾದಂತೆಲ್ಲಾ, ನಿಧಾನಕ್ಕೆ ಆತನಿಗೆ ನನ್ನವರು ತನ್ನವರು ಯಾರೆಂಬ ಬಗೆಗೆ ಸ್ಪಷ್ಟ ಚಿತ್ರಣ ದೊರೆಯುವಂತಾದಾಗ, ಒಟ್ಟಾರೆಯಾಗಿ ಜಗತ್ತು ಏನೆಂದು ಅರಿವಿಗೆ ಬಂದಾಗ ಮಾತ್ರ ತನ್ನ ಸಂಗಾತಿಯ ಬೆಲೆ, ಮೌಲ್ಯ, ಮಹತ್ವ....ಬೇಡವೆಂದರೂ ನಿಧಾನಕ್ಕೆ ಬೆಳಕಿಗೆ ಬರುತ್ತದೆ. ಅವಳ/ನ ಸಲಹೆ, ಸಹಕಾರ, ಸಮಯಕ್ಕೆ ತಕ್ಕಂತೆ ನೀಡಿದ ಉಪದೇಶ, ಸದಾ ಸಂಗಾತಿಯೆಡೆಗಿರುವ ಒಲವು ಇವೆಲ್ಲವೂ ಪರಸ್ಪರ ಸಾಮಿಪ್ಯದ ಗಟ್ಟಿ ಬಾಂಡೇಜ್‌ನ ಅತಿದೊಡ್ಡ ಮೌಲ್ಯವೆನಿಸಿಬಿಡುತ್ತದೆ. ಮೇಲಾಗಿ ಜೀವನದಲ್ಲಿ ಅಲ್ಲಿಯವರೆಗೂ ಸಿಕ್ಕ ಸ್ನೇಹ- ಬಂಧುತ್ವವೆಲ್ಲಾ ಕೇವಲ ಆ ಹಂತದಲ್ಲಿ ಉಕ್ಕಿಸಿದ ಜೋಷ್ ಅಥವಾ ಆ ಸಂಧರ್ಭದಲ್ಲಿ ಟೆಂಪೊರೆರಿ ಖುಷಿ ಕೊಡುವ ಓಪನ್ ಮಾಡಿದ ಬಿಯರ್ ಬಾಟಲ್ ನಂತಿದ್ರೆ , ಮನದನ್ನೆಯ ಸ್ನೇಹವೆಂಬುದು ಹಳೆಯ ವೈನಿನಂತೆ ತನ್ನ ಪ್ರಾಮುಖ್ಯವನ್ನು ಹೆಚ್ಚಿಸಿಕೊಳ್ಳುತ್ತಲೇ ಹೋಗುತ್ತದೆ. ಆಗಮಾತ್ರ "ಜೋಷ್" ಗಿಂತ "ಹೋಷ್" ಹೆಚ್ಚು ಕೆಲಸ ಮಾಡಬಲ್ಲದೆಂಬ ನೈಜ ತಿಳಿವಳಿಕೆಯೂ ಮೂಡುತ್ತದೆ.


ಮೈಂಡ್ ಯೂ....ನಿಮ್ಮ ಕಷ್ಟಕ್ಕೆ ಹೆಗಲಾಗಲು, ಕಣ್ಣೀರಿಗೆ ಆಸರೆಯಾಗಲು, ನೋವಿಗೆ ದನಿಯಾಗಲು, ನಗುವಿಗೆ ಮಗುವಾಗಲು, ಸಮಸ್ಯೆಗಳಿಗೆ ಸಮಾಧಾನವಾಗಲು, ಇಡೀ ಜಗತ್ತೇ ನಿಮಗೆದುರಾಗಿ ನಿಂತಾಗ ನಿಮ್ಮ ಪಕ್ಕದಲ್ಲಿ ಕೈಹಿಡಿದು ನಿಂತು ಬೆಚ್ಚನೆಯ ಭರವಸೆ ತುಂಬಲು ಇರುವ ಏಕ ಮಾತ್ರ ಫ್ರೆಂಡು ಅದು...ನಿಮ್ಮ ಸಂಗಾತಿ ಮಾತ್ರವೇ. !

ಬಾಳ ಸಂಗಾತಿಯ ಮಹತ್ವವನ್ನರಿಯಲು ವಯಸ್ಸಾಗುವವರೆಗೂ ಕಾಯುವುದೇಕೆ ? ಈಗಲೇ ಹೇಳಿಬಿಡಿ...

"ಒಲವೇ ನಿನ್ನ ಗೆಲುವೊಂದೇ ಬಲವೆನ್ನುತ ನಾ ಬೆರೆವೆ".

**ಮರೆಯುವ ಮುನ್ನ:** ನಾನು ಬಹಳಷ್ಟು ಜನರನ್ನು ಹತ್ತಿರದಿಂದ ನೋಡಿದ್ದೇನೆ, ನೋಡುತ್ತಲೇ ಇದ್ದೇನೆ, ಅವರಿವರ ಬಾಯಿಂದ ಕೇಳಿದ್ದೇನೆ. ಒಬ್ಬ ವ್ಯಕ್ತಿ ಜೀವನದಲ್ಲಿ ಎಲ್ಲರಿಂದ ಮೋಸ ಹೋದಾಗ ಅಥವಾ ಪ್ರಮುಖರೆನಿಸಿದವರು, ಆಪ್ತರೆನಿಸಿದವರು, ನಂಬಿದವರೆಲ್ಲಾ ಕೈಕೊಟ್ಟಾಗ ಕೊನೆಗೆ ಅವನಿಗೆ ನೆನಪಾಗುವುದೇ ಆತನ ಸಂಗಾತಿಯ ಸೇಫ್ ಸಾಮೀಪ್ಯ.

ವಾಸ್ತವ ವರ್ತಮಾನ



ವಿಪರ್ಯಾಸವೆಂದರೆ ಎಲ್ಲವೂ ಎಲ್ಲರೂ ಚೆನ್ನಾಗಿದ್ದಾಗ ಈ ಫೀಲಿಂಗ್ ಬರೋದು ಕಡಿಮೆ. ವಯಸ್ಸು ಮಾಗಿದಂತೆಲ್ಲಾ ಸಂಗಾತಿಯೆಂದರೆ ಸೇಫ್ ಝೋನ್ ಎಂಬ ಜ್ಞಾನೋದಯ ನಿಧಾನಕ್ಕೆ ಬಲವಾಗುತ್ತದೆ. ಏಕೆಂದರೆ ಈ ನಂಬಿಕೆಯಡಿಯಲ್ಲಿ ಸುಳ್ಳು, ಮೋಸ, ವಂಚನೆ, ಕಪಟ ಇವುಗಳ ಭಯವಿರಲಾರದು ಅಥವಾ ಕೆಲವರಲ್ಲಿ ಇದ್ದರೂ ಅದರ ಎಫೆಕ್ಟು ಅತೀ ಕಡಿಮೆ. ಇವುಗಳ ಜಾಗದಲ್ಲಿ ದೇಹವೆರೆಡು ಪ್ರಾಣವೊಂದೇ ಎಂಬ ಭಾವನಾತ್ಮಕ ಬೆಸುಗೆ ಬಲವಾಗಿ ಅಂಟಿಕೊಂಡಿರಬಲ್ಲದು !

ಎಂದೋ ಯಾವಾಗಲೋ ವರ್ಷಗಳುರುಳಿದ ನಂತರ ಸಂಗಾತಿಯ ಮಹತ್ವ ಅರಿತುಕೊಳ್ಳುವ ಸಂಧರ್ಭಕ್ಕೆ ಕಾಯುವ ಬದಲು, ತೆರೆದ ಹೃದಯದಿಂದ ಮುಕ್ತ ಮನದಿಂದ ನಿಮ್ಮೊಲವಿನ ಬಲವೇನೆಂಬುದನ್ನು ಅರಿತಲ್ಲಿ, ಆ ಒಲವಲ್ಲಿ ಪರಸ್ಪರ ನಂಬಿಕೆಯ, ಹೊಂದಾಣಿಕೆಯ ಬಲವೂ ಬೆರೆತಲ್ಲಿ ಬದುಕೆಂಬುದು ಸದಾ ಹಸಿರು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,